ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಿನ್ನರ್ ವಿಂಬಲ್ಡನ್ ವಿನ್ನರ್

ವಿಶ್ವದ ನಂಬರ್ ಒನ್ ಶ್ರೇಯಾಂಕಿತ ಇಟಲಿಯ ಜಾನಿಕ್ ಸಿನ್ನರ್ ವಿಂಬಲ್ಡನ್ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಗೆದ್ದು ಚೊಚ್ಚಲ ವಿಂಬಲ್ಡನ್ ಕಿರೀಟ ಗೆದ್ದುಕೊಂಡಿದ್ದಾರೆ. ಲಂಡನ್‌ನ ವಿಂಬಲ್ಡನ್ ಸೆಂಟರ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಸಿನ್ನರ್ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು 4-6, 6-4, 6-4, 6-4 ಸೆಟ್‌ಗಳಿಂದ ಸೋಲಿಸಿದರು. ಈ ಮೂಲಕ ಅಲ್ಕರಾಜ್ ಕನಸು ಭಗ್ನವಾಯಿತು.

ಸಮಾಚಾರ ಸಣ್ಣದಲ್ಲ

ಸುದ್ದಿ ವಾಹಿನಿ ಸಿಬ್ಬಂದಿ ಮೇಲೆ ಹಲ್ಲೆ: ಬಂಧನ

ಅಪರಾಧ ಸುದ್ದಿಗಳು

ಬೆಂಗಳೂರು: ಖಾಸಗಿ ಸುದ್ದಿ ವಾಹಿನಿ ಸಿಬ್ಬಂದಿ ಭವಿತ್ ದೋಣಗುಡಿಗೆ (42) ಎಂಬವರ ಮೇಲೆ ಬಿಯರ್ ಬಾಟಲಿಯಿಂದ ಹಲ್ಲೆ ಮಾಡಿದ್ದ ವಿಜಯ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಸುಬ್ರಹ್ಮಣ್ಯ ನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಜುಲೈ 10ರ ರಾತ್ರಿ ರಾಜಾಜಿನಗರದ ಖಾಸಗಿ ಹೋಟೆಲ್‌ನಲ್ಲಿ ಘಟನೆ ನಡೆದಿತ್ತು. ಡಾ.ರಾಜ್ ಕುಮಾರ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ಹೊಸ ಸಿನಿಮಾಗಳ ಘೋಷಣೆ ಕಾರ್ಯಕ್ರಮದಲ್ಲಿ ಭವಿತ್ ಹಾಗೂ ವಿಜಯ್ ಭಾಗಿಯಾಗಿದ್ದರು. ಕಾರ್ಯಕ್ರಮ ಮುಗಿದ ಬಳಿಕ ಆಯೋಜಿಸಲಾಗಿದ್ದ ಪಾರ್ಟಿಯಲ್ಲಿ ಇಬ್ಬರ ನಡುವೆ ಗಲಾಟೆಯಾಗಿದೆ.

ಈ ವೇಳೆ ಮಾತಿಗೆ ಮಾತು ಬೆಳೆದು ಸ್ಥಳದಲ್ಲಿದ್ದ ಬಿಯರ್ ಬಾಟಲ್ ಒಡೆದ ವಿಜಯ್, ಭವಿತ್ ಕುತ್ತಿಗೆಯ ಭಾಗಕ್ಕೆ ಚುಚ್ಚಿದ್ದಾನೆ. ನಂತರ ಭವಿತ್‌ನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರೆದಿದೆ. ಭವಿತ್ ಅವರ ಸ್ನೇಹಿತರೊಬ್ಬರು ನೀಡಿದ ದೂರಿನನ್ವಯ ಸುಬ್ರಹ್ಮಣ್ಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹತ್ಯೆ ಯತ್ನ ಆರೋಪದಡಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ವೈದ್ಯಕೀಯ ಶಿಕ್ಷಣ ಇಲಾಖೆ ನೆರಳಡಿಯೇ ನಡೆಯುತ್ತಿವೆ ಹಲವು ಅಕ್ರಮ | ಅರ್ಹರ ನೇಮಕಕ್ಕೆ ಸರಕಾರ ವಿಫಲ

ಬಿಎಂಸಿಆರ್‌ಐ: ಆಡಳಿತಯಂತ್ರ ಕುಸಿತ!

ವಿಶ್ವವಾಣಿ ವಿಶೇಷ ಬೆಂಗಳೂರು

ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಯಾವುದೂ ಸರಿಯಿಲ್ಲ ಪದೇ ಪದೇ ಸಾಬೀತಾಗುತ್ತಿದೆ. ಇಲಾಖೆ ವ್ಯಾಪ್ತಿಯಲ್ಲಿನ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಅಡಿ ಬರುವ ಆಸ್ಪತ್ರೆಗಳ ಗೋಳು ಕೇಳುವವರಿಲ್ಲವಾಗಿದ್ದಾರೆ.

ಅಧಿಕಾರ ದುರ್ಬಳಕೆ, ಅಕ್ರಮ ಸೇವಾ ಬಡ್ತಿ, ವೈದ್ಯಕೀಯ ನಿರ್ಲಕ್ಷ್ಯ ಸೇರಿ ಹಲವಾರು ಅಕ್ರಮಗಳು ವೈದ್ಯಕೀಯ ಶಿಕ್ಷಣ ಇಲಾಖೆ ನೆರಳಡಿ ನಡೆಯುತ್ತಿವೆ. ಆದರೂ ಈವರೆಗೂ ಯಾವುದೇ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ. ಇದಲ್ಲದೆ, ಬಿಎಂಸಿಆರ್‌ಐನಲ್ಲಿ ಕಳೆದ ಮೂರು ವರ್ಷಗಳಿಂದ ನಿರ್ದೇಶಕರ ಹುದ್ದೆಯನ್ನು ಪ್ರಭಾರದಲ್ಲೇ ನಿರ್ವಹಿಸಲಾಗುತ್ತಿದೆ. ನಿಯಮದ ಪ್ರಕಾರ ಪ್ರಭಾರಿ ಹುದ್ದೆಗಳನ್ನು ಕೇವಲ 6 ತಿಂಗಳ ಅವಧಿಗೆ ನೀಡಲಾಗುತ್ತದೆ. ಆದರೆ ಬಿಎಂಸಿಆರ್‌ಐ ಸೇರಿ ಕೆಲ ಸಂಸ್ಥೆಗಳಲ್ಲಿ 2-3 ವರ್ಷಗಳಿಗೂ ಹೆಚ್ಚು ಅವಧಿಗೆ ಪ್ರಭಾರಿಗಳನ್ನೆ ಮುಂದುವರಿಸಿಕೊಂಡು ಬರುತ್ತಿರುವ ಸರಕಾರ ನಿರ್ದಿಷ್ಟ ಅವಧಿಗೆ ಸೂಕ್ತ ಹಾಗೂ ಅರ್ಹ ನಿರ್ದೇಶಕರನ್ನು ನೇಮಕ ಮಾಡುವಲ್ಲಿ ವಿಫಲವಾಗಿದೆ.

ಸರಕಾರದ ಈ ನಡೆಯಿಂದ ವೈದ್ಯಕೀಯ ಕಾಲೇಜು ಸಂಸ್ಥೆಗಳಲ್ಲಿ ಅರಾಜಕತೆ ತಾಂಡವಾಡುತ್ತಿದೆ. ಇದರಿಂದ ವೈದ್ಯಕೀಯ ಸೇವೆಗಳಲ್ಲಿ ವ್ಯತ್ಯಯ ಉಂಟಾಗುತ್ತಿದ್ದು, ಬಡ ರೋಗಿಗಳು ಚಿಕಿತ್ಸೆಗೆ ಪರದಾಡುವಂತಾಗಿದೆ. ಸಂಸ್ಥೆಯ ಅಡಿಯಲ್ಲಿ ವಿಕ್ಟೋರಿಯಾ, ಮಿಂಟೋ ಕಣ್ಣಿನ ಆಸ್ಪತ್ರೆ,

ಎಮರ್ಜೆನ್ಸಿ ಟ್ರಾಮಾ ಸೆಂಟರ್, ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ), ವಾಣಿವಿಲಾಸ ಸೇರಿ ಹಲವು ಆಸ್ಪತ್ರೆಗಳು ಬರಲಿವೆ. ಸಂಸ್ಥೆಯ ಆಡಳಿತ ಮತ್ತು ಸೇವಾ ನಿಯಮಗಳಲ್ಲಿನ ಉಲ್ಲಂಘನೆಯಿಂದಾಗಿ ಈ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸೇವೆ ಒದಗಿಸಬೇಕಾದ ತಜ್ಞ ವೈದ್ಯರು ಕೋರ್ಟ್ ಮೆಟ್ಟಿಲೇರಿದ್ದಾರೆ. ಇದೆಲ್ಲವನ್ನೂ ತಿಳಿದಿದ್ದರೂ ವೈದ್ಯಕೀಯ ಶಿಕ್ಷಣ ಇಲಾಖೆ ಸೂಕ್ತ ಪರಿಹಾರ ಒದಗಿಸುವ ಬದಲು ಪರಿಸ್ಥಿತಿಯನ್ನು ಮತ್ತಷ್ಟು ಕ್ಲಿಷ್ಟಗೊಳಿಸುತ್ತಿದೆ ಎನ್ನುವುದು ವೈದ್ಯರ ವಾದ.

ಕೋರ್ಟ್‌ಗೆ ವೈದ್ಯರು, ರೋಗಿಗಳ ಪರದಾಟ: ಹೊಸ ನಿರ್ದೇಶಕರ ನೇಮಕ ಮಾಡುವಲ್ಲಿ ಇಲಾಖೆ ವಿಫಲವಾಗಿರುವುದರಿಂದ ಹಾಗೂ ಅಲ್ಲಿನ ಅವ್ಯವಸ್ಥೆ ಹಾಗೂ ಅರಾಜಕತೆಯ ವಿರುದ್ಧ ವೈದ್ಯರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಅದರಲ್ಲೂ ಬಿಎಂಸಿಆರ್‌ಐನಲ್ಲಿ ವೈದ್ಯರ ಬಡ್ತಿ ಮತ್ತು ಸೇವಾ ಹಿರಿತನಕ್ಕೆ ಸಂಬಂಧಿಸಿದ ಪಟ್ಟಿಯಲ್ಲಿ ಅಕ್ರಮ ನಡೆದಿದೆ. ಅರ್ಹರಿಗೆ ಅನ್ಯಾಯವಾಗುತ್ತಿರುವ ಬಗ್ಗೆ ನ್ಯಾಯಾಲಯದಲ್ಲಿ ಹೋರಾಟ ಮಾಡಲು ಸಜ್ಜಾಗಿದ್ದಾರೆ. ಇದರ ಪರಿಣಾಮ ರೋಗಿಗಳ ಮೇಲಾಗುತ್ತಿದ್ದು, ಅವ್ಯವಸ್ಥೆಗಳ ನಡುವೆಯೇ ಚಿಕಿತ್ಸೆ ಪಡೆಯುವ ಅನಿವಾರ್ಯ ಸ್ಥಿತಿ ರೋಗಿಗಳ ಮುಂದಿದೆ.

ಸರಕಾರಿ ಸಂಬಳ, ಖಾಸಗಿ ಸೇವೆ: ಇಲಾಖೆಯೇ ಸಾಥ್

ಸರಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಯಾದ ನೆಫ್ರೋ ಯುರಾಲಜಿ ಸಂಸ್ಥೆಯಲ್ಲಿನ ಐವರು ವೈದ್ಯರು ಕರ್ತವ್ಯದ ಅವಧಿಯಲ್ಲಿ ಖಾಸಗಿಯಾಗಿ ಬೇರೆಡೆಗೆ ವೈದ್ಯಕೀಯ ವೃತ್ತಿ ನಡೆಸುತ್ತಿರುವುದು ಲೋಕಾಯುಕ್ತ ಪೊಲೀಸರ ತನಿಖೆಯಿಂದ ದೃಢಪಟ್ಟಿದ್ದು, ಕ್ರಮ ಕೈಗೊಳ್ಳುವಂತೆ ಸರಕಾರಕ್ಕೆ ವರದಿ ಸಲ್ಲಿಕೆಯಾಗಿದೆ. ನೆಫ್ರೋ ಯುರಾಲಜಿ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಪ್ರದೀಪ್, ಸಹಾಯಕ ಪ್ರಾಧ್ಯಾಪಕರಾದ ಡಾ.ಶ್ರೀಧರ್, ಡಾ.ಕಿಶನ್, ಸಹ ಪ್ರಾಧ್ಯಾಪಕ ಡಾ.ಶಿವಕುಮಾರ್ ಹಾಗೂ ಪ್ರಾಧ್ಯಾಪಕ ಶ್ರೀನಿವಾಸ್ ಅವರು ವಿಚಾರಣೆಗೆ ಒಳಪಟ್ಟಿದ್ದರು. ಇವರು ಖಾಸಗಿ ಆಸ್ಪತ್ರೆಗಳಲ್ಲಿಯೂ ಕಾರ್ಯನಿರ್ವಹಿಸುತ್ತಿರುವುದ ರಿಂದ ರೋಗಿಗಳಿಗೆ ಸಮಸ್ಯೆಯಾಗುತ್ತಿದೆ ಯೆಂದು ವರದಿಯಲ್ಲಿ ಹೇಳಲಾಗಿದ್ದು, 12(3) ಲೋಕಾಯುಕ್ತ ಕಾಯಿದೆ 1984 ರ ಕಾಯಿದೆಯಡಿ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿದೆ. ಆದರೂ ವೈದ್ಯಕೀಯ ಶಿಕ್ಷಣ ಇಲಾಖೆ ತನಿಖಾ ವರದಿಯನ್ನೆ ಮರೆಮಾಚಿದೆ.

ತನಿಖೆ ಹಲವು: ಕ್ರಮ ಶೂನ್ಯ

- ನೆಫ್ರೋ ಯುರಾಲಜಿ 5 ವೈದ್ಯರು ಖಾಸಗಿಯಲ್ಲಿ ಸೇವೆ ಹಾಗೂ ಅವ್ಯವಹಾರ ಕುರಿತು ಲೋಕಾಯುಕ್ತ ಅಂತಿಮ ವರದಿ ಅನ್ವಯ ಕ್ರಮವಿಲ್ಲ.
- ಪ್ರಾಧ್ಯಾಪಕ ಹುದ್ದೆ ನೇಮಕಾತಿ ಸಂಬಂಧ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಅಕ್ರಮ ಬಡ್ತಿ.
- ಸಂಜಯ್‌ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ಪ್ರಶ್ನೆ ಪತ್ರಿಕೆ ತಿದ್ದುಪಡಿ ಪ್ರಕರಣ.

ನಿಯಮ ಉಲ್ಲಂಘಿಸಿ ನೇಮಕ

- ವಿಕ್ಟೋರಿಯಾ ಸಂಸ್ಥೆಯ ಆವರಣದಲ್ಲಿರುವ ಇನ್ಸಿಟ್ಯೂಟ್ ಆಫ್ ಗ್ಯಾಸ್ಟ್ರೋಎಂಟ್ರಾಲಜಿ ಆಸ್ಪತ್ರೆಯಲ್ಲಿ ನಿಯಮ ಉಲ್ಲಂಘಿಸಿ ಒಬ್ಬರನ್ನೆ ನಿರ್ದೇಶಕ ಹುದ್ದೆಯಲ್ಲಿ ಮುಂದುವರಿಸುತ್ತಿರುವುದು.
- ರಾಜೀವ್‌ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ಬೈಲಾ ಉಲ್ಲಂಘಿಸಿ 10 ವರ್ಷ ಪ್ರಾಧ್ಯಾಪಕ ಸೇವೆ ಸಲ್ಲಿಸದ ಅನರ್ಹರನ್ನು ನಿರ್ದೇಶಕರನ್ನಾಗಿ ನೇಮಕ.
- ನೆಫ್ರೋ ಯುರಾಲಜಿ ನಿರ್ದೇಶಕರ ನೇಮಕದಲ್ಲಿ ಸಂದರ್ಶನ ನಡೆಸದೆ ನೇರವಾಗಿ ನೇಮಕಾತಿ ಆದೇಶ ನೀಡಿರುವುದು.

50ನೇ ವಯಸ್ಸಿನಲ್ಲಿ ತಾಯ್ತನದ ಸಾಧನೆ

ಬೆಂಗಳೂರು: ಎಲ್ಲಾ ವೈದ್ಯಕೀಯ ಸವಾಲುಗಳನ್ನು ಮೀರಿ ಬೆಂಗಳೂರಿನ 50 ವರ್ಷದ ಮಹಿಳೆ ಕಿಶೋರಿ (ಹೆಸರು ಬದಲಾಯಿಸಲಾಗಿದೆ) ಆರೋಗ್ಯವಂತ ಹೆಣ್ಣುಮಗುವಿಗೆ ಜನ್ಮ ನೀಡುವ ಮೂಲಕ ತಾಯ್ತನದ ಅಪೂರ್ವ ಸಾಧನೆ ಮಾಡಿದ್ದಾರೆ.

ಋತುಚಕ್ರದ ಅಂತ್ಯದ ಹಂತ ತಲುಪಿದಾಗಲೂ, ದೃಢ ಛಲ, ವೈದ್ಯಕೀಯ ಪರಿಣತಿ ಮತ್ತು ಅಚಲ ನಂಬಿಕೆಯಿಂದ ಈ ಅಸಾಧ್ಯವನ್ನು ಸಾಧ್ಯವಾಗಿಸಿದ್ದಾರೆ. ಕಿಶೋರಿ ಅವರಿಗೆ ಟೈಪ್ 2 ಮಧುಮೇಹ, ದೀರ್ಘಕಾಲದ ಅಧಿಕ ರಕ್ತದೊತ್ತಡ ಮತ್ತು ಬೊಜ್ಜು ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳಿದ್ದವು. ಇದು ಅವರ ಗರ್ಭಧಾರಣೆಯನ್ನು ಅತಿ ಹೆಚ್ಚು ಅಪಾಯಕಾರಿಯನ್ನಾಗಿಸಿತ್ತು. ಶೇ.0.03 ಕ್ಕಿಂತ ಕಡಿಮೆ ಸಂಭವನೀಯತೆಯ ಈ ಯಶಸ್ವಿ ಗರ್ಭಧಾರಣೆಯನ್ನು, ಮಿಲನ್ ಫರ್ಟಿಲಿಟಿ ಆಸ್ಪತ್ರೆಯ ಹಿರಿಯ ಸ್ತ್ರೀರೋಗ ತಜ್ಞೆ ಡಾ. ವಾರಿಣಿ ಎನ್ ಅವರ ನೇತೃತ್ವದಲ್ಲಿ, ಬಹು-ಶಿಸ್ತಿನ ವೈದ್ಯಕೀಯ ತಂಡವು ಯಶಸ್ವಿಯಾಗಿ ನಿರ್ವಹಿಸಿದೆ.

ಐವಿಎಫ್ ಮೂಲಕ ಗರ್ಭಧರಿಸಿದ ಕಿಶೋರಿ ಅವರ ಆರೋಗ್ಯವನ್ನು ಮೊದಲ ತ್ರೈಮಾಸಿಕದಿಂದಲೇ ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಯಿತು. ರಕ್ತದಲ್ಲಿನ ಸಕ್ಕರೆ ಮತ್ತು ರಕ್ತದೊತ್ತಡವನ್ನು ನಿಯಂತ್ರಿಸಲಾಯಿತು. ಮಾನಸಿಕ ಆರೋಗ್ಯ ಬೆಂಬಲವನ್ನೂ ಒದಗಿಸಲಾಯಿತು.

ಪ್ರಸವದ ಸಮಯದಲ್ಲಿ ಅಧಿಕ ರಕ್ತಸ್ರಾವದ ಅಪಾಯ ವಿದ್ದರೂ, ವೈದ್ಯಕೀಯ ತಂಡದ ನಿಖರ ಯೋಜನೆ ಮತ್ತು ಆರೈಕೆಯಿಂದ 2.8 ಕೆಜಿ ತೂಕದ ಆರೋಗ್ಯವಂತ ಹೆಣ್ಣುಮಗುವಿಗೆ ಯಶಸ್ವಿಯಾಗಿ ಸಿಸೇರಿಯನ್ ಮೂಲಕ ಜನ್ಮ ನೀಡಲಾಯಿತು.

HCG
adding life to years

HEALTHCARE GLOBAL ENTERPRISES LIMITED

Regd Off: HCG Towers, # 8, P Kalinga Rao Road, Sampangi Rama Nagar, Bangalore – 560027
CIN: L15200KA1998PLC023489, **Phone**: +91– 80 – 4660 7700, **Fax**: +91– 80– 2248 5962
Email: investors@hcgel.com; **Website**: www.hcgoncology.com

Recommendations of the Committee of Independent Directors ("**IDC**") of HealthCare Global Enterprises Limited (the "**Target Company**") to the Public Shareholders of the Target Company in relation to the Open Offer (*hereinafter defined*) made by Hector Asia Holdings II Pte. Ltd. ("**Acquirer**") together with Hector Asia Holdings I Pte. Ltd. ("**PAC 1**"), KKR Asia IV Fund Investments Pte. Ltd. ("**PAC 2**") and KIA EBT II Scheme 1 ("**PAC 3**") (PAC 1, PAC 2, PAC 3, collectively "**PACs**"), in their capacity as persons acting in concert with the Acquirer for the purpose of the Open Offer, pursuant to and in compliance with Regulation 26(7) of Securities and Exchange Board of India (Substantial Acquisition of Shares and Takeovers) Regulations 2011 ("**SEBI SAST Regulations**")

1.	Date	July 12, 2025
2.	Name of the Target Company (TC)	HealthCare Global Enterprises Limited
3.	Details of the Offer pertaining to TC	The Open Offer is being made by the Acquirer along with the PACs to the Public Shareholders of the Target Company under Regulation 3 (1), Regulation 4 and other applicable regulations of SEBI SAST Regulations for acquisition of up to 3,70,90,327 (three crores seventy lakhs ninety thousand three hundred and twenty-seven) fully paid-up equity shares of face value of INR 10 (Indian Rupees Ten) each ("**Equity Shares**") from the Public Shareholders of the Target Company, representing 26.00% (twenty-six per cent) of the Expanded Voting Share Capital (*as defined in the Offer Documents*) at a price of INR 504.41 (Indian Rupees Five Hundred and Four point Four One) per Equity Share (the "**Offer Price**"), aggregating to total consideration of INR 1870,87,31,842.07 (Indian Rupees One Thousand Eight Hundred Seventy Crores Eighty-Seven Lakhs Thirty-One Thousand Eight Hundred and Forty Two point Zero Seven) payable in cash. The public announcement dated February 23, 2025 (the "**PA**"), the detailed public statement dated March 1, 2025 published on March 3, 2025 (the "**DPS**"), the draft letter of offer dated March 10, 2025 (the "**DLoF**") and the Letter of Offer dated July 10, 2025 (the "**LoF**") (PA, DPS, DLoF and LoF collectively referred to as "**Offer Documents**" issued by Kotak Mahindra Capital Company Limited, the Manager to the Open Offer (the "**Manager**") on behalf of the Acquirer and PACs.
4.	Name(s) of the acquirer and PAC with the acquirer	**Acquirer** (i) Hector Asia Holdings II Pte. Ltd. **Persons Acting in Concert** (i) Hector Asia Holdings I Pte. Ltd. (ii) KKR Asia IV Fund Investments Pte. Ltd. (iii) KIA EBT II Scheme 1
5.	Name of the Manager to the offer	Kotak Mahindra Capital Company Limited Address: 27BKC, 1st Floor, Plot No. C-27, 'G' Block, Bandra Kurla Complex, Bandra (East), Mumbai - 400 051 Contact Person: Mr. Ganesh Rane Tel. No.: +91 22 6218 5905 Fax No.: +91 22 6713 2447 Email: hcg.openoffer@kotak.com SEBI Registration Number: INM000008704
6.	Members of the Committee of Independent Directors (Please indicate the chairperson of the Committee separately)	(i) Mr. Pradip M Kanakia - Chairperson (ii) Ms. Geeta Mathur - Member (iii) Mr. Rajagopalan Raghavan - Member (iv) Mr. Rajiv Maliwal - Member All the Members of the IDC were present at the meeting and the recommendations were unanimously approved by the IDC Members.
7.	IDC Member's relationship with the TC (Director, Equity shares owned, any other contract / relationship), if any	IDC Members are Non-Executive Independent Directors of the Target Company. None of the IDC Members holds any equity shares or other securities or has entered into any other contract/relationship with the Target Company except as directors on the board of the Target Company and as member(s)/chairperson(s) of the board committees.
8.	Trading in the Equity shares/other securities of the TC by IDC Members	None of the IDC Members has traded in equity shares/other securities of the Target Company, during the period of 12 (twelve) months prior to the date of PA and since then till the date of this recommendation.
9.	IDC Member's relationship with the Acquirer (Director, Equity shares owned, any other contract / relationship), if any.	None of the IDC Members: (i) is a director of the Acquirer or PACs; (ii) holds any equity shares/other securities in the Acquirer or PACs or; (iii) has any other contracts/relationship with the Acquirer or PACs.
10.	Trading in the Equity shares/other securities of the acquirer by IDC Members	None of the IDC Members has traded in equity shares/other securities of the Acquirer or PACs, during the period of 12 (twelve) months prior to the date of PA and since then till the date of this recommendation.
11.	Recommendation on the Open offer, as to whether the offer is fair and reasonable	IDC is of an opinion that the Offer Price is in accordance with the SEBI SAST Regulations and is fair and reasonable. (Refer 12 below)
12.	**Summary of reasons for recommendation** (IDC may also invite attention to any other place, e.g. company's website, where its detailed recommendations along with written advice of the independent adviser, if any can be seen by the shareholder)	IDC has perused the PA, DPS, DLoF, LoF issued in relation to the Open Offer by the Manager to the Open Offer on behalf of the Acquirer and the PACs, and particularly noted the following, while making the recommendation: (i) the equity shares of the Target Company are frequently traded in terms of Regulation 2(1)(j) of the SEBI SAST Regulations. (ii) the volume weighted average market price per Equity Share for a period of 60 (sixty) trading days immediately preceding the date of the PA as traded on the National Stock Exchange of India Limited ("NSE") during such period and such shares being frequently traded is INR 504.41 (Indian Rupees Five Hundred and Four point Four One). The maximum volume of trading in the shares of the Target Company for a period of 60 (sixty) trading days immediately preceding the date of the PA has been recorded on the NSE. (iii) The highest negotiated price per Equity Share of the Target Company for any acquisition under an agreement attracting the obligation to make a PA of an Open Offer i.e. the price per share under the share purchase agreement dated February 23, 2025 and supplementary agreement dated May 30, 2025, is INR 445 (Indian Rupees Five Hundred Forty-Five). Based on the above, the IDC is of an opinion that the Offer Price of INR 504.41 (Indian Rupees Five Hundred and Four point Four One) per equity share is in compliance with the SEBI SAST Regulations and hence is fair and reasonable. The Public Shareholders of the Target Company are, however, advised to independently evaluate the Open Offer and take informed decision whether or not to tender their shares in the Open Offer. This statement of recommendation will also be available on the website of the Target Company at www.hcgoncology.com
13.	Details of Independent Advisors, if any.	None
14.	Any other matter(s) to be highlighted	None

To the best of our knowledge and belief, after making proper enquiry, the information contained in or accompanying this statement is, in all material respect, true and correct and not misleading, whether by omission of any information or otherwise, and includes all the information required to be disclosed by the Target Company under the SEBI SAST Regulations.

For and on behalf of the Committee of Independent Directors of
HealthCare Global Enterprises Limited
Sd/-
Pradip M Kanakia
Chairman of the IDC
DIN 00770347

Date: July 12, 2025
Place: Bangalore

Adfactors 248/25

ಅಶೋಕ ಹಾಸ್ಯಗಾರರ ಕೃತಿ ಯಕ್ಷಗಾನಕ್ಕೆ ಆಕರ ಗ್ರಂಥ: ರಾಜು ಅಡಕಳ್ಳಿ

ದಶರೂಪಗಳ ದಶಾವತಾರ ಕೃತಿ ಡಾಕ್ಟರೇಟ್‌ಗೆ ಅರ್ಹ

ಬೆಂಗಳೂರು: ಅಶೋಕ ಹಾಸ್ಯಗಾರ ಅವರ ದಶರೂಪಗಳ ದಶಾವತಾರ ಕೃತಿ ಡಾಕ್ಟರೇಟ್ ಪಡೆಯಲು ಅರ್ಹವಾಗಿದೆ ಎಂದು ಪತ್ರಕರ್ತ ರಾಜು ಅಡಕಳ್ಳಿ ಹೇಳಿದರು.

ಲೆಕ್ಕಾಧಿಕಾರಿಗಳ ಸಂಘ ಕಚೇರಿಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಶ್ರಾಂತ ಸಂಪಾದಕ ಅಶೋಕ ಹಾಸ್ಯಗಾರ ಅವರು ಹತ್ತು ವರ್ಷಗಳ ಸತತ ಅಧ್ಯಯನ, ಪರಿಶ್ರಮದಿಂದ ದಶರೂಪಗಳ ದಶಾವತಾರ ಕೃತಿ ರಚಿಸಿದ್ದಾರೆ. ಯಕ್ಷಗಾನಕ್ಕೆ ಇದೊಂದು ಆಕರ ಗ್ರಂಥ ಆಗುವುದರಲ್ಲಿ ಸಂಶಯವಿಲ್ಲ. ಅಶೋಕ ಹಾಸ್ಯಗಾರ ಅವರು ಸ್ವಚ್ಛ, ಪ್ರಾಮಾಣಿಕ, ಬದ್ಧತೆಯುಳ್ಳ, ಸಂಪಾದಕರಾಗಿದ್ದರು. ಅವರ ಈ ಕೃತಿಗೆ ಸಮ್ಮಾನ ದೊರೆತಿರುವುದು ಸಂತಸದ ವಿಷಯವಾಗಿದೆ. ಹಾಗೂ ದಿನೇಶ ಉಪ್ಪೂರ ಅವರ ಪ್ರವಾಸ ಕಥನ, ಕಥಾ ಸಂಕಲನಗಳು ಹೆಚ್ಚು ಪ್ರಸಿದ್ಧವಾಗಿದ್ದರು, ಅವರಿಗೆ ಸಿಗಬೇಕಾದ ಮನ್ನಣೆ ಸಿಗದಿರುವುದು ಬೇಸರ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುಮಾರಿ ತುಳಸಿ ಹೆಗಡೆ ಅವರು ವಿಶ್ವಶಾಂತಿ ಸಂದೇಶದ ವಿಶ್ವಾಭಿಗಮನಮ್ ಪ್ರಸ್ತುತಪಡಿಸಿದರು. ನಿವೃತ್ತ ಲೆಕ್ಕಾಧಿಕಾರಿ ದಿನೇಶ್ ಉಪ್ಪೂರ ಅವರನ್ನು ಹಾಗೂ ಅಶೋಕ ಹಾಸ್ಯಗಾರ ಅವರನ್ನು ಸನ್ಮಾನಿಸಲಾಯಿತು. ಗಿಂಡಿಮನೆ ಮೃತ್ಯುಂಜಯ, ಯಕ್ಷಗಾನ ವಿದ್ವಾಂಸ ಡಾ. ಆನಂದ ರಾಮ ಉಪಾಧ್ಯ, ಎಸ್.ಆರ್. ವಿಜಯಶಂಕರ್, ಉಮೇಶ ಶಿರೂರ್, ಗಾಯತ್ರಿ ರಾಘವೇಂದ್ರ, ಪ್ರಭಾಕರ ಗಂಗೊಳ್ಳಿ, ಸಿದ್ದಣ್ಣ ಸೊನ್ನದ, ಸಂಘದ ಹಿರಿಯ ಸದಸ್ಯರಾದ ರಾಮಚಂದ್ರ ರೆಡ್ಡಿ, ಕೆಂಪೇಗೌಡ, ಉಲಿಗೆ ಸ್ವಾಮಿ, ಸುಧಾ, ಗೀತಾ ಹೆಗಡೆ, ಗೀತಾ ಸಭಾಹಿತ, ನಿತ್ಯಾನಂದಪ್ಪ, ಚರಣ್ ಕುಮಾರ್, ಎಸ್.ಜೆ.ಕೃಷ್ಣಮೂರ್ತಿ, ವಿಶಾಲಾಕ್ಷಿ ಶರ್ಮ, ಎಸ್.ಶಂಕರ್, ವಾಸುದೇವ ಕಾರಂತ್ ಉಪಸ್ಥಿತರಿದ್ದರು.

ಲೆಕ್ಕಾಧಿಕಾರಿಗಳ ಸಂಘ ಕಚೇರಿಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ನಿವೃತ್ತ ಲೆಕ್ಕಾಧಿಕಾರಿ ದಿನೇಶ್ ಉಪ್ಪೂರ ಅವರನ್ನು ಸನ್ಮಾನಿಸಲಾಯಿತು.

ಪ್ರತಿಭಾ ಪುರಸ್ಕಾರ: ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಂಗ ಸಂಸ್ಥೆಯಾದ ಬೆಂಗಳೂರು ನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು (ಬಿಯುಡಬ್ಲ್ಯೂಜೆ) ತನ್ನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಪತ್ರಿಕಾ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದೆ. ಕಳೆದ ಶೈಕ್ಷಣಿಕ ವರ್ಷದ (2024-25) ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 80ರಿಂದ 90% ಅಂಕ ಗಳಿಸಿದ (ಇತ್ತೀಚೆಗೆ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಕೆಯುಡಬ್ಲ್ಯೂಜೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪುರಸ್ಕೃತರಾಗದೆ ಇರುವವರಿಗೆ) ಬೆಂಗಳೂರು ನಗರ ಜಿಲ್ಲಾ ಸಂಘದ ಸದಸ್ಯರು ತಮ್ಮ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಬಹುದು.

ಶಾಲೆ/ಕಾಲೇಜಿ ನಿಂದ ಮುಖ್ಯಸ್ಥರು ದೃಢೀಕರಿಸಿದ ವಿದ್ಯಾರ್ಥಿಗಳ ಅಂಕಪಟ್ಟಿಯ ಪ್ರತಿ, ಬೆಂಗಳೂರು ನಗರ ಜಿಲ್ಲೆಯ (ಬಿ.ಎಲ್.ಆರ್ ಸಂಖ್ಯೆಯ) 31-03-2026ಕ್ಕೆ ಕೊನೆಗೊಳ್ಳುವ 2025-26ನೇ ವರ್ಷದ ಸದಸ್ಯತ್ವ ಕಾರ್ಡ್‌ನ ಝೆರಾಕ್ಸ್ ಪ್ರತಿ ಆಧಾರ್ ಕಾರ್ಡ್ ಪ್ರತಿಗಳು ಕಡ್ಡಾಯ.ದಾಖಲೆಗಳನ್ನು ಜುಲೈ-20ರೊಳಗೆ ಕಳುಹಿ ಸಬೇಕಾದ ವಿಳಾಸ: ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಮೂರನೇ ಮಹಡಿ, ಕಂದಾಯ ಭವನ, ಬೆಂಗಳೂರು-560009. ಸಂಪರ್ಕ ಸಂಖ್ಯೆ: 9448333996.

3 ವರ್ಷದ ಎಲ್‌ಎಲ್‌ಬಿಗೆ ಅವಕಾಶ ಕೋರಿದ ಲಿಂಗತ್ವ ಅಲ್ಪಸಂಖ್ಯಾತೆ

ಹೈಕೋರ್ಟ್ ಸುದ್ದಿಗಳು

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷದಿಂದ 3 ವರ್ಷದ ಎಲ್‌ಎಲ್‌ಬಿ ಪದವಿಗೆ ಪ್ರವೇಶ ಕಲ್ಪಿಸುವಂತೆ ಕೋರಿ ಲಿಂಗತ್ವ ಅಲ್ಪಸಂಖ್ಯಾತೆ ಸಲ್ಲಿಸಿರುವ ಅರ್ಜಿಯ ಸಂಬಂಧ ಆಕ್ಷೇಪಣೆ ಸಲ್ಲಿಸುವಂತೆ ಭಾರತೀಯ ರಾಷ್ಟ್ರೀಯ ಕಾನೂನು ಶಾಲೆ (ಎನ್‌ಎಲ್‌ಎಸ್‌ಐಯು)ಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ರಾಜ್ಯ ಸರಕಾರ ಸೂಕ್ತ ನೀತಿ ರೂಪಿಸುವವರೆಗೆ ತೃತೀಯ ಲಿಂಗಿಗಳಿಗೆ ಶೇ.0.5ರಷ್ಟು ಸೀಟುಗಳನ್ನು ಮೀಸಲಿಡುವಂತೆ ಏಕಸದಸ್ಯ ಪೀಠ ನೀಡಿದ್ದ ಆದೇಶ ಪ್ರಶ್ನಿಸಿ ಎನ್‌ಎಲ್‌ಎಸ್‌ಐಯು ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸುತ್ತಿದ್ದ ನ್ಯಾಯಮೂರ್ತಿ ಎಸ್.ಜಿ. ಪಂಡಿತ್ ಮತ್ತು ನ್ಯಾಯಮೂರ್ತಿ ಟಿ.ಎಂ.ನದಾಫ್ ಅವರಿದ್ದ ವಿಭಾಗೀಯ ಪೀಠಕ್ಕೆ ಲಿಂಗತ್ವ ಅಲ್ಪಸಂಖ್ಯಾತೆಯೊಬ್ಬರು ಮಧ್ಯಂತರ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ಸಂಬಂಧ ಆಕ್ಷೇಪಣೆ ಸಲ್ಲಿಸಲು ಸೂಚನೆ ನೀಡಿದ ನ್ಯಾಯಪೀಠ, ವಿಚಾರಣೆ ಜು.17ಕ್ಕೆ ಮುಂದೂಡಿತು. ವಿಚಾರಣೆ ವೇಳೆ ಎನ್‌ಎಲ್‌ಎಸ್‌ಐಯು ಪರ ವಕೀಲರು, ಪ್ರಸಕ್ತ ವರ್ಷಕ್ಕೆ ಈಗಾಗಲೇ ಪ್ರವೇಶ ಪ್ರಕ್ರಿಯೆ ಮುಕ್ತಾಯವಾಗಿದೆ. ತರಗತಿಗಳೂ ಸಹ ಆರಂಭವಾಗಿವೆ. ಈ ಹಂತದಲ್ಲಿ ಮಧ್ಯಂತರ ಅರ್ಜಿದಾರರ ಮನವಿ ಪರಿಗಣಿಸುವುದು ಕಷ್ಟಕರ. ಆದರೂ ಸಹ ಸ್ವಲ್ಪ ಸಮಯ ನೀಡಿದರೆ ಮುಂದಿನ ವಿಚಾರಣೆ ವೇಳೆಗೆ ವಿವರವಾದ ಪ್ರಮಾಣ ಪತ್ರ ಸಲ್ಲಿಸಲಾಗುವುದು ಎಂದು ತಿಳಿಸಿದರು.

ವಿಸ್ತೃತ ಪ್ರಮಾಣಪತ್ರ ಸಲ್ಲಿಸಲು ಸೂಚನೆ: ಎನ್‌ಎಲ್‌ಎಸ್‌ಐಯು ಪರ ವಕೀಲರಿಗೆ ಪ್ರಶ್ನಿಸಿದ ನ್ಯಾಯಪೀಠ, ಯಾವಾಗ ತರಗತಿಗಳು ಆರಂಭವಾಗಿವೆ? ಪ್ರವೇಶಕ್ಕೆ ಕೊನೆಯ ದಿನಾಂಕ ಯಾವುದಾ ಗಿತ್ತು? ಎಷ್ಟು ಸೀಟುಗಳು ಇವೆ, ಅವುಗಳಲ್ಲಿ ಎಷ್ಟು ಭರ್ತಿಯಾಗಿವೆ ಮತ್ತು ಅರ್ಜಿದಾರರಿಗೆ ಈ ಸಂದರ್ಭದಲ್ಲಿ ಪ್ರವೇಶ ಮಾಡಿಕೊಳ್ಳಬಹುದೇ ಎಂಬ ಬಗ್ಗೆ ವಿಸ್ತೃತ ಪ್ರಮಾಣಪತ್ರ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿ ವಿಚಾರಣೆ ಜು.17ಕ್ಕೆ ಮುಂದೂಡಿತು.

ಅಮೆರಿಕಾದ ಡೆಟ್ರಾಯ್ಟ್ ನಗರದಲ್ಲಿ 47ನೇ ವಿಎಸ್‌ಎನ್‌ಎ ಸಮಾವೇಶ ಹಾಗೂ ಬಸವ ಜಯಂತಿ ಸಮಾರಂಭ ನಡೆಯಿತು. ಜಗದ್ಗುರು ವಚನಾನಂದ ಮಹಾಸ್ವಾಮೀಜಿ, ಕೆಎಲ್‌ಇ ಸಂಸ್ಥೆಯ ಅಧ್ಯಕ್ಷ ಪ್ರಭಾಕರ್ ಕೋರೆ, ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್, ಮಾಜಿ ಸಚಿವರಾದ ಮುರುಗೇಶ ನಿರಾಣಿ, ಶಂಕರ ಪಾಟೀಲ ಮುನೇನಕೊಪ್ಪ, ವಿಧಾನಪರಿಷತ್ ಸದಸ್ಯರಾದ ಪ್ರದೀಪ್ ಶೆಟ್ಟರ್, ಕೆ.ನವೀನ್, ವಿಎಸ್‌ಎನ್‌ಎ ಅಧ್ಯಕ್ಷ ತುಮಕೂರು ದಯಾನಂದ, ಸಮ್ಮೇಳನ ಅಧ್ಯಕ್ಷ ಮಹೇಶ ಪಾಟೀಲ್ ಉಪಸ್ಥಿತರಿದ್ದರು.

ಡ್ರಗ್ಸ್ ವಿರುದ್ಧ ಪೊಲೀಸ್ ಸಮರ

ಬೆಂಗಳೂರು: ನಗರ ಪೊಲೀಸರು ಡ್ರಗ್ಸ್ ಮಾರಾಟ ಮತ್ತು ಸೇವನೆ ವಿರುದ್ಧ ಸಮರ ಸಾರಿದ್ದಾರೆ. ಡ್ರಗ್ಸ್ ಮುಕ್ತ ಬೆಂಗಳೂರು ಮಾಡಲು ಪಣ ತೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ ಅಧಿಕಾರಿಗಳು ಮತ್ತು ಸಿಸಿಬಿ ಪೊಲೀಸರು ಜಂಟಿಯಾಗಿ ಬೆಂಗಳೂರಿನ ಪಬ್‌ಗಳ ಮೇಲೆ ದಾಳಿ ನಡೆಸಿ ವಿದೇಶಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ. ಎಫ್‌ಆರ್‌ಆರ್‌ಒ ಮತ್ತು ಸಿಸಿಬಿ ಅಧಿಕಾರಿಗಳು ಜಂಟಿಯಾಗಿ ಶನಿವಾರ (ಜುಲೈ 12) ರ ಮಹಾತ್ಮಾ ಗಾಂಧಿ ರಸ್ತೆಯಲ್ಲಿರುವ ಮಿರಾಜ್ ಪಬ್ ಮತ್ತು ಕೋರಮಂಗಲದಲ್ಲಿರುವ ಸನ್ ಬರ್ನ್ ಪಬ್ ಮೇಲೆ ದಾಳಿ ಮಾಡಿ ವಿದೇಶಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ. ಪ್ರಕರಣ ಸಂಬಂಧ ಕಬ್ಬನ್ ಪಾರ್ಕ್ ಮತ್ತು ಕೋರಮಂಗಲ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿವೆ.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಕಿರಿಯ ಶ್ರೇಣಿ) ರಾಮನಗರ
ಸಿ.ಮಿಸ್. ಸಂಖ್ಯೆ 168/2025

ಅರ್ಜಿದಾರರುಗಳು: 1. ಶ್ರೀಮತಿ, ಶಿವರತ್ನ ಕೋಂ ಪ್ರಭುಸ್ವಾಮಿ. ವಯಸ್ಸು 42 ವರ್ಷ ವಾಸ: ಸರ್ಕಾರಿ ಶಾಲೆ ಹತ್ತಿರ, ರಾಜೀವ್ ಗಾಂಧೀಪುರ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ.

ವಿರುದ್ಧ

ಪ್ರತಿಅರ್ಜಿದರರು: ಮಾನ್ಯ ತಹಶೀಲ್ದಾರರು ಮತ್ತು ಜನನ ಮತ್ತು ಮರಣ ನೊಂದಣಾಧೀಕಾರಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ,

ಪತ್ರಿಕಾ ಪ್ರಕಟಣೆಗಾಗಿ

ಸದರಿ ಅರ್ಜಿಯಲ್ಲಿನ ಅರ್ಜಿದಾರರು ಸದರಿ ಅರ್ಜಿಯನ್ನು ಅರ್ಜಿದಾರರ ಸಹೋದರನಾದ ಕುಮಾರ ಬಿನ್ ಲೇಟ್, ಎಸ್, ಪಟ್ಟಮಾದಯ್ಯ ಅವರು ದಿನಾಂಕ: 24.07.2000 ರಂದು ರಾಮನಗರ ತಾಲ್ಲೂಕು. ಕೈಲಾಂಚ ಹೋಬಳಿ, ಕುಂಬಾಪುರ ಕಾಲೋನಿ ಯಲ್ಲಿ ಮೃತಪಟ್ಟಿದ್ದು, ಸದರಿಯವರ ಮರಣ ಸಮರ್ಥನಾ ಪತ್ರವನ್ನು ಕೋರಿ ಪ್ರತಿಅರ್ಜಿದಾರರ ವಿರುದ್ಧ ಸಿ.ಮಿಸ್ ಸಂಖ್ಯೆ-168/2025 ಎಂಬ ದಾವೆ/ಅರ್ಜಿಯನ್ನು ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ. ರಾಮನಗರ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ದಾವೆಗೆ/ಅರ್ಜಿಗೆ ಸಂಬಂಧಿಸಿದಂತೆ ಯಾರಾದರೂ ಹಿತಾಸಕ್ತಿ ಉಳ್ಳವರು ಇದ್ದಲ್ಲಿ ಸದರಿ ಪ್ರಕರಣದಲ್ಲಿ ತಮ್ಮ ಹಾಜರಾತಿಗಾಗಿ ಪ್ರಕರಣವು ದಿನಾಂಕ: 13.08.2025 ರಂದು ಬೆಳಿಗ್ಗೆ 11-00 ಘಂಟೆಯ ಸಮಯಕ್ಕೆ ತಾವಾಗಿಯೇ ಆಗಲೀ ಅಥವಾ ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಖಿತ ತಕರಾರನ್ನು ಸಲ್ಲಿಸುವುದು. ತಪ್ಪಿದ್ದಲ್ಲಿ ಮಾನ್ಯ ಘನ ನ್ಯಾಯಾಲಯವು ತಾವುಗಳು ಗೈರು ಹಾಜರಾದಲ್ಲಿ ಪ್ರಕರಣವನ್ನು "ಏಕಪಕ್ಷಿಯವಾಗಿ ತೀರ್ಮಾನಿಸುತ್ತದೆ. ಎಂದು ತಿಳಿಯುವುದು.

ಈ ದಿನ ದಿನಾಂಕ 27\06\2025 ರಂದು ನನ್ನ ಸಹಿ ಮತ್ತು ಮೊಹರಿನ ಜೊತೆ ಹೊರಡಿಸಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಪ್ರಧಾನ ಕಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ರಾಮನಗರ

ವಾದಿಯ ಪರ ವಕೀಲರು
ಶಿವಸ್ವಾಮಿ,ಎಸ್, ವಕೀಲರು
ರಾಮನಗರ
ದಿನಾಂಕ: 27\06\2025

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ರವರ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಕನಕಪುರ
ಸಿ.ಮಿಸ್ ನಂ. 362/2025

ಅರ್ಜಿದಾರರು: ಶ್ರೀಮತಿ, ಜಯಮ್ಮ ಮತ್ತು ಇತರರು

ವಿರುದ್ಧ

ಪ್ರತಿಅರ್ಜಿದಾರರು: ಜನನ ಮತ್ತು ಮರಣ ನೋಂದಾಣಾಧೀಕಾರಿಗಳು ತಹಸಿಲ್ದಾರ್ ಹಾರೋಹಳ್ಳಿ ಹಾಗು ಮತ್ತೊಬ್ಬರು

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರಾದ 1 ರವರ ಗಂಡ ಹಾಗೂ ಅರ್ಜಿದಾರರಾದ 2 ರಿಂದ 4 ರವರ ತಂದೆ ಶ್ರೀ. ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ ಸುಂಡಘಟ್ಟ ಗ್ರಾಮದಲ್ಲಿ ದಿನಾಂಕ 29/01/2020 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾರು ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲಿ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ 19/08/2025 ರ ಬೆಳಗ್ಗೆ ಸರಿಯಾಗಿ 11 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು ತಪ್ಪಿದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 10/07/2025 ರಂದು ನನ್ನ ಸ್ವ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಕನಕಪುರ

ಅರ್ಜಿದಾರರ ಪರ ವಕೀಲರು
ರಮೇಶ್. ಎಸ್ & ಶ್ರೀಕಾಂತ್. ಜಿ ಜೆ
ವಕೀಲರು ಕನಕಪುರ
ಸ್ಥಳ: ಕನಕಪುರ
ದಿನಾಂಕ: 28/6/2025

ಪಾರ್ಟಿ, ಪಬ್‌ಗೆ ಹೋಗಿ ಸಮಯವಲ್ಲದ ಸಮಯಕ್ಕೆ ಮನೆಗೆ ಬರ್ತಿದ್ಲು

ಕಿರುತೆರೆ ನಟಿ ಶ್ರುತಿಗೆ ಹಲ್ಲೆ: ಕಾರಣ ಬಿಚ್ಚಿಟ್ಟ ಪತಿ



ಬೆಂಗಳೂರು: ಗಂಡ ಅನ್ನೋದು ಅವಳಿಗೆ ಲೆಕ್ಕಕ್ಕೆ ಇರಲಿಲ್ಲ. ಪಾರ್ಟಿ, ಪಬ್ ಅಂತಾ ಸುತ್ತುತ್ತಾ ಇದ್ದಳು, ತನ್ನ ಮೋಜಿನ ಜೀವನಕ್ಕಾಗಿ ಮನೆ ಭೋಗ್ಯದ ಹಣದೊಂದಿಗೆ ಪರಾರಿಯಾಗಲು ಪ್ಲ್ಯಾನ್ ಮಾಡಿದ್ದಳು ಅವಳ ಈ ವರ್ತನೆಯಿಂದ ಬೇಸತ್ತು ನಾನು ಆಕೆಯ ಮೇಲೆ ಹಲ್ಲೆ ಮಾಡಿದ್ದೆ ಎಂದು ಕಿರು ತೆರೆ ನಟಿ ಶ್ರುತಿ ಅವರ ಪತಿ ಅಮರೇಶ್ ಪೊಲೀಸರ ವಿಚಾರಣೆ ವೇಳೆ ಹೇಳಿದ್ದಾರೆ ಎಂದು ತಿಳಿದು ಬಂದಿದೆ.

ಕೆಲ ದಿನಗಳ ಹಿಂದೆ ಹನುಮಂತನಗರ ಪೊಲೀಸ್ ಠಾಣೆ ವ್ಯಾಪ್ತಿಯ ಶ್ರೀನಗರದ ಮುನೇಶ್ವರ ಬ್ಲಾಕ್‌ನಲ್ಲಿ ವಾಸಿಸುತ್ತಿದ್ದ ಕಿರು ತೆರೆ ನಟಿ ಶ್ರುತಿ ಅವರ ಮೇಲೆ ಪತಿ ಅಮರೇಶ್ ಚಾಕುವಿನಿಂದ ಹಲ್ಲೆ ನಡೆಸಿದ್ದ, ಆತನ ಹಲ್ಲೆಯಿಂದ ಆಕೆಯ ತೊಡೆ, ಮತ್ತಿತರ ಭಾಗಗಳಿಗೆ ತೀವ್ರವಾಗಿ ಗಾಯಗಳಾಗಿದ್ದರೂ ಆಕೆ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದರು. ಆಕೆ ನೀಡಿದ ದೂರಿನ ಆಧಾರದ ಮೇರೆಗೆ ಪತಿ ಅಮರೇಶ್‌ನನ್ನು ಪೊಲೀಸರು ವಶಕ್ಕೆ ಪಡೆದು ತೀವ್ರ ವಿಚಾರಣೆಗೆ ಒಳಪಡಿಸಿದ್ದರು. ವಿಚಾರಣೆ ಸಂದರ್ಭದಲ್ಲಿ ಶ್ರುತಿಯಿಂದ ತನಗೆ ಆಗಿದ್ದ ಅನ್ಯಾಯಗಳ ಬಗ್ಗೆ ಬಾಯ್ಬಿಟ್ಟಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಕೆ ಕಿರು ತೆರೆ ನಟಿಯಾಗಿದ್ದರೂ ಮನುಷ್ಯತ್ವ ಅನ್ನೋದೆ ಇರಲಿಲ್ಲ. ಆಕೆಗೆ ತಮ್ಮ ಇಬ್ಬರು ಹೆಣ್ಣು ಮಕ್ಕಳ ಬಗ್ಗೆ ಕಿಂಚಿತ್ತೂ ಕಾಳಜಿ ಇರಲಿಲ್ಲ. ಮಕ್ಕಳನ್ನು ಮನೆಯಲ್ಲೆ ಬಿಟ್ಟು ಪಬ್, ಪಾರ್ಟಿ ಅಂತಾ ಸುತ್ತುತ್ತಾ ಮಧ್ಯರಾತ್ರಿ ಮನೆಗೆ ಬರುತ್ತಿದ್ದಳು. ಮನೆಯಿಂದ ಹೊರ ಹೋದರೆ 15 ದಿನಗಳಾದರೂ ವಾಪಸ್ ಬರುತ್ತಿರಲಿಲ್ಲ ಎಂದು ಆತ ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾನೆ ಎಂದು ತಿಳಿದುಬಂದಿದೆ.

ಪರಾರಿಯಾಗಲು ಯತ್ನ

ಕುಂಭಮೇಳಕ್ಕೆ ಹೋಗಿ ಬರುತ್ತೇನೆ ಎಂದು ಹೋದ ವಳು ಬಂದಿದ್ದು 15 ದಿನಗಳ ನಂತರ ಆ ಸಂದರ್ಭದಲ್ಲಿ ನಮಿಬ್ಬರ ನಡುವೆ ಜಗಳವಾಗಿತ್ತು. ಕಾಲೇಜ್‌ಗೆ ಹೋಗುವ ಮಕ್ಕಳು ಇದ್ದ ಕಾರಣ ನಾನು 25 ಲಕ್ಷ ರು. ಗಳನ್ನು ನೀಡಿ ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್ ಒಂದನ್ನು ಭೋಗ್ಯಕ್ಕೆ ಹಾಕಿಸಿಕೊಂಡಿದ್ದೆ. ಮನೆ ಭೋಗ್ಯ ಕ್ಯಾನ್ಸಲ್ ಮಾಡಿ ಆ ಹಣದೊಂದಿಗೆ ಪರಾರಿಯಾಗಲು ಪ್ಲ್ಯಾನ್ ಮಾಡಿದ್ದಳು ಅದಕ್ಕೆ ನಾನು ಒಪ್ಪದಿದ್ದಾಗ ನನ್ನ ಮೇಲೆ ಪೊಲೀಸರಿಗೆ ದೂರು ನೀಡಿದ್ದಳು. ಇಂದಲ್ಲ ನಾಳೆ ಬುದ್ಧಿ ಕಲಿಯುತ್ತಾಳೆ ಎಂದು ನಾನು ಸುಮ್ಮನಿ ದ್ದರೂ ಆಕೆ ತನ್ನ ದುರ್ಬುದ್ಧಿ ಮುಂದುವರಿಸಿದ್ದಳು. ಇದೇ ವಿಚಾರದಲ್ಲಿ ಮತ್ತೆ ಜಗಳವಾದಾಗ ನಾನು ನನ್ನ ತಾಳ್ಮೆ ಕಳೆದುಕೊಂಡು ಆಕೆಯ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದ್ದೇನೆ ಎಂದು ಅಮರೇಶ್ ಒಪ್ಪಿಕೊಂಡಿದ್ದಾನೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

06-01-1940 / 13-07-2025

ಕೆಬಿಜಿ ಇನ್ನಿಲ್ಲ
ಮೈಸೂರು ಮಿತ್ರ ಸಂಪಾದಕರಾಗಿದ್ದ ಕೆ.ಬಿ.ಗಣಪತಿ ನಿಧನ

ಮೈಸೂರು: ಪತ್ರಿಕೋದ್ಯಮಿ, ಮೈಸೂರು ಮಿತ್ರ, ಸ್ಟಾರ್ ಆಫ್ ಮೈಸೂರು ಸಮೂಹದ ಸಂಪಾದಕರಾಗಿದ್ದ ಕೆ.ಬಿ.ಗಣಪತಿ (85) ಹೃದಯಾಘಾತದಿಂದ ಭಾನುವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಭಾನುವಾರ ಮಧ್ಯಾಹ್ನ 12ರಿಂದ ಮೈಸೂರಿನ ಕೆ.ಸಿ.ಬಡಾವಣೆ ಯಲ್ಲಿರುವ ಅವರ ನಿವಾಸದಲ್ಲಿ ಅಂತಿಮ ದರ್ಶನ ವ್ಯವಸ್ಥೆ ಮಾಡಲಾ ಗಿತ್ತು. ಚಾಮುಂಡಿ ಬೆಟ್ಟದ ತಪ್ಪಲಿನ ಸುಡುವ ಸ್ಮಶಾನದಲ್ಲಿ ಸಂಜೆ 4ಕ್ಕೆ ಅಂತ್ಯಕ್ರಿಯೆ ನಡೆಯಿತು.

ಕೆಬಿಜಿ ವಿಶೇಷ ಪುಟ → 10

ಶುಭಾಂಶು ನಾಳೆ ವಾಪಸ್

ಶುಭಾಂಶು ಶುಕ್ಲಾ ಸೇರಿ ನಾಲ್ವರು ಗಗನಯಾನಿಗಳು ಭೂಮಿಯತ್ತ ಸೋಮವಾರ ಮರುಪ್ರಯಾಣ ಕೈಗೊಳ್ಳಲಿದ್ದಾರೆ. ಕ್ಯಾಲಿಫೋರ್ನಿಯಾ ಕರಾವಳಿಯಲ್ಲಿ ಮಂಗಳವಾರ ಇಳಿಯುವ ಸಾಧ್ಯತೆ ಇದೆ.

ಹನಿ, ಹನಿಯಲ್ಲೂ ಭರವಸೆ

ಮಲೆನಾಡು ಭಾಗದಲ್ಲಿ ಉತ್ತಮ ಮಳೆ ಸುರಿಯುತ್ತಿರುವುದರಿಂದ ಕೃಷಿ ಚಟುವಟಿಕೆಗಳು ಚುರುಕುಗೊಂಡಿದ್ದು, ಭತ್ತದ ನಾಟಿ ಮಾಡಲು ಹೋಗುತ್ತಿರುವ ರೈತರೊಬ್ಬರು ಛಾಯಾ ಚಿತ್ರಗ್ರಾಹಕ ಗೋಪಿ ಜಾಲಿ ಅವರ ಕ್ಯಾಮೆರಾ ಕಣ್ಣಲ್ಲಿ ಸೆರೆಸಿಕ್ಕಿದ್ದು ಹೀಗೆ..

ಕಾಂಗ್ರೆಸ್‌ನಲ್ಲಿ ಸುರ್ಜೇವಾಲ ವಿರುದ್ಧ ಶೀತಲ ಸಮರ
ಉಸ್ತುವಾರಿ ಜತೆ ಕುಸ್ತಿ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯ ರಾಜಕಾರಣದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸ್ಥಿತಿ, ಅಧಿಕಾರ ಕಳೆದುಕೊಂಡು ಕುಳಿತಿರುವ ಬಿಜೆಪಿಗಿಂತಲೂ ಕೆಟ್ಟ ರಾಡಿಯಾತ್ತಿದೆ ಎಂದು ಕಾಂಗ್ರೆಸ್ಸಿಗರೇ ನೊಂದು ಹೇಳುತ್ತಿದ್ದಾರೆ. ಕೇವಲ ರಾಜ್ಯಾಧ್ಯಕ್ಷರನ್ನು ಬದಲಿಸಿದ ತಪ್ಪಿಗೆ ಒಳಬೇಗುದಿಯಿಂದ ಇನ್ನೂ ಬೇಯುತ್ತಿರುವ ಬಿಜೆಪಿಯನ್ನೂ ಮೀರಿಸುವಷ್ಟು ಆಂತರಿಕ ತೊಂದರೆಗೆ ಕಾಂಗ್ರೆಸ್ ಸಿಲುಕಿದೆ.

ಕಾಂಗ್ರೆಸ್ ತನ್ನಲ್ಲಿ ಎಲ್ಲವೂ ಇದ್ದರೂ ಇಲ್ಲದಂತಾಗಿದೆ. ಪಕ್ಷಕ್ಕೆ ಅಪಾರ ಶಾಸಕರ ಬಲ, ಅಧಿಕಾರ, ಜನಪ್ರಿಯತೆ ಎಲ್ಲವೂ ಇದ್ದರೂ ದಿನದಿನಕ್ಕೂ ಆಂತರಿಕ ಸಮಸ್ಯೆಗಳಿಂದಾಗಿ ವರ್ಚಸ್ಸು ನಾಶ ಮಾಡಿಕೊಳ್ಳುವ ಹಾದಿಯತ್ತ ಸಾಗುತ್ತಿದೆ. ಇದಕ್ಕೆ ಕಾರಣ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಇತ್ತೀಚೆಗಿನ ಅನಗತ್ಯ ಬೆಳವಣಿಗೆ ಹಾಗೂ ಷಡ್ಯಂತ್ರ ಎಂದು ಸ್ವತಃ ಕಾಂಗ್ರೆಸ್ ಸಚಿವರು ಮತ್ತು ಹಿರಿಯ ಶಾಸಕರೇ ಹೇಳುತ್ತಿದ್ದಾರೆ. ಅಷ್ಟಕ್ಕೂ ಇದಕ್ಕೆಲ್ಲಾ ಎಐಸಿಸಿಯ ರಾಜ್ಯ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೇವಾಲ ಅವರೇ ಕಾರಣ ಎನ್ನುತ್ತಿರುವ ಅವರು, ಇದನ್ನು ಹೀಗೆಯೇ ಬಿಟ್ಟರೆ ಅಪಾಯ ಎಂದು ಆತಂಕಗೊಳ್ಳುತ್ತಿದ್ದಾರೆ. ಹೀಗಾಗಿ ಶೀಘ್ರವೇ ದೆಹಲಿಗೆ ನಿಯೋಗ ತೆರಳಿ ಸುರ್ಜೇವಾಲ ವಿರುದ್ಧ ಪಕ್ಷದ ಹೈಕಮಾಂಡ್‌ಗೆ ದೂರು ಸಲ್ಲಿಸುವುದಕ್ಕೂ ಕೆಲವು ಶಾಸಕರು ಸಿದ್ಧರಾಗಿದ್ದಾರೆ. ಅಲ್ಲೊಂದು, ಇಲ್ಲೊಂದು ಅಪಸ್ವರ ಕೇಳುತ್ತಾ ಸುಗಮವಾಗಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರದಲ್ಲಿ ಸುರ್ಜೇವಾಲ ಸುಂಟರಗಾಳಿ ಎಬ್ಬಿಸುವ ಪ್ರಯತ್ನ ನಡೆಸುತ್ತಿದ್ದು, ಇದರಿಂದ ಸರಕಾರಕ್ಕೆ ಮತ್ತು ಕಾಂಗ್ರೆಸ್‌ಗೆ ತೀರಾ ಧಕ್ಕೆಯಾಗಲಿದೆ ಎಂದು ಹೈಕಮಾಂಡ್‌ಗೆ ಮನವರಿಕೆ ಮಾಡಲು ಚಿಂತಿಸಿದ್ದಾರೆ.

→ 4

ಉಸ್ತುವಾರಿಯ ನೈಜ ತಂತ್ರವೇನು?

ಉಸ್ತುವಾರಿಗಳು ಈತನಕ ಸುಮಾರು 55ಕ್ಕೂ ಹೆಚ್ಚು ಶಾಸಕರ ಜತೆ ಪ್ರತ್ಯೇಕವಾಗಿ ಮಾತನಾಡಿದ್ದು, ಕೆಲವರ ಜತೆ ಅನುದಾನ ಮತ್ತು ಕೆಲಸಗಳ ಬಗ್ಗೆ ಮಾತನಾಡಿದರೆ, ಅನೇಕರಿಂದ ಯಾವ ನಾಯಕತ್ವ ಸೂಕ್ತ ಎನ್ನುವ ಬಗ್ಗೆಯೂ ಚರ್ಚಿಸಿದ್ದಾರೆ ಎನ್ನಲಾಗಿದೆ. ಇದರಿಂದ ಶಾಸಕರಲ್ಲಿ ಮನಸ್ಸು ಒಡೆಯುವಂತಾಗಿದ್ದು, ಇದರಲ್ಲಿ ಷಡ್ಯಂತ್ರ ಇರುವ ಶಂಕೆ ಇದೆ. ಇದರಿಂದ ಪಕ್ಷಕ್ಕೆ ಮತ್ತು ಸರಕಾರಕ್ಕೆ ಅಪಾಯ ಉಂಟಾಗುವ ಸಾಧ್ಯತೆ ಇದೆ. ಈ ಮಧ್ಯೆ, ಮೂರನೇ ಸುತ್ತಿನಲ್ಲಿ ಸಚಿವರ ಜತೆ ಚರ್ಚಿಸುವ ಸಾಧ್ಯತೆ ಇರುವುದರಿಂದ ಇನ್ನೂ ಕೆಟ್ಟ ಸಂದೇಶ ರವಾನೆಯಾಗಲಿದೆ ಎಂದು ಕೆಲವು ಸಚಿವರು ಬೇಸರ ವ್ಯಕ್ತಪಡಿಸಿದ್ದಾರೆ.

- ರಾಜ್ಯ ಕಾಂಗ್ರೆಸ್ ಉಸ್ತುವಾರಿಯನ್ನು ಬದಲಿಸುವಂತೆ ಒತ್ತಾಯಿಸಲು ದೆಹಲಿಗೆ ತೆರಳಲು ಶಾಸಕರ ಚಿಂತನೆ
- ಸರಕಾರದಲ್ಲಿ ಸುಂಟರಗಾಳಿ ಎಬ್ಬಿಸಲು ಸುರ್ಜೇವಾಲ ಪ್ರಯತ್ನಿಸುತ್ತಿದ್ದಾರೆ ಎಂದು ದೂರು ನೀಡಲು ಸಿದ್ಧತೆ

ಕೇಂದ್ರ ಸಚಿವ ಗಡ್ಕರಿಯಿಂದ ಉದ್ಘಾಟನೆ
ಸಿಗಂದೂರು ಸೇತುವೆ ಇಂದು ಲೋಕಾರ್ಪಣೆ

ಶಿವಮೊಗ್ಗ: 6 ದಶಕಗಳ ಹೋರಾಟದ ಫಲವಾದ ಶರಾವತಿ ಹಿನ್ನೀರಿನ ಸಿಗಂದೂರು ಸೇತುವೆ ಜುಲೈ 14ರಂದು ಉದ್ಘಾಟನೆಯಾಗಲಿದೆ. ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ತೂಗು ಸೇತುವೆ ಲೋಕಾರ್ಪಣೆಗೊಳಿಸಲಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರು ಸಿಎಂ ಆಗಿದ್ದಾಗ ಶರಾವತಿ ಹಿನ್ನೀರಿಗೆ ಸೇತುವೆ ನಿರ್ಮಾಣ ಮಾಡುವ ಕುರಿತು ಬಜೆಟ್‌ನಲ್ಲಿ ಘೋಷಿಸಿದ್ದರು. ಆದರೆ ಅವರು ಸಿಎಂ ಆಗಿದ್ದ ಅವಧಿಯಲ್ಲಿ ಅದು ಸಾಧ್ಯವಾಗಿರಲಿಲ್ಲ. ಯಡಿಯೂರಪ್ಪನವರು ಸಂಸದರಾದಾಗ ಕೇಂದ್ರದಿಂದ ಸೇತುವೆ ಮಂಜೂರು ಮಾಡಿಸಿಕೊಂಡು ಬಂದರು. ಸೇತುವೆಗಾಗಿ ಗ್ರಾಮೀಣ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲಾಯಿತು. ನಂತರ ಸೇತುವೆಗಾಗಿ 423.15 ಕೋಟಿ ರು.ಗಳನ್ನು ಬಿಡುಗಡೆ ಮಾಡಲಾಯಿತು. ಆಗ ಕೇಂದ್ರ ಭೂ ಸಾರಿಗೆ ಸಚಿವರಾಗಿದ್ದ ನಿತಿನ್ ಗಡ್ಕರಿ ಅವರು ಸೇತುವೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ಈಗ ಅವರೇ ಬಂದು ದೇಶದ 2ನೇ ಕೇಬಲ್ ಆಧಾರಿತ ಅತೀ ಉದ್ದದ ಸೇತುವೆಯನ್ನು ಉದ್ಘಾಟಿಸುತ್ತಿರುವುದು ಇನ್ನೊಂದು ವಿಶೇಷ.

ವಿಶೇಷಗಳೇನು?

- 423.15 ಕೋಟಿ ರು. ಸೇತುವೆ ನಿರ್ಮಾಣದ ವೆಚ್ಚ
- 2.14 ಕಿ.ಮೀ ಉದ್ದದ ಸೇತುವೆ
- 16 ಮೀ. ಅಗಲದ ದ್ವಿಪಥದ ಸೇತುವೆ
- 117 ಮೀ. ಸ್ಪ್ಯಾನ್ ಅಂತರ
- ದೇಶದ 2ನೇ ಅತಿ ಉದ್ದದ ತೂಗು ಸೇತುವೆ



ಸಿಎಂ ಗೈರು: ಗಡ್ಕರಿಗೆ ಪತ್ರ

ಸಿಗಂದೂರು ಸೇತುವೆ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಗೈರು ಹಾಜರಾಗಲಿದ್ದಾರೆ. ಅವರ ಪರವಾಗಿ ಸಚಿವ ಸತೀಶ್ ಜಾರಕಿಹೊಳಿ ಉಪಸ್ಥಿತರಲಿದ್ದಾರೆ. ಈ ಕುರಿತು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದಿರುವ ಸಿಎಂ, ಸಿಗಂದೂರು ತೂಗು ಸೇತುವೆ ಉದ್ಘಾಟನೆ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲ. ನಾನು ಈಗಾಗಲೇ ಅದೇ ದಿನ ಇಂಡಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅಲ್ಲಿಗೆ ತೆರಳುತ್ತಿದ್ದೇನೆ. ಹೀಗಾಗಿ ಸೇತುವೆ ಉದ್ಘಾಟನೆ ಕಾರ್ಯಕ್ರಮ ಮುಂದೂಡಿ, ಮುಂದಿನ ದಿನಾಂಕ ನಿಗದಿಪಡಿಸುವಂತೆ ಹೆದ್ದಾರಿ ಪ್ರಾಧಿಕಾರಕ್ಕೆ ಸೂಚಿಸಬೇಕೆಂದು ಕೋರುತ್ತೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಸೊಂಪಾದ ಪುಟಗಳು

ಸಿದ್ದು ದಿಲ್ಲಿಯಲ್ಲಿ ಬಾಂಬ್ ಬ್ಲಾಸ್ಟ್ ಮಾಡಿದ್ದೇಕೆ?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
6

ತೃಪ್ತಿ ಎಂಬುದು ಸಹಜ ಶ್ರೀಮಂತಿಕೆ
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
7

ದಾರಿದೀಪೋಕ್ತಿ



ನಿಮ್ಮ ಭಾವನೆಗಳನ್ನು ತೀರಾ ಮನಸ್ಸಿನ ಆಳಕ್ಕೆ ಇಳಿಯಲು ಬಿಡಬೇಡಿ. ಜನರು ತಮ್ಮ ಅಭಿಪ್ರಾಯಗಳನ್ನು, ನಿಲುವುಗಳನ್ನು ಯಾವಾಗ ಬೇಕಾದರೂ ಬದಲಾಯಿಸುತ್ತಾರೆ. ಇಷ್ಟಕ್ಕೇ ನಾನು ಮನಸ್ಸಿಗೆ ಹಚ್ಚಿಕೊಂಡೆನಲ್ಲ ಎಂದು ಆಗ ನಿಮಗೆ ಪಶ್ಚಾತ್ತಾಪ ಆಗಬಹುದು.

ವಕ್ರತುಂಡೋಕ್ತಿ

ಟಿವಿ ನಿಜಕ್ಕೂ ಓದಲು ಪ್ರೇರಕ. ಯಾರಾದರೂ ಟಿವಿ ಸೆಟ್ ಆನ್ ಮಾಡಿದರೆ ಪಕ್ಕದ ರೂಮಿಗೆ ಹೋಗಿ ಓದಬೇಕು ಎನಿಸುತ್ತದೆ.

ಡಿವೈಡರ್‌ಗೆ ಕಾರು ಡಿಕ್ಕಿ: ಮೂವರ ಸಾವು

ರಾಮನಗರ: ತಾಲೂಕಿನ ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ-275ರ ಜಯಪುರ ಸೇತುವೆ ಬಳಿ ಭಾನುವಾರ ವೇಗವಾಗಿ ಬಂದ ಕಾರು ಹೆದ್ದಾರಿ ತಡೆಗೋಡೆಗೆ ಡಿಕ್ಕಿ ಹೊಡೆದಿದ್ದರಿಂದ ಮೂವರು ಮೃತಪಟ್ಟಿದ್ದು, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ವಿವರಪುಟ → 5

ಇಂಧನ ಸೋರಿಕೆಯಿಂದ ಅವಘಡ | ಎಂಟು ರೈಲುಗಳ ಸಂಚಾರ ರದ್ದು
ಗೂಡ್ಸ್ ರೈಲಿನಲ್ಲಿ ಬೆಂಕಿ

ಚೆನ್ನೈ: ಚೆನ್ನೈನಿಂದ ಜೋಲಾರ್‌ಪೇಟೆಗೆ ಇಂಧನ ಸಾಗಿಸುತ್ತಿದ್ದ ಗೂಡ್ಸ್ ರೈಲಿನ ಐದು ಬೋಗಿಗಳಲ್ಲಿ ತಿರುವಳ್ಳೂರು ರೈಲು ನಿಲ್ದಾಣದ ಬಳಿ ಭಾನುವಾರ ಬೆಳಗ್ಗೆ 5.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಸೇರಿದಂತೆ ಇತರೆ ತಂಡಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದರು. ಪ್ರಾಥಮಿಕ ವರದಿಗಳ ಪ್ರಕಾರ, ಸರಕು ಸಾಗಣೆ ರೈಲಿನ ಮೂರು ಬೋಗಿಗಳು ಹಳಿತಪ್ಪಿವೆ. ಇದರಿಂದಾಗಿ ಇಂಧನ ಸೋರಿಕೆಯಾಗಿ ಬೆಂಕಿ ಕಾಣಿಸಿಕೊಂಡಿದೆ ಎನ್ನಲಾಗಿದೆ. ಬೆಂಗಳೂರು, ಮೈಸೂರು ಮತ್ತು ಕೊಯಮತ್ತೂರು ನಡುವೆ ಸಂಚರಿಸುವ ಪ್ರೀಮಿಯಂ ವಂದೇ ಭಾರತ್, ಶತಾಬ್ದಿ ಎಕ್ಸ್‌ಪ್ರೆಸ್ ಸೇರಿದಂತೆ ಕನಿಷ್ಠ ಎಂಟು ರೈಲುಗಳ ಸಂಚಾರ ರದ್ದಾಗಿದೆ. ಚೆನ್ನೈ-ಅರಕ್ಕೋಣಂ ವಿಭಾಗದಲ್ಲಿನ ಸ್ಥಳೀಯ ರೈಲು ಸೇವೆಗಳನ್ನೂ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ರೈಲು ಸಂಚಾರ ಆದಷ್ಟು ಬೇಗ ಪುನರಾರಂಭಗೊಳ್ಳುತ್ತದೆ ಎಂದು ದಕ್ಷಿಣ ರೈಲ್ವೆ ಪ್ರಕಟಣೆಯಲ್ಲಿ ತಿಳಿಸಿದೆ.

ಗೂಡ್ಸ್ ರೈಲಿನಲ್ಲಿ ಕಾಣಿಸಿಕೊಂಡ ಬೆಂಕಿ.

ಅಧಿವೇಶನ: ನಾಳೆ ಕೈ ನಾಯಕರ ಸಭೆ

ದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಪಕ್ಷದ ಕಾರ್ಯತಂತ್ರವನ್ನು ಅಂತಿಮಗೊಳಿಸಲು ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ ಸೋನಿಯಾ ಗಾಂಧಿ ಮಂಗಳವಾರ ಪಕ್ಷದ ನಾಯಕರ ಸಭೆ ಕರೆದಿದ್ದಾರೆ. ಈ ಬಾರಿಯ ಅಧಿವೇಶನವು ಪ್ರತಿಪಕ್ಷಗಳು ಮತ್ತು ಸರಕಾರದ ನಡುವೆ ಘರ್ಷಣೆಗೆ ಸಾಕ್ಷಿಯಾಗುವ ನಿರೀಕ್ಷೆಯಿದೆ. ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ, ಪಹಲ್ಗಾಮ್ ದಾಳಿ, ಆಪ ರೇಷನ್ ಸಿಂದೂರ ಮತ್ತು ನಂತರದ ರಾಜತಾಂತ್ರಿಕ ಸಂಪರ್ಕದ ಬಗ್ಗೆ ಚರ್ಚೆಗೆ ಕಾಂಗ್ರೆಸ್ ಒತ್ತಾಯಿಸುತ್ತಿದೆ.

ನಾಲ್ವರು ರಾಜ್ಯಸಭೆಗೆ ನಾಮನಿರ್ದೇಶನ

ದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾಜಿ ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶ್ರಿಂಗ್ಲಾ, ಹಿರಿಯ ವಕೀಲ ಉಜ್ವಲ್ ನಿಕಮ್, ಕೇರಳ ಬಿಜೆಪಿ ನಾಯಕ ಸಿ.ಸದಾನಂದನ್ ಮಾಸ್ಟರ್ ಮತ್ತು ಇತಿಹಾಸಗಾರ್ತಿ ಮೀನಾಕ್ಷಿ ಜೈನ್ ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿದ್ದಾರೆ. ಸಂವಿಧಾನದ 80(1)(ಎ) ವಿಧಿಯಡಿಯಲ್ಲಿ ನೀಡಲಾದ ವಿಶೇಷ ಅಧಿಕಾರದನ್ವಯ ನಾಲ್ವರನ್ನು ನಾಮನಿರ್ದೇಶನ ಮಾಡಿದ್ದಾರೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಪ್ರಯಾಣಿಕರ ಸುರಕ್ಷತೆ ಹಿನ್ನೆಲೆಯಲ್ಲಿ ರೈಲ್ವೆ ಮಹತ್ವದ ನಿರ್ಧಾರ
ರೈಲ್ವೆ ಕೋಚ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾ

ದೆಹಲಿ: ಪ್ರಯಾಣಿಕರ ಸುರಕ್ಷತೆ ಹಿನ್ನೆಲೆಯಲ್ಲಿ ಎಲ್ಲ ಪ್ರಯಾಣಿಕರ ಕೋಚ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲು ರೈಲ್ವೆ ಇಲಾಖೆ ನಿರ್ಧರಿಸಿದೆ. ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ಸಹಾಯಕ ರೈಲ್ವೆ ಸಚಿವ ರೌನಿತ್ ಸಿಂಗ್ ಬಿಟ್ಟು ಭಾಗವಹಿಸಿದ್ದ ರೈಲ್ವೆ ಮಂಡಳಿಯ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಈ ನಿರ್ಧಾರ ಮಾಡಲಾಗಿದೆ. ಲೋಕೋಮೋಟಿವ್‌ಗಳು ಮತ್ತು ಕೋಚ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಅಳವಡಿಕೆಯ ಪ್ರಗತಿಯನ್ನು ಸಚಿವರು ಪರಿಶೀಲಿಸಿದರು. ದುಷ್ಕರ್ಮಿಗಳು ಮತ್ತು ಸಂಘಟಿತ ಕಳ್ಳರ ಗುಂಪುಗಳು ಅಮಾಯಕ ಪ್ರಯಾಣಿಕರ ಮೇಲೆ ಹಲ್ಲೆ, ಸುಲಿಗೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಪ್ರಯಾಣಿಕರ ಸುರಕ್ಷತೆಗಾಗಿ ರೈಲು ಬಾಗಿಲುಗಳ ಬಳಿ ಮತ್ತು ಸಾಮಾನ್ಯ ಸಂಚಾರ ಜಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು ಎಂದು ರೈಲ್ವೆ ಇಲಾಖೆ ತಿಳಿಸಿವೆ. ಕ್ಯಾಮೆರಾಗಳ ಪ್ರಾಯೋಗಿಕ ಅಳವಡಿಕೆಯ ಸಕಾರಾತ್ಮಕ ಫಲಿತಾಂಶದ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ.

→ 4

ಗಾಜಾಪಟ್ಟಿ ಮೇಲೆ ದಾಳಿ: 29 ಸಾವು

ಪ್ಯಾಲೆಸ್ಟೀನ್: ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ 6 ಮಕ್ಕಳು ಸೇರಿದಂತೆ ಕನಿಷ್ಠ 29 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ ಎಂದು ಗಾಜಾದ ನಾಗರಿಕ ರಕ್ಷಣಾ ಸಂಸ್ಥೆ ಭಾನುವಾರ ತಿಳಿಸಿದೆ. ಗಾಜಾ ನಗರದಲ್ಲಿ ಶನಿವಾರ ರಾತ್ರಿಯಿಡೀ ಮತ್ತು ಭಾನುವಾರ ಮುಂಜಾನೆ ಹಲವು ದಾಳಿಗಳು ನಡೆದಿವೆ. ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 29 ಮಂದಿ ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ನಾಗರಿಕ ರಕ್ಷಣಾ ವಕ್ತಾರ ಮಹ್ಮದ್ ಬಸ್ಸಲ್ ತಿಳಿಸಿದ್ದಾರೆ.

ಮತದಾರರ ಪಟ್ಟಿ ಎಲ್ಲೆಡೆ ಪರಿಷ್ಕರಣೆ

ದೆಹಲಿ: ದೇಶದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು ಚುನಾವಣಾ ಆಯೋಗ ಮುಂದಿನ ತಿಂಗಳಿಂದ ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ. ಈ ದಿಸೆಯಲ್ಲಿ ಆಯೋಗವು ಎಲ್ಲ ರಾಜ್ಯಗಳಲ್ಲಿನ ತನ್ನ ಚುನಾವಣಾ ಶಾಖೆಯನ್ನು ಸಕ್ರಿಯಗೊಳಿಸಿದೆ ಎಂದು ಮೂಲಗಳು ತಿಳಿಸಿವೆ. ಬಿಹಾರದಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ಎಸ್‌ಐಆರ್ ಅನ್ನು 'ಸಾಂವಿಧಾನಿಕ ಹೊಣೆಗಾರಿಕೆ' ಎಂದು ಕಳೆದ ವಾರ ಉಲ್ಲೇಖಿಸಿದ ಸುಪ್ರೀಂಕೋರ್ಟ್, ಮತದಾರರ ಪಟ್ಟಿಯ ಪರಿಷ್ಕರಣಾ ಕಾರ್ಯವನ್ನು ಮುಂದುವರಿಸಲು ಅನುಮತಿ ನೀಡಿತ್ತು.

ನಟ ಕೋಟಾ ಶ್ರೀನಿವಾಸ ರಾವ್ ನಿಧನ

ಹೈದರಾಬಾದ್: ತೆಲುಗು ಚಿತ್ರರಂಗದ ಹಿರಿಯ ನಟ ಕೋಟಾ ಶ್ರೀನಿವಾಸ ರಾವ್ (83) ಅವರು ಭಾನುವಾರ ಬೆಳಗ್ಗೆ 4 ಗಂಟೆ ಸುಮಾರಿಗೆ ಕೊನೆಯುಸಿರೆಳೆದಿದ್ದಾರೆ. 750ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ ಅವರು ಹಾಸ್ಯ, ಖಳನಾಯಕ, ಪೋಷಕ ಪಾತ್ರಗಳ ಮೂಲಕ ಗಮನ ಸೆಳೆದಿದ್ದಾರೆ. ಪದ್ಮಶ್ರೀ ಸೇರಿ ಹಲವು ಬಾರಿ ನಂದಿ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಒಮ್ಮೆ ಶಾಸಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಸೇರಿದಂತೆ ತೆಲುಗು ಚಿತ್ರರಂಗದ ಗಣ್ಯರು, ಅಭಿಮಾನಿಗಳು ಕಂಬನಿ ಮಿಡಿದಿದ್ದಾರೆ.

ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಯ ವರದಿ ಬಹಿರಂಗ
ಭಾರತೀಯರಿಂದ ಅಧಿಕ ಉಪ್ಪು ಸೇವನೆ



- ಅಗತ್ಯಕ್ಕಿಂತ ಹೆಚ್ಚು ಉಪ್ಪು ತಿನ್ನುವುದರಿಂದ ಅಧಿಕ ರಕ್ತದೊತ್ತಡ, ಪಾರ್ಶ್ವವಾಯು, ಹೃದ್ರೋಗ, ಮೂತ್ರಪಿಂಡ ತೊಂದರೆ ಕಾಣಿಸಿಕೊಳ್ಳುವ ಅಪಾಯ
- ವಿವಿಧ ಆರೋಗ್ಯ ಸಮಸ್ಯೆ ಬಾರದಂತೆ ತಡೆಯುವ ಸಂಬಂಧ ಉಪ್ಪು ಸೇವನೆ ಕಡಿಮೆಗೊಳಿಸುವುದು ಹೇಗೆ ಎಂಬ ಬಗ್ಗೆ ಅಧ್ಯಯನ ಕೈಗೊಂಡ ವಿಜ್ಞಾನಿಗಳು

ದೆಹಲಿ: ವಿಶ್ವ ಆರೋಗ್ಯ ಸಂಸ್ಥೆಯು ಪ್ರತಿ ದಿನ ಒಬ್ಬ ವ್ಯಕ್ತಿ ಸೇವಿಸಬೇಕಾದ ಉಪ್ಪಿನ ಪ್ರಮಾಣವನ್ನು 5 ಗ್ರಾಂ.ಗೆ ನಿಗದಿಪಡಿಸಿದ್ದರೂ, ಭಾರತದಲ್ಲಿ ದಿನಂಪ್ರತಿ ಉಪ್ಪು ಸೇವೆಯ ಪ್ರಮಾಣವು (ಪುರುಷರು 8.9 ಹಾಗೂ ಮಹಿಳೆಯರು 7.1 ಗ್ರಾಂ.) ಆಗಿರುವುದಾಗಿ ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ (ಐಸಿಎಂಆರ್)ಯ ವರದಿಯೊಂದು ಬಹಿರಂಗಪಡಿಸಿದೆ.

ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ಪುರುಷರಲ್ಲಿ ಉಪ್ಪಿನ ಸೇವನೆಯ ಪ್ರಮಾಣವು ಗಣನೀಯವಾಗಿ ಅತ್ಯಧಿಕವಾಗಿದೆ. ಅತಿಯಾದ ದೇಹ ತೂಕವಿರುವವರು ಹಾಗೂ ಬೊಜ್ಜುದೇಹದ ಪುರುಷರಲ್ಲಿಯೂ ಉಪ್ಪಿನ ಸೇವನೆಯ ಪ್ರಮಾಣವು ಹೆಚ್ಚಿದೆ. ರಾಷ್ಟ್ರೀಯ ಎನ್‌ಸಿಡಿ ಕಣ್ಗಾವಲು ಸಮೀಕ್ಷೆಯ (ಎನ್‌ಎನ್‌ಎಂಎಸ್) ಭಾಗವಾಗಿ ನಡೆಸಿದ ಮಾದರಿ ಸಮೀಕ್ಷೆಯನ್ನು ಆಧರಿಸಿ ಈ ವರದಿಯನ್ನು ತಯಾರಿಸಲಾಗಿದೆ. ಸಮೀಕ್ಷೆಯಲ್ಲಿ ಪಾಲ್ಗೊಂಡವರಲ್ಲಿ ಹೆಚ್ಚಿನವರಿಗೆ ಅಧಿಕ ಪ್ರಮಾಣದ ಉಪ್ಪಿನ ಸೇವನೆ ಅಥವಾ ಕಡಿಮೆ ಪ್ರಮಾಣದ ಉಪ್ಪಿನ ಸೇವನೆಯಿಂದ ಆಗುವ ಹಾನಿಕಾರಕ ಪರಿಣಾಮಗಳ ಬಗ್ಗೆ ಅರಿವಿಲ್ಲವೆಂದು ಮೂಲಗಳು ತಿಳಿಸಿವೆ.

→ 4

ಇನ್ಮೇಲೆ ಸರಕಾರಿ ಬಸ್‌ನಲ್ಲೂ ದೊಡ್ಡ ಸರಕು ಸಾಗಣೆ

ಫ್ರಿಡ್ಜ್, ವಾಷಿಂಗ್ ಮೆಷಿನ್ ಸೇರಿದಂತೆ ಇತರೆ ವಸ್ತುಗಳನ್ನು ಸಾಗಿಸಲು ಅವಕಾಶ

ಬೆಂಗಳೂರು: ಸರಕಾರಿ ಸಾರಿಗೆ ಬಸ್ಸುಗಳಲ್ಲಿ ಪ್ರಾಣಿಗಳನ್ನು ಸಾಗಿಸಲು ಅವಕಾಶ ನೀಡಲಾಗಿದೆ. ಈಗ ಪ್ರಾಣಿಗಳಲ್ಲದೇ ಫ್ರಿಡ್ಜ್, ವಾಷಿಂಗ್ ಮೆಷಿನ್ ಸೇರಿದಂತೆ ಇತರೆ ವಸ್ತುಗಳನ್ನು ಸಾಗಿಸಲು ಅವಕಾಶ ನೀಡಲಾಗಿದೆ.

ಮಾಹಿತಿ ಹಕ್ಕು ಅರ್ಜಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖ್ಯ ಸಂಚಾರ ವ್ಯವಸ್ಥಾಪಕರು ನೀಡಿರುವ ಮಾಹಿತಿಯಲ್ಲಿ, ಸರಕಾರಿ ಬಸ್ಸುಗಳಲ್ಲಿ ಸಾಕು ಪ್ರಾಣಿಗಳನ್ನು ಉಚಿತವಾಗಿ ತೆಗೆದುಕೊಂಡು ಹೋಗಲು ಅನುಮತಿ ಇಲ್ಲ. ನಾಯಿಯನ್ನು ಒಬ್ಬ ವಯಸ್ಕ ಪ್ರಯಾಣಿಕರಂತೆ ಪರಿಗಣಿಸಿ ದರ ವಿಧಿಸಿದ್ದರೆ ಮೊಲ, ನಾಯಿ ಮರಿ, ಬೆಕ್ಕು, ಪಂಜರದಲ್ಲಿರುವ ಪಕ್ಷಿಗೆ ಮಕ್ಕಳ ದರ ವಿಧಿಸಲಾಗುತ್ತದೆ. ಟ್ರಕ್ ಟೈರ್‌ಗಳನ್ನು ಮೂರು ಯೂನಿಟ್‌ಗಳೆಂದು ಪರಿಗಣಿಸಲಾಗುತ್ತದೆ. 60 ಕೆಜಿ ವರೆಗೆ ಕೊಂಡೊಯ್ಯಬಹುದು. ರೆಫ್ರಿಜರೇಟರ್, ಬೈಸಿಕಲ್, ವಾಶಿಂಗ್ ಮೆಷಿನ್, ವೀಣೆ, ಕಾರ್ ಟೈರ್‌ಗಳನ್ನು 2 ಯೂನಿಟ್ ಎಂಬುದಾಗಿ ಪರಿಗಣಿಸಲಾಗುತ್ತದೆ. ಟೇಬಲ್ ಫ್ಯಾನ್, ಹಾರ್ಮೋನಿಯಂ, ಟಿವಿ, ಕಂಪ್ಯೂಟರ್ ಮಾನಿಟರ್, ಸಿಪಿಯು, ಬ್ಯಾಟರಿ, 25 ಲೀಟರ್ ಖಾಲಿ ಕಂಟೈನರ್‌ಗಳನ್ನು 20 ಕೆಜಿ ವರೆಗೆ 1 ಯೂನಿಟ್ ಎಂಬುದಾಗಿ ಪರಿಗಣಿಸಲಾಗುತ್ತದೆ. ರೇಷ್ಮೆ ಗೂಡನ್ನು ಪ್ರತಿ 15 ಕೆಜಿಗೆ ಒಂದು ಯೂನಿಟ್‌ನಂತೆ ಪರಿಗಣಿಸಲಾಗುತ್ತದೆ. ಇನ್ನೂ ಪ್ರಯಾಣಿಕರು 4 ಅಥವಾ 5 ಜನರ ಗುಂಪಿನಲ್ಲಿ ಪ್ರಯಾಣಿಸುತ್ತಿದ್ದರೆ ಒಂದು ಬ್ಯಾಗ್ ಅಥವಾ ಬಂಡಲ್ ಲಗೇಜ್ ಕೊಂಡೊಯ್ಯುತ್ತಿದ್ದರೆ ಉಚಿತ ಸಾಗಾಣೆಯ ಒಬ್ಬ ಪ್ರಯಾಣಿಕರಿಗೆ (30 ಕೆಜಿ ವರೆಗೆ) ಅನ್ವಯಿಸುತ್ತದೆ. ಒಬ್ಬರು ಮಾತ್ರವೇ ಉಚಿತವಾಗಿ ಲಗೇಜ್ ತೆಗೆದುಕೊಂಡು ಹೋಗಲು ಅವಕಾಶವಿದೆ ಎಂಬುದಾಗಿ ತಿಳಿಸಲಾಗಿದೆ.

ಪ್ರತ್ಯೇಕ ದರ ನಿಗದಿ

ಎಸಿ ಮತ್ತು ನಾನ್ ಎಸಿ ಬಸ್ಸುಗಳಿಗೆ ಪ್ರತ್ಯೇಕ ದರ ನಿಗದಿ ಮಾಡಲಾಗಿದೆ. ನಾನ್ ಎಸಿ ಬಸ್ಸುಗಳಿಗೆ 1 - 5 ಹಂತದ ವರೆಗೆ 5 ರು. ನಿಗದಿ ಆಗಿದ್ದರೆ ಎಸಿ ಬಸ್ಸುಗಳಲ್ಲಿ 10 ರು. ದರ ನಿಗದಿ ಮಾಡಲಾಗಿದೆ. 51 ರಿಂದ 55 ಹಂತದವರೆಗಿನ ನಾನ್ ಎಸಿ ಬಸ್ಸುಗಳಿಗೆ 44 ರು., ಎಸಿ ಬಸ್ಸುಗಳಿಗೆ 55 ರು. ದರ ನಿಗದಿ ಮಾಡಲಾಗಿದೆ.

- ನಾಯಿಗೆ ಒಬ್ಬ ವಯಸ್ಕ ಪ್ರಯಾಣಿಕನ ದರ ನಿಗದಿ ಮಾಡಿದ ಸಾರಿಗೆ ನಿಗಮ
- ಮೊಲ, ನಾಯಿ ಮರಿ, ಬೆಕ್ಕು, ಪಂಜರದಲ್ಲಿರುವ ಪಕ್ಷಿಗೆ ಮಕ್ಕಳ ದರ
- ಪ್ರತಿ 15 ಕೆಜಿಗೆ ಒಂದು ಯೂನಿಟ್‌ನಂತೆ ರೇಷ್ಮೆ ಗೂಡು ಪರಿಗಣನೆ
- ರೆಫ್ರಿಜರೇಟರ್, ಬೈಸಿಕಲ್, ವೀಣೆ, ಕಾರ್ ಟೈರ್ ಬಸ್‌ನಲ್ಲಿ ತೆಗೆದುಕೊಂಡು ಹೋಗಬಹುದು

ಸಮಾಚಾರ ಸಣ್ಣದಲ್ಲ

ಹೃದಯಾಘಾತಕ್ಕೆ ಯುವಕ ಬಲಿ

ಚಿಕ್ಕಮಗಳೂರು : ರಾಜ್ಯದಲ್ಲಿ ಹೃದಯಾಘಾತದ ಸರಣಿ ಮುಂದುವರಿದಿದ್ದು ಪ್ರವಾಸಕ್ಕೆಂದು ಬಂದಿದ್ದ 30 ವರ್ಷದ ಯುವಕ ಹೃದಯಾಘಾತದಿಂದ ಸಾವನ್ನಪ್ಪಿದ ಘಟನೆ ನಡೆದಿದೆ. ಕಳೆದ 2 ದಿನಗಳ ಹಿಂದೆ ಪ್ರವಾಸಕ್ಕೆಂದು ಬೆಂಗಳೂರಿನಿಂದ ಬಂದಿದ್ದ ರಾಹುಲ್ ಮೃತ ಯುವಕ. ನಲ್ಲೂರು ಗ್ರಾಮದ ಖಾಸಗಿ ಹೋಂಸ್ಟೇಯಲ್ಲಿ ತಂಗಿದ್ದು ಭಾನುವಾರ ಮಧ್ಯಾಹ್ನ ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮಾರ್ಗಮಧ್ಯೆ ಸಾವನ್ನಪ್ಪಿದ್ದಾನೆ. ಯುವಕನಿಗೆ ಮೂರ್ಛೆ ರೋಗವಿದ್ದು, ಬೆಳಗ್ಗೆಯಿಂದ ರೂಮ್ ನಿಂದ ಹೊರ ಬಂದಿರಲಿಲ್ಲ ಎಂದು ತಿಳಿದು ಬಂದಿದೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಯುವಕನ ಮೃತದೇಹ ಜಿಲ್ಲಾ ಸ್ಪತ್ರೆಯ ಶವಾಗಾರದಲ್ಲಿಡಲಾಗಿದೆ.

ಯುವ ಗಾಯಕನ ಬರ್ಬರ ಹತ್ಯೆ

ರಾಯಬಾಗ: ಕೇವಲ ಐದು ಸಾವಿರ ರು. ಹಣಕ್ಕೆ ಯುವಕನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ರಾಯಬಾಗ ತಾಲೂಕಿನ ಬೂದಿಹಾಳ ಗ್ರಾಮದ ಹೊರವಲಯದಲ್ಲಿ ನಡೆದಿದೆ. ಮಾರುತಿ ಲಟ್ಟಿ (22) ಹತ್ಯೆಯಾದ ಯುವಕ. ಕಳೆದ ನಾಲ್ಕು ದಿನಗಳ ಹಿಂದೆ ಸ್ನೇಹಿತರ ಜತೆ ಬೈಕ್ ಮೇಲೆ ತೆರಳುವ ವೇಳೆ 11 ಜನರ ತಂಡ ಬರ್ಬರವಾಗಿ ಹತ್ಯೆ ಮಾಡಿದ್ದು ನಂತರ ಯುವಕನ ಮೃತದೇಹದ ಮೇಲೆ ವಾಹನ ಚಲಾಯಿಸಿ ಕ್ರೌರ್ಯ ಮೆರೆದಿದ್ದಾರೆ. ಮೃತ ಯುವಕ ಮಾರುತಿ ಲಟ್ಟಿ ಕೆಲ ದಿನಗಳ ಹಿಂದೆ ಈರಪ್ಪ ಅಕ್ಕಿವಾಟೆ ಎಂಬಾತನ ಬಳಿ 50 ಸಾವಿರ ರೂ. ಸಾಲ ಪಡೆದಿದ್ದ. ಕೆಲಸಕ್ಕೆ ಬರುತ್ತೇನೆ ಎಂದು ಹೇಳಿದ್ದ. ಆದರೆ ಹಾಡಿನ ಕಾರ್ಯಕ್ರಮದಲ್ಲಿ ನಿರತರಾದ ಕಾರಣಕ್ಕೆ ಕೆಲಸಕ್ಕೆ ಹೋಗಲು ಸಾಧ್ಯವಾಗಿರಲಿಲ್ಲ. 45 ಸಾವಿರ ಹಣವನ್ನು ವಾಪಸ್ ನೀಡಿದ್ದ. ಇನ್ನುಳಿದ ಐದು ಸಾವಿರ ಹಣ ಕೊಟ್ಟಿಲ್ಲ ಎಂಬ ಕಾರಣಕ್ಕೆ ಈರಪ್ಪ ಗ್ಯಾಂಗ್ ಕಟ್ಟಿಕೊಂಡು ಮಾರುತಿಯನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ಈ ಕುರಿತು ರಾಯಬಾಗ ಪೊಲೀಸ್ ಠಾಣೆಯಲ್ಲಿ 11 ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಕುರಿತು ಸಿದ್ದರಾಮ ಒಡೆಯರ, ಹಾಗೂ ಆಕಾಶ ಪೂಜಾರಿ ಎಂಬುವವರನ್ನು ಪೊಲೀಸರು ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದಾರೆ.

ಹೆಣ್ಣು ಮಕ್ಕಳಿಗೆ ಪಾಲಿದೆ ಎಂದಿದ್ದಕ್ಕೆ ಅಪ್ಪನ ಕೊಲೆ

ಯಾದಗಿರಿ: ಜಮೀನಿನಲ್ಲಿ ಹೆಣ್ಣು ಮಕ್ಕಳಿಗೂ ಪಾಲು ಕೊಡುತ್ತೇನೆ ಎಂದು ಹೇಳಿದ ತಂದೆಯನ್ನು ಮಗ ಕೊಲೆ ಮಾಡಿರುವ ಘಟನೆ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಮಡ್ನಾಳ ಕ್ಯಾಂಪ್‌ನಲ್ಲಿ ನಡೆದಿದೆ. ಯಂಕಪ್ಪ (65) ಎಂಬುವವರನ್ನು ಈತನ ಮಗನಾದ ನಾಗಪ್ಪ ಹತ್ಯೆಗೈದಿದ್ದಾನೆ. ಹಳಿಸಗರ ಗ್ರಾಮದ ಯಂಕಪ್ಪನಿಗೆ ಇಬ್ಬರು ಪತ್ನಿಯರು. ಮೊದಲನೇ ಹೆಂಡತಿಗೆ 9 ಜನ, 4 ಹೆಣ್ಣು, ಐವರು ಗಂಡು ಮಕ್ಕಳು, ಮೊದಲನೇ ಹೆಂಡತಿಯ 8 ಜನ ಮಕ್ಕಳಿಗೆ ಮದುವೆ ಆಗಿತ್ತು. ಕೊನೆಯವ ನಾಗಪ್ಪನಿಗೆ ಮದುವೆ ಆಗಿರಲಿಲ್ಲ. 2ನೇ ಹೆಂಡತಿಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಪಾಲು ಕೊಡುತ್ತೇನೆ ಎಂದ ಮೇಲೆ ತಂದೆ ಜತೆ ಮಗ ಗಲಾಟೆ ಮಾಡಿದ್ದಾನೆ. ಗಲಾಟೆ ವೇಳೆ ತಂದೆ ಮೇಲೆ ನಾಗಪ್ಪ ಗಂಭೀರವಾಗಿ ಹಲ್ಲೆ ಮಾಡಿದ್ದಾನೆ. ತೀವ್ರ ರಕ್ತಸ್ರಾವದಿಂದ ಯಂಕಪ್ಪ ಸ್ಥಳದಲ್ಲೇ ಮೃತಪಟ್ಟಿದಾರೆ. ಆರೋಪಿಯನ್ನು ಬಂಧಿಸಲಾಗಿದೆ.

ಕುಸಿದು ಬಿದ್ದು ಉದ್ಯಮಿ ಸಾವು

ದಾವಣಗೆರೆ: ವಾಕಿಂಗ್ ಹೋಗುತ್ತಿರುವಾಗಲೇ ಕುಸಿದು ಬಿದ್ದು ಉದ್ಯಮಿ ಸಾವನ್ನಪ್ಪಿದ ಘಟನೆ ದಾವಣಗೆರೆಯಲ್ಲಿ ನಡೆದಿದೆ. ಅನಿಲ್ ಕುಮಾರ್ (40) ಮೃತ ಉದ್ಯಮಿ. ದಾವಣಗೆರೆ ನಗರದ ಶಕ್ತಿ ನಗರದ ನಿವಾಸಿಯಾಗಿರುವ ಅನಿಲ್ ಕುಮಾರ್ ಎಸ್‌ಎಸ್ ರಸ್ತೆ ಪಕ್ಕದ ಡಿಆರ್ ಸರ್ಕಲ್ ದಾರಿಯಲ್ಲಿ ವಾಕ್ ಮಾಡುವಾಗ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ಅನಿಲ್ ಕುಮಾರ್ ಕುಸಿದು ಬೀಳುವ ದೃಶ್ಯ ಪಕ್ಕದ ಶಾಪ್‌ನ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಫನ್ ತರಂಗ

- ರಘುಪತಿ ಶೃಂಗೇರಿ -

ಕೇರಳದಲ್ಲಿ ಶಾಲೆಯಲ್ಲಿ 'ಲಾಸ್ಟ್ ಬೆಂಚ್' ಇಲ್ಲ. ಅರ್ಧ ವೃತ್ತಾಕಾರದಲ್ಲಿ ಬೆಂಚುಗಳನ್ನು ಜೋಡಿಸಿ ಶಿಕ್ಷಕರಿಂದ ಬೋಧನೆ
ಸುದ್ದಿ



ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಕೆ.ವಿ.ಪ್ರಭಾಕರ್ ಅಭಿಮತ

ಕುರುಬರ ಮಕ್ಕಳು ಕೀಳರಿಮೆಯಿಂದ ಹೊರಬನ್ನಿ

ದಾವಣಗೆರೆ: ಒಬಿಸಿ ಹಾಗೂ ಕುರುಬ ಸಮುದಾಯದ ಮಕ್ಕಳು ಕೀಳರಿಮೆಯಿಂದ ಹೊರ ಬರಬೇಕಿದೆ. ಕೀಳರಿಮೆ ಮೆಟ್ಟಿ ಮೇಲೇಳುವುದಕ್ಕೆ ದಾಸಶ್ರೇಷ್ಠ ಕನಕದಾಸರ ಬಂಡಾಯದ ಮಾದರಿಯನ್ನು ಅನುಸರಿಸಬೇಕಿದೆ ಎಂದು ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹೇಳಿದರು.

ಕನಕ ನೌಕರರ ಬಳಗ ಮತ್ತು ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘ ದಾವಣಗೆರೆಯಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ

> **ಸಂಸದರಾದ ಪ್ರಭಾ ಮಲ್ಲಿಕಾರ್ಜುನ್ ಅವರು ರಾಜಕಾರಣದಲ್ಲಿ ಕಳೆದು ಹೋಗದೆ, ಅಭಿವೃದ್ಧಿ ರಾಜಕಾರಣದಲ್ಲಿ ಮುಳುಗಿ ಹೋಗಿದ್ದಾರೆ. ಇವರನ್ನು ಆಯ್ಕೆ ಮಾಡಿದ್ದು ದಾವಣಗೆರೆಯ ಜನತೆಯ ಅತ್ಯುತ್ತಮ ಆಯ್ಕೆ.**
> **-ಕೆ.ವಿ.ಪ್ರಭಾಕರ್**
> ಸಿಎಂ ಮಾಧ್ಯಮ ಸಲಹೆಗಾರ

ಅವರು, ಇತಿಹಾಸದ ಉದ್ದಕ್ಕೂ ನಮ್ಮನ್ನು, ನಮ್ಮ ಸಮುದಾಯವನ್ನು ದಡ್ಡರಂತೆ ಬಿಂಬಿಸುತ್ತಾ ಬರಲಾಗಿದೆ. ಇವತ್ತು ನಮ್ಮ ಸಮುದಾಯದ ಮಕ್ಕಳು ಹಾಗೂ ನಾನು ಪ್ರತಿಭಾವಂತರಾಗಿ ಇಲ್ಲಿ ಗೌರವಿಸಲ್ಪಡುತ್ತಿದ್ದೇವೆ ಎಂದರೆ ಇದಕ್ಕೆ ನಮ್ಮ ಹಿರಿಯರು ಮತ್ತು ಹಿಂದಿನವರು ನಡೆಸಿದ ಹೋರಾಟಗಳು ಕಾರಣ.

ಅಕ್ಷರ ಕಲಿತರೆ ಕಿವಿಗೆ ಕಾದ ಸೀಸ ಸುರಿಯುವ ಶಿಕ್ಷೆ ವಿಧಿಸುತ್ತಿದ್ದ ಕಾಲದಿಂದ ನಮ್ಮದೇ ಆದ ವಿದ್ಯಾವರ್ಧಕ ಸಂಘ ಕಟ್ಟಿಕೊಂಡು ಎಸ್‌ಎಸ್‌ಎಲ್‌ಸಿಯಿಂದ ಎಂಬಿಬಿಎಸ್‌ವರೆಗೂ ಸಾವಿರಾರು ಪ್ರತಿಭಾವಂತರನ್ನು ಪುರಸ್ಕರಿಸುವ ಮಟ್ಟಕ್ಕೆ ಪ್ರಗತಿ ಸಾಧಿಸಿದ್ದೇವೆ. ಈ ಸಾಧನೆಯ ಹಿಂದೆ ಇರುವ ಪ್ರತಿ ಹೆಜ್ಜೆ ಗುರುತುಗಳನ್ನೂ ನಾವು ಅರಿತುಕೊಳ್ಳಬೇಕಿದೆ. ಪೋಷಕರು ಮಕ್ಕಳಿಗೆ ಶಿಕ್ಷಣದ ಜತೆಗೆ ಬದುಕಿನ ಮೌಲ್ಯಗಳನ್ನು ಕಲಿಸಬೇಕು. ಆಗ ಸಮಾಜ ಮೌಲ್ಯಯುತವಾಗುತ್ತದೆ ಎಂದರು.

ಕನಕ ಗುರುಪೀಠದ ಪೂಜ್ಯರಾದ ಜಗದ್ಗುರು ಶ್ರೀ ಡಾ.ನಿರಂಜನಾನಂದಪುರಿ, ಸಂಸದರಾದ ಪ್ರಭಾ ಮಲ್ಲಿಕಾರ್ಜುನ್, ಕೊಪ್ಪಳ ವಿವಿ ಕುಲಪತಿ ಡಾ.ಬಿ.ಕೆ. ರವಿ, ಬಾಲ ಭವನ ಅಧ್ಯಕ್ಷ ಬಿ.ಆರ್. ನಾಯ್ಡು ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಕನಕ ನೌಕರರ ಬಳಗ ಮತ್ತು ಜಿಲ್ಲಾ ಕುರುಬರ ವಿದ್ಯಾವರ್ದಕ ಸಂಘ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಉದ್ಘಾಟಿಸಿದರು. ಕನಕ ಗುರುಪೀಠದ ಪೂಜ್ಯರಾದ ಜಗದ್ಗುರು ಶ್ರೀ ಡಾ.ನಿರಂಜನಾನಂದಪುರಿ ಇದ್ದರು.

ಚಿರತೆಗಳ ಮೃತದೇಹ ಪತ್ತೆ: ರೈಲು ಡಿಕ್ಕಿಯಾಗಿ ಸಾವು ಶಂಕೆ

ಚನ್ನರಾಯಪಟ್ಟಣದ ಕತ್ತರಿಘಟ್ಟ ಬಳಿಯ ರೈಲ್ವೆ ಹಳಿ ಸಮೀಪ ಮೃತಪಟ್ಟಿದ್ದ ಚಿರತೆಗಳ ಅಂತಿಮ ಸಂಸ್ಕಾರವನ್ನು ಅರಣ್ಯಾಧಿಕಾರಿಗಳು ನಡೆಸಿದರು.

ಹಾಸನ: ಚನ್ನರಾಯಪಟ್ಟಣದ ಕತ್ತರಿಘಟ್ಟ ಬಳಿಯ ರೈಲ್ವೆ ಹಳಿ ಸಮೀಪ ಎರಡು ಚಿರತೆಗಳ ಮೃತದೇಹ ಪತ್ತೆಯಾಗಿವೆ. ರೈಲು ಡಿಕ್ಕಿಯಾಗಿ ಚಿರತೆಗಳು ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ಅಂದಾಜು ಒಂದುವರೆ ವರ್ಷದ ಗಂಡು, ಮೂರರಿಂದ ನಾಲ್ಕು ವರ್ಷದ ಹೆಣ್ಣು ಚಿರತೆ ಶವ ರೈಲ್ವೆ ಹಳಿಗಳ ಪಕ್ಕದಲ್ಲೇ ಪತ್ತೆಯಾಗಿವೆ. ವನ್ಯಜೀವಿ ವೈದ್ಯರು, ಮರಣೋತ್ತರ ಪರೀಕ್ಷೆ ನಡೆಸಿ, ನಂತರ ಅರಣ್ಯಾಧಿಕಾರಿಗಳು ಅಂತಿಮ ಸಂಸ್ಕಾರ ನಡೆಸಿದ್ದಾರೆ. ಸ್ಥಳಕ್ಕೆ ಡಿಸಿಎಫ್ ಸೌರಭ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಚಿರತೆ ಸೆರೆ: ನಿಟ್ಟುಸಿರು ಬಿಟ್ಟ ಜನ

ರಾಯಚೂರು: ರಾಯಚೂರು ತಾಲೂಕಿನ ಡಿ.ರಾಂಪೂರ ಇತ್ತು. ಸದ್ಯ ಒಂದೂವರೆ ತಿಂಗಳ ಬಳಿಕ ಚಿರತೆ ಸೆರೆ ಸಿಕ್ಕಿದ್ದು, ಗ್ರಾಮಸ್ಥರು ನಿಟ್ಟುಸಿರು ಬಿಡುವಂತಾಗಿದೆ. ಕಳೆದ ಒಂದೂವರೆ ತಿಂಗಳಿಂದ ರಾಯಚೂರು ತಾಲೂಕಿನ ಡಿ.ರಾಂಪೂರದ ಪರಮೇಶ್ವರ ಬೆಟ್ಟದಲ್ಲಿ ಸೇರಿಕೊಂಡಿದ್ದ ಚಿರತೆ ಕೊನೆಗೂ ಬೋನಿಗೆ ಬಿದ್ದಿದೆ. ಮನೆಯಿಂದ ಹೊರಬರಲು ಸಹ ಜೀವ ಭಯದಲ್ಲಿದ್ದ ಗ್ರಾಮದ ಜನತೆ ಕೊನೆಗೂ ನಿಟ್ಟುಸಿರು ಬಿಟ್ಟಿದ್ದಾರೆ. ಸುಮಾರು 3 ವರ್ಷದ ಗಂಡು ಚಿರತೆಯನ್ನ ಅಧಿಕಾರಿಗಳು ನಾನಾ ತಂತ್ರ ಬಳಸಿ ಬೋನಿಗೆ ಬೀಳಿಸಿದ್ದಾರೆ.

ರೈಲ್ವೆ ಕೋಚ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾ

← ಮೊದಲಪುಟದಿಂದ

ಆಧುನಿಕ ಸಮಸ್ಯೆಗಳಿಗೆ ಆಧುನಿಕ ಕಣ್ಗಾವಲು: ಸಿಸಿಟಿವಿ ಕ್ಯಾಮೆರಾಗಳು ಇತ್ತೀಚಿನ ಆಧುನಿಕ ವಿಶೇಷತೆಗಳನ್ನು ಹೊಂದಿರುತ್ತವೆ. ಎಸ್‌ಟಿಕ್ಯೂಸಿ ಪ್ರಮಾಣೀಕೃತವಾಗಿರುತ್ತವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರತಿ ಗಂಟೆಗೆ 100 ಕಿ.ಮೀ ಹೆಚ್ಚಿನ ವೇಗದಲ್ಲಿ ಚಲಿಸುವ ರೈಲುಗಳಿಗೆ ಮತ್ತು ಕಡಿಮೆ ಬೆಳಕಿನ ಪರಿಸ್ಥಿತಿಗಳಲ್ಲಿಯೂ ಉತ್ತಮ ಗುಣಮಟ್ಟದ ದೃಶ್ಯಾವಳಿ ಲಭ್ಯವಾಗುವಂತಹ ಕ್ಯಾಮೆರಾಗಳ ಅಳವಡಿಕೆಯಾಗಬೇಕು ಎಂದು ಅತ್ಯುತ್ತಮ ದರ್ಜೆಯ ಉಪಕರಣಗಳನ್ನು ಅಳವಡಿಸಲು ಕೇಂದ್ರ ರೈಲ್ವೆ ಸಚಿವರು ತಾಕೀತು ಮಾಡಿದ್ದಾರೆ.

ಡೇಟಾ ಗೌಪ್ಯತೆಗೆ ಆದ್ಯತೆ: ಪ್ರಯಾಣಿಕರ ಸುರಕ್ಷತೆ ಮತ್ತು ಭದ್ರತೆಯನ್ನು ಸುಧಾರಿಸುವ ಉದ್ದೇಶದಿಂದ ಕೋಚ್‌ಗಳ ಸಾಮಾನ್ಯ ಸಂಚಾರ ಪ್ರದೇಶಗಳಲ್ಲಿ ಕೆಮರಾಗಳನ್ನು ಅಳವಡಿಸುವ ನಿರ್ಧಾರವನ್ನು ಮಾಡಲಾಗಿದೆ. ಗೌಪ್ಯತೆಯನ್ನು ಕಾಪಾಡುವುದರ ಜೊತೆಗೆ ಈ ಕ್ಯಾಮೆರಾಗಳು ದುಷ್ಕರ್ಮಿಗಳನ್ನು ಗುರುತಿಸಲು ಸಹಾಯ ಮಾಡುತ್ತವೆ. ಭಾರತೀಯ ರೈಲ್ವೆಯ ಆಧುನೀಕರಣದ ಪ್ರಯತ್ನಗಳು ಸುರಕ್ಷಿತ, ಸುಭದ್ರ ಮತ್ತು ಪ್ರಯಾಣಿಕ ಸ್ನೇಹಿ ಪ್ರಯಾಣದ ಅನುಭವಕ್ಕೆ ಅದರ ಬದ್ಧತೆಯ ಪ್ರತಿಬಿಂಬವಾಗಿದೆ.

360 ಡಿಗ್ರಿಯ ಕಣ್ಗಾವಲು: ಉತ್ತರ ರೈಲ್ವೆಯ ಲೋಕೋ ಎಂಜಿನ್ ಗಳು ಮತ್ತು ಕೋಚ್‌ಗಳಲ್ಲಿ 360 ಡಿಗ್ರಿ ಸಮಗ್ರ ವ್ಯಾಪ್ತಿ ಸಿಸಿ ಕೆಮೆರಾ ಅಳವಡಿಸಿದ ಬಳಿಕ ಅಪರಾಧ ಕೃತ್ಯಗಳು ಗಣನೀಯವಾಗಿ ಇಳಿದಿವೆ. ಈ ಹಿನ್ನೆಲೆಯಲ್ಲಿ ದೇಶದ ಎಲ್ಲ ರೈಲುಗಳ 74,000 ಕೋಚ್ ಗಳು ಮತ್ತು 15,000 ಲೋಕೋಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲು ರೈಲ್ವೆ ಸಚಿವರು ಅನುಮತಿ ನೀಡಿದ್ದಾರೆ. ಪ್ರತಿ ರೈಲ್ವೆ ಕೋಚ್ ಗೆ 4 ಡೋಮ್ ಮಾದರಿಯ ಸಿಸಿಟಿವಿ ಕ್ಯಾಮೆರಾಗಳು, ಪ್ರತಿ ಪ್ರವೇಶ ದ್ವಾರದಲ್ಲಿ 2 ಕ್ಯಾಮೆರಾಗಳು ಮತ್ತು ಪ್ರತಿ ಲೋಕೋಮೋಟಿವ್‌ಗೆ 6 ಸಿಸಿಟಿವಿ ಕೆಮೆರಾಗಳು ಅಳವಡಿಸಲಾಗುತ್ತದೆ. ಇದರಲ್ಲಿ ಲೋಕೋಮೋಟಿವ್ ಮುಂಭಾಗ, ಹಿಂಭಾಗ ಮತ್ತು ಎರಡೂ ಬದಿಗಳಲ್ಲಿ ತಲಾ ಒಂದು ಕೆಮರಾ ಅಳವಡಿಸಲಾಗುವುದು. ಲೋಕೋಮೋಟಿವ್‌ನ ಪ್ರತಿ ಕ್ಯಾಬ್ (ಮುಂಭಾಗ ಮತ್ತು ಹಿಂಭಾಗ) 1 ಡೋಮ್ ಸಿಸಿಟಿವಿ ಕೆಮರಾ ಮತ್ತು 2 ಡೆಸ್ಕ್ ಮೌಂಟೆಡ್ ಮೈಕ್ರೊಫೋನ್ ಗಳನ್ನು ಅಳವಡಿಸಲಾಗುವುದು ಎಂದು ರೈಲ್ವೆ ಮೂಲಗಳು ತಿಳಿಸಿವೆ.

ಭಟ್ಕಳ ಸ್ಫೋಟಿಸುವುದಾಗಿ ಬೆದರಿಕೆ: ಇಬ್ಬರು ವಶಕ್ಕೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ನಗರವನ್ನು 24 ಗಂಟೆಯೊಳಗೆ ಸ್ಫೋಟಿಸುವುದಾಗಿ ಭಟ್ಕಳ ಶಹರ ಠಾಣೆಗೆ ಇಮೇಲ್ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮೂಲದ ಕಣ್ಣನ್ ಎಂಬಾತನನ್ನು ಭಟ್ಕಳ ಶಹರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಈ ಕುರಿತು ಮಾತನಾಡಿದ ಉತ್ತರ ಕನ್ನಡ ಜಿಲ್ಲೆಯ ಎಸ್.ಪಿ ಎಂ.ನಾರಾಯಣ್, ಕಣ್ಣನ್ ಮೊಬೈಲ್‌ನಿಂದ ಮತ್ತೊಬ್ಬ ವ್ಯಕ್ತಿ ಕೃತ್ಯ ಮಾಡಿರುವುದು ಬಯಲಿಗೆ ಬಂದಿದೆ. ಮೊಬೈಲ್‌ಅನ್ನು ಹೇಗೆ ಆತ ತೆಗೆದುಕೊಂಡ ಎಂಬುದರ ಬಗ್ಗ ಮಾಹಿತಿ ಕಲೆ ಹಾಕಿರುವ ಪೊಲೀಸರು, ಕಣ್ಣನ್ ಮತ್ತು ಮೋಸ್ಟ್ ವಾಂಟೆಡ್ ವ್ಯಕ್ತಿಯ ನಡುವಿನ ಭೇಟಿಯ ಕುರಿತು ತನಿಖೆ ಬಳಿಕ ಮಾಹಿತಿ ನೀಡುವುದಾಗಿ ತಿಳಿಸಿದ್ದಾರೆ.

ಕಣ್ಣನ್ ಮೊಬೈಲ್ ಮೂಲಕ ಪೋಸ್ಟ್ ಮಾಡಿದ ಮೋಸ್ಟ್ ವಾಂಟೆಡ್ ವ್ಯಕ್ತಿ ಮೈಸೂರಿನಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಹಿಂದೆ ಮೈಸೂರು, ಬಳ್ಳಾರಿ, ಕೇರಳ ಸೇರಿದಂತೆ ಬೇರೆ ಕಡೆಗೂ ಬಾಂಬ್ ಸ್ಫೋಟಿಸುವ ಬೆದರಿಕೆ ಹಾಕಿದ್ದ. ಆರೋಪಿಯನ್ನು ಕರ್ನಾಟಕ ಮತ್ತು ಕೇರಳ ಪೊಲೀಸರ ಜಂಟಿ ಕಾರ್ಯಾಚರಣೆಯಲ್ಲಿ ಪತ್ತೆ ಮಾಡಲಾಗಿದೆ. ಮೈಸೂರಿನಿಂದ ಕಾರವಾರಕ್ಕೆ ಕರೆತಂದು ವಿಚಾರಣೆ ನಡೆಸಲಾಗುವುದು ಎಂದು ಎಸ್.ಪಿ ಎಂ.ನಾರಾಯಣ್ ಹೇಳಿದ್ದಾರೆ.

ಭಾರತೀಯರಿಂದ ಅಧಿಕ ಉಪ್ಪು ಸೇವನೆ

← ಮೊದಲಪುಟದಿಂದ

ಭಾರತೀಯರಲ್ಲಿ ಉಪ್ಪಿನ ಸೇವನೆಯ ಪ್ರಮಾಣ ಅಧಿಕವಾಗಿದೆ. ಮನೆಯಿಂದ ಹೊರಗೆ ತಯಾರಿಸುವ ಹಾಗೂ ಸಂಸ್ಕರಿತ ಆಹಾರಗಳನ್ನು ಕಡಿತಗೊಳಿಸುವ ಅಗತ್ಯವಿದೆ. ಸಮೀಕ್ಷೆಯಲ್ಲಿ 10,659 ಮಂದಿ ಪಾಲ್ಗೊಂಡಿದ್ದು, 18ರಿಂದ 69 ವರ್ಷ ವಯಸ್ಸಿನವರಾಗಿದ್ದಾರೆ ಅಧ್ಯಯನ ತಂಡದ ನೇತೃತ್ವ ವಹಿಸಿದ ಪ್ರಶಾಂತ್ ಮಾಥುರ್ ತಿಳಿಸಿದ್ದಾರೆ. ಉದ್ಯೋಗಸ್ಥರು ಹಾಗೂ ತಂಬಾಕು ಬಳಕೆದಾರರಲ್ಲಿ ಉಪ್ಪಿನ ಸೇವನೆ ಪ್ರಮಾಣ (8.3 ಗ್ರಾಂ) ಹೆಚ್ಚಿರುವುದು ಅಧ್ಯಯನದಿಂದ ಕಂಡುಬಂದಿದೆ. ಅಧಿಕ ರಕ್ತದೊತ್ತಡವಿರುವವರಲ್ಲಿ ಉಪ್ಪಿನ ಸೇವನೆ ಪ್ರಮಾಣವು (8.5) ಹೆಚ್ಚಿದೆ. 2025ರೊಳಗೆ ಉಪ್ಪಿನ ಸೇವನೆಯ ಪ್ರಮಾಣದಲ್ಲಿ 30 ಶೇಕಡಾದಷ್ಟು ಇಳಿಕೆ ಮಾಡುವ ಯೋಜನೆಯನ್ನು ಹಮ್ಮಿಕೊಳ್ಳುವಂತೆಯೂ ವರದಿ ಶಿಫಾರಸು ಮಾಡಿದೆ. ಕಡಿಮೆ ಪ್ರಮಾಣದ ಉಪ್ಪಿನ ಸೇವನೆಯಿಂದ ಅಧಿಕ ರಕ್ತದೊತ್ತಡವನ್ನು ಶೇ.25ರಷ್ಟು ಕಡಿಮೆ ಮಾಡಬಹುದಾಗಿದೆ ಎಂದು ವರದಿ ಹೇಳಿದೆ. ಭಾರತದಲ್ಲಿ ಸಂಭವಿಸುವ ಒಟ್ಟು ಸಾವುಗಳಲ್ಲಿ ಅಂದಾಜು 28.1 ಶೇಕಡಾದಷ್ಟು ಹೃದಯನಾಳಕ್ಕೆ ಸಂಬಂಧಿಸಿದ ಕಾಯಿಲೆಗಳಿಂದಾಗುತ್ತವೆ., 2016ರಲ್ಲಿ 10.63 ಲಕ್ಷ ಮಂದಿ ಅಧಿಕರಕ್ತದೊತ್ತಡದಿಂದ ಸಾವನ್ನಪ್ಪಿದ್ದು, 1990ರಲ್ಲಿ ಇದೇ ಕಾಯಿಲೆಗೆ ಬಲಿಯಾದವರ ಸಂಖ್ಯೆ 78 ಸಾವಿರದಷ್ಟಿತ್ತು ಎಂದು ವರದಿ ತಿಳಿಸಿದೆ.

ಉಸ್ತುವಾರಿ ಜತೆ ಕುಸ್ತಿ

← ಮೊದಲಪುಟದಿಂದ

ಇದಕ್ಕೆ ಕೆಲವು ಹಿರಿಯ ಸಚಿವರು, ಕೆಪಿಸಿಸಿ ಹುದ್ದೆ ಮೇಲೆ ಕಣ್ಣಿಟ್ಟಿರುವ ಅನೇಕ ನಾಯಕರ ಸಂಪೂರ್ಣ ಬೆಂಬಲವಿದೆ ಎಂದು ಹೇಳಲಾಗುತ್ತಿದೆ. ಆದರೆ ಸುರ್ಜೇವಾಲ ಅವರು ಸರಕಾರ ಮತ್ತು ಪಕ್ಷದಲ್ಲಿರುವ ಅಸಮಾಧಾನದ ಬಗ್ಗೆ ಸೋಮವಾರದಿಂದ ಮೂರನೇ ಸುತ್ತಿನ ಚರ್ಚೆ, ಅಭಿಪ್ರಾಯ ಸಂಗ್ರಹ ನಡೆಸುತ್ತಿದ್ದು, ಇದಾದ ನಂತರ ಪರಿಸ್ಥಿತಿ ನೋಡಿಕೊಂಡು ಸಚಿವರು ಕೂಡ ದೆಹಲಿಗೆ ತೆರಳಲಿದ್ದಾರೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಸುರ್ಜೇವಾಲ ವಿರುದ್ಧ ಮುನಿಸು ಯಾಕೆ?: ಕಾಂಗ್ರೆಸ್ ಸರಕಾರ ಎರಡು ವರ್ಷ ಪೂರೈಸಿರುವ ಸಂಭ್ರಮದಲ್ಲಿತ್ತು. ಆಗ ಆಳಂದ ಶಾಸಕ ಬಿ.ಆರ್ .ಪಾಟೀಲ್ ಅವರು ವಸತಿ ಇಲಾಖೆಯ ಅಕ್ರಮಗಳನ್ನು ಬಹಿರಂಗಗೊಳಿಸಿದರೆ, ಕಾಗವಾಡ ಶಾಸಕ ರಾಜು ಕಾಗೆ ಅನುದಾನ ಕೊರತೆ ಬಗ್ಗೆ ಅಳಲು ತೋಡಿಕೊಂಡಿದ್ದರು. ನಂತರ ಅವರಿಬ್ಬರೊಂದಿಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚಿಸಿ ಅನುದಾನ ಸಮಸ್ಯೆಗಳನ್ನು ಸರಿಪಡಿಸಿದ್ದರು. ಅಲ್ಲಿಗೆ ಅಪಸ್ವರಕ್ಕೆ ತೆರೆ ಬಿದ್ದಿತ್ತು. ಆದರೆ ಇದೇ ವಿಚಾರವನ್ನು ಮುಂದಿಟ್ಟುಕೊಂಡು ಬಂದ ರಾಜ್ಯ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೇವಾಲ, ಮತ್ತೆ ಬಿ.ಆರ್.ಪಾಟೀಲ್ ಮತ್ತು ರಾಜು ಕಾಗೆ ಅವರನ್ನು ಕರೆದು ಹಳೇಯದನ್ನು ಕೆದಕಿದರಲ್ಲದೆ, ಇತರ ಶಾಸಕರನ್ನೂ ಕರೆದು ಏನೆಲ್ಲಾ ಸಮಸ್ಯೆಗಳಿವೆ? ಸರಕಾರದಲ್ಲಿ ಏನೆಲ್ಲಾ ಅಸಮಾಧಾನಗಳಿವೆ? ಎನ್ನುವ ಪ್ರಶ್ನೆಗಳನ್ನು ಹಾಕುವ ಮೂಲಕ ಗುಂಡಿ ತೋಡಲಾರಂಭಿಸಿದರು. ಈ ಮೂಲಕ ರಾಜ್ಯದಲ್ಲಿ ನಾಯಕತ್ವ ಸಮಸ್ಯೆ ಇದೆ. ಸಚಿವರ ಅವ್ಯವಹಾರ ಹೆಚ್ಚಾಗಿದೆ. ನಿರ್ಲಕ್ಷ್ಯ ಅಧಿಕವಾಗಿದೆ ಎನ್ನುವ ಸಂದೇಶ ರವಾನಿಸಿದರು ಎಂದು ಶಾಸಕರು ಬೇಸರಗೊಂಡಿದ್ದಾರೆ. ಅಷ್ಟಕ್ಕೂ ನಾಯಕತ್ವದ ವಿಚಾರ ತೀರಾ ಬೀದಿಗೆ ಬಂದು ಕಚ್ಚಾಡುವ ಹಂತಕ್ಕೇನೂ ಹೋಗಿರಲ್ಲಿಲ. ಆದರೂ ಈ ಬೆಳವಣಿಗೆ ನಾಯಕತ್ವ ಬದಲಾವಣೆ ಚರ್ಚೆಯನ್ನು ವಿಪರೀತಕ್ಕೆ ಕೊಂಡ್ಯೊಯ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬರೂ ದೆಹಲಿಗೆ ತೆರಳುವಂತಾಗಿತ್ತು. ಆದರೆ ಅವರಿಗೆ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಭೇಟಿಗೆ ಅವಕಾಶ ಸಿಗದೆ ಪ್ರವಾಸ ಹೋದ ಪುಟ್ಟ, ಬಂದ ಪುಟ್ಟ ಕಥೆಯಂತಾಗಿತ್ತು. ಇದರ ಮುಂದುವರಿದ ಭಾಗವಾಗಿ ಸಿಎಂ ಸಿದ್ದರಾಮಯ್ಯ ಅವರು ಜುಲೈ 30ರಂದು ಮತ್ತೆ ದೆಹಲಿಗೆ ತೆರಳಿದ್ದಾರೆ.

ಇದಕ್ಕೆ ಕೆಲವು ಹಿರಿಯ ಸಚಿವರು, ಕೆಪಿಸಿಸಿ ಹುದ್ದೆ ಮೇಲೆ ಕಣ್ಣಿಟ್ಟಿರುವ ಅನೇಕ ನಾಯಕರ ಸಂಪೂರ್ಣ ಬೆಂಬಲವಿದೆ ಎಂದು ಹೇಳಲಾಗುತ್ತಿದೆ. ಆದರೆ ಸುರ್ಜೇವಾಲ ಅವರು ಸರಕಾರ ಮತ್ತು ಪಕ್ಷದಲ್ಲಿರುವ ಅಸಮಾಧಾನದ ಬಗ್ಗೆ ಸೋಮವಾರದಿಂದ ಮೂರನೇ ಸುತ್ತಿನ ಚರ್ಚೆ, ಅಭಿಪ್ರಾಯ ಸಂಗ್ರಹ ನಡೆಸುತ್ತಿದ್ದು, ಇದಾದ ನಂತರ ಪರಿಸ್ಥಿತಿ ನೋಡಿಕೊಂಡು ಸಚಿವರು ಕೂಡ ದೆಹಲಿಗೆ ತೆರಳಲಿದ್ದಾರೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಸುರ್ಜೇವಾಲ ವಿರುದ್ಧ ಮುನಿಸು ಯಾಕೆ?: ಕಾಂಗ್ರೆಸ್ ಸರಕಾರ ಎರಡು ವರ್ಷ ಪೂರೈಸಿರುವ ಸಂಭ್ರಮದಲ್ಲಿತ್ತು. ಆಗ ಆಳಂದ ಶಾಸಕ ಬಿ.ಆರ್ .ಪಾಟೀಲ್ ಅವರು ವಸತಿ ಇಲಾಖೆಯ ಅಕ್ರಮಗಳನ್ನು ಬಹಿರಂಗಗೊಳಿಸಿದರೆ, ಕಾಗವಾಡ ಶಾಸಕ ರಾಜು ಕಾಗೆ ಅನುದಾನ ಕೊರತೆ ಬಗ್ಗೆ ಅಳಲು ತೋಡಿಕೊಂಡಿದ್ದರು. ನಂತರ ಅವರಿಬ್ಬರೊಂದಿಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚಿಸಿ ಅನುದಾನ ಸಮಸ್ಯೆಗಳನ್ನು ಸರಿಪಡಿಸಿದ್ದರು. ಅಲ್ಲಿಗೆ ಅಪಸ್ವರಕ್ಕೆ ತೆರೆ ಬಿದ್ದಿತ್ತು. ಆದರೆ ಇದೇ ವಿಚಾರವನ್ನು ಮುಂದಿಟ್ಟುಕೊಂಡು ಬಂದ ರಾಜ್ಯ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೇವಾಲ, ಮತ್ತೆ ಬಿ.ಆರ್.ಪಾಟೀಲ್ ಮತ್ತು ರಾಜು ಕಾಗೆ ಅವರನ್ನು ಕರೆದು ಹಳೇಯದನ್ನು ಕೆದಕಿದರಲ್ಲದೆ, ಇತರ ಶಾಸಕರನ್ನೂ ಕರೆದು ಏನೆಲ್ಲಾ ಸಮಸ್ಯೆಗಳಿವೆ? ಸರಕಾರದಲ್ಲಿ ಏನೆಲ್ಲಾ ಅಸಮಾಧಾನಗಳಿವೆ? ಎನ್ನುವ ಪ್ರಶ್ನೆಗಳನ್ನು ಹಾಕುವ ಮೂಲಕ ಗುಂಡಿ ತೋಡಲಾರಂಭಿಸಿದರು. ಈ ಮೂಲಕ ರಾಜ್ಯದಲ್ಲಿ ನಾಯಕತ್ವ ಸಮಸ್ಯೆ ಇದೆ. ಸಚಿವರ ಅವ್ಯವಹಾರ ಹೆಚ್ಚಾಗಿದೆ. ನಿರ್ಲಕ್ಷ್ಯ ಅಧಿಕವಾಗಿದೆ ಎನ್ನುವ ಸಂದೇಶ ರವಾನಿಸಿದರು ಎಂದು ಶಾಸಕರು ಬೇಸರಗೊಂಡಿದ್ದಾರೆ. ಅಷ್ಟಕ್ಕೂ ನಾಯಕತ್ವದ ವಿಚಾರ ತೀರಾ ಬೀದಿಗೆ ಬಂದು ಕಚ್ಚಾಡುವ ಹಂತಕ್ಕೇನೂ ಹೋಗಿರಲ್ಲಿಲ. ಆದರೂ ಈ ಬೆಳವಣಿಗೆ ನಾಯಕತ್ವ ಬದಲಾವಣೆ ಚರ್ಚೆಯನ್ನು ವಿಪರೀತಕ್ಕೆ ಕೊಂಡ್ಯೊಯ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬರೂ ದೆಹಲಿಗೆ ತೆರಳುವಂತಾಗಿತ್ತು. ಆದರೆ ಅವರಿಗೆ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಭೇಟಿಗೆ ಅವಕಾಶ ಸಿಗದೆ ಪ್ರವಾಸ ಹೋದ ಪುಟ್ಟ, ಬಂದ ಪುಟ್ಟ ಕಥೆಯಂತಾಗಿತ್ತು. ಇದರ ಮುಂದುವರಿದ ಭಾಗವಾಗಿ ಸಿಎಂ ಸಿದ್ದರಾಮಯ್ಯ ಅವರು ಜುಲೈ 30ರಂದು ಮತ್ತೆ ದೆಹಲಿಗೆ ತೆರಳಿದ್ದಾರೆ.

ಕಲಬುರಗಿ: ಚಿನ್ನ ದರೋಡೆ ಗೈದ ಖದೀಮರು ಪ.ಬಂಗಾಳದವರು?

ಐವರು ಆರೋಪಿಗಳ ಪತ್ತೆಗೆ ಪಶ್ಚಿಮ ಬಂಗಾಳಕ್ಕೆ ತೆರಳಿದ ಪೊಲೀಸರು

ಕಲಬುರಗಿ: ನಗರದ ಸರಾಫ್ ಬಜಾರ್‌ನಲ್ಲಿ ಹಾಡಹಗಲೇ ಮಾಲೀಕನ ಕೈ ಕಾಲು ಕಟ್ಟಿ ಚಿನ್ನಾಭರಣ ದರೋಡೆ ಮಾಡಿದ ಪ್ರಕರಣದಲ್ಲಿ ಪೊಲೀಸರು ಪ್ರಮುಖ ಸುಳಿವು ಕಲೆಹಾಕಿದ್ದು, ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ನಾಲ್ವರು ದರೋಡಿ ಮಾಡಿರುವುದು ಪ್ರಾಥಮಿಕ ಹಂತದ ತನಿಖೆಯಲ್ಲಿ ಕಂಡು ಬಂದಿತ್ತು. ಇದೀಗ ದರೋಡೆಯಲ್ಲಿ ಮತ್ತೊಬ್ಬನ ಪಾತ್ರ ಇರುವುದನ್ನು ಪೊಲೀಸರು ಖಚಿತ ಪಡಿಸಿಕೊಂಡಿದ್ದಾರೆ. ಈತನೇ ದರೋಡೆ ಸಂಚಿನ ರೂವಾರಿ ಎನ್ನಲಾಗಿದೆ.

ಚಿನ್ನಾಭಾರಣ ದರೋಡೆ ಮಾಡಿದ ಬಳಿಕ ನಾಲ್ವರು ನಗರದ ಕೇಂದ್ರ ಬಸ್ ನಿಲ್ದಾಣಕ್ಕೆ ಆಗಮಿಸಿದ ವೇಳೆ, ಸಂಪೂರ್ಣ ಪ್ರಕರಣದ ಹಿಂದಿರುವ ಮಾಸ್ಟರ್ ಮೈಂಡ್ ರೀತಿ ಯೋಜನೆ ರೂಪಿಸಿದ ಮತ್ತೊಬ್ಬ ಪ್ರವೇಶ ನೀಡಿದ್ದಾನೆ. ದರೋಡೆ ನಡೆಸಿದ ಇನ್ನುಳಿದ ನಾಲ್ವರು ಆರೋಪಿಗಳಿಗೆ ಐದನೇ ಆರೋಪಿ ಈ ನಾಲ್ವರಿಗೆ ಹಣಕಾಸಿನ ಸಹಾಯ ಮಾಡಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ಲಭ್ಯವಾಗಿದೆ.

ನಾಲ್ವರು ದರೋಡೆಕೋರರು ಮೊಬೈಲ್ ಬಳಕೆ ಮಾಡದೆ ಐದನೇ ಆರೋಪಿ ಮಾತ್ರ ಮೊಬೈಲ್ ಬಳಕೆ ಮಾಡಿದ್ದಾನೆ. ನಗರದ ಬಸ್ ಸ್ಟ್ಯಾಂಡ್ ಬಳಿಯ ಹೋಟೆಲ್ ವೊಂದರಲ್ಲಿ ಫೋನ್ ಪೇ ಮೂಲಕ ಹಣ ಪಾವತಿ ಮಾಡಿದ್ದಾನೆ. ಫೋನ್ ಪೇ ನಂಬರ್ ಆಧಾರದ ಮೇಲೆ ಐದನೇ ಆರೋಪಿಯ ಬಗ್ಗೆ ಪೊಲೀಸರು ಮಾಹಿತಿ ಕಲೆ ಹಾಕಿದ್ದು, ಖದೀಮರ ಬೇಟೆಗೆ ಪೊಲೀಸ್ ತಂಡಗಳು ಸಿದ್ಧಗೊಂಡಿವೆ.

> **ಹೈದರಾಬಾದ್‌ನಿಂದ ಪಶ್ಚಿಮ ಬಂಗಾಳಕ್ಕೆ ಪರಾರಿ**
> **ಕಲಬುರಗಿ ನಗರದ ಸರಾಫ್ ಬಜಾರ್‌ನಲ್ಲಿ ಚಿನ್ನದ ಅಂಗಡಿ ದರೋಡೆ ಬಗ್ಗೆ ಪೊಲೀಸರು ಮಹತ್ವದ ಸುಳಿವು ಸಿಕ್ಕಿದೆ. ದರೋಡೆಕೋರರು ಪಶ್ಚಿಮ ಬಂಗಾಳದಿಂದ ಬಂದು ದರೋಡೆ ಮಾಡಿ, ಎಸ್ಕೇಪ್ ಆಗಿರುವ ಬಗ್ಗೆ ಶಂಕೆ ಇದೆ. ದರೋಡೆ ಬಳಿಕ ಆರೋಪಿಗಳು ಕಲಬುರಗಿಯಿಂದ ಹೈದರಾಬಾದ್‌ಗೆ ತೆರಳಿ ಅಲ್ಲಿಂದ ಪಶ್ಚಿಮ ಬಂಗಾಳಕ್ಕೆ ಹೋಗಿರುವ ಮಾಹಿತಿ ಇದೆ. ದರೋಡೆಕೋರ ಜಾಡು ಹಿಡಿದು ಪೊಲೀಸರ ತಂಡ ಪಶ್ಚಿಮ ಬಂಗಾಳದತ್ತ ತೆರಳಿದೆ.**

ಸಮಾಚಾರ ಸಣ್ಣದಲ್ಲ

ರಾಜ್ಯಾಧ್ಯಕ್ಷರನ್ನು ಹೈ ತೀರ್ಮಾನಿಸುತ್ತದೆ

ಕಲಬುರಗಿ: ಬೇರೆ ರಾಜ್ಯಗಳಲ್ಲಿ ರಾಜ್ಯಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಕರ್ನಾಟಕದಲ್ಲೂ ರಾಜ್ಯಾಧ್ಯಕ್ಷ ಬದಲಾವಣೆ ಆಗಬೇಕು ಎನ್ನುವುದು ಕೆಲವರಲ್ಲಿ ಬೇಡಿಕೆ ಇದೆ. ಅದರ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತೆ ಎಂದು ಸಂಸದ ಕೋಟಾ ಶ್ರೀನಿವಾಸ್ ಪೂಜಾರಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ರಾಜ್ಯದಕ್ಷ ಸ್ಥಾನದ ಚುನಾವಣೆ ಬಗ್ಗೆ ಸಂಪೂರ್ಣ ಹೈಕಮಾಂಡ್ ನಿರ್ಧಾರ ಕೈಗೊಳ್ಳುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಚುನಾವಣೆ ನಿಲ್ಲಲು ಅವಕಾಶವಿದೆ. ಹೀಗಾಗಿ, ರಾಜ್ಯಾಧ್ಯಕ್ಷ ಬದಲಾವಣೆ ಕೆಲವರ ಬೇಡಿಕೆಯಾಗಿದೆ. ಇದರಿಂದಾಗಿ ಬಿಜೆಪಿಯಲ್ಲಿ ಯಾವುದೇ ಗೊಂದಲ ಇಲ್ಲ ಎಂದು ಸ್ಪಷ್ಟಪಡಿಸಿದರು. ಇನ್ನೂ, ಹಿಂದುಳಿದ ವರ್ಗಗಳ ಜನರ ಸಮಸ್ಯೆ ಹಾಗೂ ಕೇಂದ್ರ ಸರಕಾರದ ಜಾತಿಗಣತಿ ಬಗ್ಗೆ ಚರ್ಚೆ ನಡೆಸಲಾಗಿದೆ. ರಾಜ್ಯದಲ್ಲಿ ಸಿದ್ದರಾಮಯ್ಯ ಸರಕಾರ ಮಾಡಿದ ಸಾಮಾಜಿಕ ಹಾಗೂ ಶೈಕ್ಷಣಿಕ ನಡೆಸಿರುವ ಜಾತಿಗಣತಿಯ ಬಗ್ಗೆಯು ಚರ್ಚೆ ನಡೆಯುತ್ತಿದೆ. ಹಿಂದುಳಿದ ವರ್ಗಗಳಿಗೆ ಶಕ್ತಿ ಕೊಡಬೇಕು. ಸಂಘಟನೆಯ ಜತೆಗೆ ಸಮಸ್ಯೆ ಬಗೆಹರಿಸಬೇಕು ಎಂದು ಚರ್ಚೆ ಕೈಗೆತ್ತಿಕೊಂಡಿದ್ದೇವೆ ಎಂದು ಹೇಳಿದರು.

ಕೊಚ್ಚಿ ಹೋದ ಮೂವರ ಶವ ಪತ್ತೆ

ರಾಯಚೂರು: ಮಂತ್ರಾಲಯ ಬಳಿ ತುಂಗಭದ್ರಾ ನದಿಯಲ್ಲಿ ಈಜಲು ತೆರಳಿ ನೀರುಪಾಲಾಗಿದ್ದ ಹಾಸನ ಮೂಲದ ಮೂವರು ಯುವಕರು ಶವವಾಗಿ ಪತ್ತೆಯಾಗಿದ್ದಾರೆ. ರಾಘವೇಂದ್ರ ಸ್ವಾಮಿ ದರ್ಶನಕ್ಕೆ ರಾಯರ ಮಠಕ್ಕೆ ಬಂದಿದ್ದ ಯುವಕರು ಶನಿವಾರ ಸಂಜೆ ನದಿಗೆ ಈಜಲು ಹೋದಾಗ ಘಟನೆ ನಡೆದಿತ್ತು. ನೀರಿನಲ್ಲಿ ನಾಪತ್ತೆಯಾಗಿದ್ದ ಸ್ಥಳದಲ್ಲೇ ಮೃತದೇಹಗಳು ಪತ್ತೆಯಾಗಿವೆ. ಶನಿವಾರದಿಂದ ನಿರಂತರ ಶೋಧ ಕಾರ್ಯ ಬಳಿಕ ನಾಪತ್ತೆಯಾದ ಶವಗಳು ಭಾನುವಾರ ಪತ್ತೆಯಾಗಿವೆ. ಹಾಸನ ಮೂಲದ ಅಜಿತ್ (20), ಸಚಿನ್ (20), ಪ್ರಮೋದ್ (19) ಮೃತ ದುರ್ದೈವಿಗಳು. ಆಂಧ್ರಪ್ರದೇಶದ ಎಸ್‌ಡಿಆರ್‌ಎಫ್ ತಂಡದಿಂದ ನಡೆದ ಶೋಧ ಕಾರ್ಯದ ವೇಳೆ ಶವಗಳು ಪತ್ತೆಯಾಗಿವೆ. ಮಂತ್ರಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮರಣೋತ್ತರ ಪರೀಕ್ಷೆಗಾಗಿ ಮೃತದೇಹಗಳನ್ನು ಶವಾಗಾರಕ್ಕೆ ರವಾನಿಸಲಾಗಿದೆ. ಮಕ್ಕಳನ್ನ ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ.

ಸಮೀರ್ ವಿರುದ್ಧ ಪ್ರಕರಣ ದಾಖಲು

ಮಂಗಳೂರು: ಧರ್ಮಸ್ಥಳದಲ್ಲಿ ನಡೆದಿದೆ ಎಂದು ಆರೋಪಿಸಲಾಗುತ್ತಿರುವ ಸರಣಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಳ್ಳು ಮಾಹಿತಿಯೊಂದಿಗೆ ವಿಡಿಯೊ ಪ್ರಸಾರ ಮಾಡಿದ ಹಿನ್ನೆಲೆಯಲ್ಲಿ ಯೂಟ್ಯೂಬರ್ ಸಮೀರ್ ಎಂ.ಡಿ. ವಿರುದ್ಧ ಧರ್ಮಸ್ಥಳ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪ್ರಕರಣದ ದೂರು ದಾರರು ನೂರಾರು ಮೃತದೇಹಗಳನ್ನು ಬಲವಂತವಾಗಿ ಹೂತು ಹಾಕಿದ್ದೇನೆಂದು ನ್ಯಾಯಾಲಯದ ಮುಂದೆ ಹೇಳಿಕೆ ನೀಡಿದ್ದರು. ಇದರ ಬೆನ್ನಲ್ಲೇ ಸಮೀರ್ ಎಂ.ಡಿ. ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಒಟ್ಟು ಪ್ರಕರಣದ ಬಗ್ಗೆ ಕೃತಕ ಬುದ್ಧಿಮತ್ತೆ (ಎಐ) ರಚಿತ ಮತ್ತು ಸುಳ್ಳು ಮಾಹಿತಿಗಳನ್ನು ಒಳಗೊಂಡ ವಿಡಿಯೊವನ್ನು ಪ್ರಸಾರ ಮಾಡಿದ್ದು. ಸುಳ್ಳು ಮಾಹಿತಿಯೊಂದಿಗೆ ವಿಡಿಯೊ ಅಪ್ಲೋಡ್ ಮಾಡಿದ್ದಕ್ಕಾಗಿ ಸಮೀರ್ ವಿರುದ್ಧ ಬಿಎನ್‌ಎಸ್‌ನ ಸೆಕ್ಷನ್ 192, 240, 353(1)(ಬಿ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ದಕ್ಷಿಣ ಕನ್ನಡ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ ತಿಳಿಸಿದ್ದಾರೆ. ಸಾರ್ವಜನಿಕರನ್ನು ಉದ್ದೇಶ ಪೂರ್ವಕವಾಗಿ ಪ್ರಚೋದಿಸುವ ಉದ್ದೇಶದಿಂದ ಈ ವಿಡಿಯೊ ಪ್ರಸಾರ ಮಾಡ ಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿತಿನ್ ಗಡ್ಕರಿಯನ್ನು ಪ್ರಧಾನಿ ಮಾಡಿ

ಶಿವಮೊಗ್ಗ: ಪ್ರಧಾನಿ ನರೇಂದ್ರ ಮೋದಿ ಅವರನ್ನು 75 ವರ್ಷದ ನಿಯಮನುಸಾರ ಕೆಳಗಿಳಿಸಿ, ರೋಡ್ ಮ್ಯಾನ್ ಆಫ್ ಇಂಡಿಯಾ ಎಂದೇ ಖ್ಯಾತಿ ಪಡೆದಿರುವ ನಿತಿನ್ ಗಡ್ಕರಿ ಅವರನ್ನು ಪ್ರಧಾನಿಯನ್ನಾಗಿ ಮಾಡಿ ಎಂದು ಶಾಸಕ ಬೇಳೂರು ಗೋಪಾಲಕೃಷ್ಣ ಬಿಜೆಪಿಗೆ ಸಲಹೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ 'ವಯಸ್ಸಿನ ಮಿತಿ' ಹೇಳಿಕೆಯನ್ನು ಉಲ್ಲೇಖಿಸಿದರು. ಬಿಜೆಪಿಯಲ್ಲಿನ 75 ವಯೋಮಿತಿಯ ಅನುಸಾರ ಈಗಿನ ಪ್ರಧಾನಿ ಮೋದಿ ಅವರು ಹುದ್ದೆಯಿಂದ ಕೆಳಗಿಳಿಯಬೇಕು. ಅವರ ಸ್ಥಾನಕ್ಕೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಉತ್ತರಾಧಿಕಾರಿಯಾಗಿ ಆಯ್ಕೆಯಾಗಲಿ ಎಂದಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
14.07.2025
ಸೋಮವಾರದ ಅತಿಥಿ

ಪ್ರೊ.ಪ್ರಶಾಂತ್ ಹೆಗಡೆ
ವಿಷಯ
ಕಗ್ಗದೊಳಗಿನ ಸಗ್ಗ
vishwavani.news

ದೇವನಹಳ್ಳಿ ಭೂ ಸ್ವಾಧೀನ ಬಿಕ್ಕಟ್ಟು | ನಾಳೆ ಸಿಎಂ ಸಿದ್ದರಾಮಯ್ಯ ಅಂತಿಮ ತೀರ್ಮಾನ: ಎಂ.ಬಿ.ಪಾಟೀಲ

ಕೃಷಿ, ಕೈಗಾರಿಕೆ ಸರಿದೂಗಿಸುವುದು ನಮ್ಮ ಕರ್ತವ್ಯ

ಬೆಂಗಳೂರು: ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯಲ್ಲಿ ಹೈಟೆಕ್ ರಕ್ಷಣಾ ಮತ್ತು ವೈಮಾನಿಕ ಪಾರ್ಕ್ ಸ್ಥಾಪನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 15ರಂದು ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ. ಒಟ್ಟಿನಲ್ಲಿ ಕೃಷಿ ಮತ್ತು ಕೈಗಾರಿಕೆ ಎರಡನ್ನೂ ಸರಿದೂಗಿಸಿಕೊಂಡು ಹೋಗಬೇಕೆನ್ನುವುದು ತಮ್ಮ ಕಳಕಳಿಯಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಬೆಂಗಳೂರಿನ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಅಲ್ಲಿ ಕೆಲವರು ಭೂಸ್ವಾಧೀನ ಬೇಡವೆಂದು ಹೋರಾಟ ಮಾಡುತ್ತಿದ್ದಾರೆ. ಮತ್ತೆ ಕೆಲವರು 449 ಎಕರೆ ಜಮೀನನ್ನು ಬಿಟ್ಟುಕೊಡಲು ಸಿದ್ಧವಾಗಿದ್ದು, ಎಕರೆಗೆ 3.5 ಕೋಟಿ ರು. ಪರಿಹಾರ ಕೇಳುತ್ತಿದ್ದಾರೆ. ರೈತರಲ್ಲೇ ಈ ಬಗ್ಗೆ ಬೇರೆಬೇರೆ ಅಭಿಪ್ರಾಯಗಳಿವೆ. ಸರಕಾರವು ಎಲ್ಲಾ ರೀತಿಯ ಸಾಧಕ-ಬಾಧಕಗಳನ್ನೂ ಪರಿಶೀಲಿಸುತ್ತಿದೆ ಎಂದರು.

> ಭೂಸ್ವಾಧೀನ ಬೇಡವೆಂದು ಕೆಲವು ಸಾಹಿತಿಗಳು, ಚಿಂತಕರು ನಮ್ಮ ಪಕ್ಷದ ಹೈಕಮಾಂಡ್‌ಗೆ ಪತ್ರ ಬರೆದಿದ್ದಾರೆ. ಅದನ್ನು ನಾನು ವಿರೋಧಿಸುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಹೋರಾಡುವ ಹಕ್ಕಿದೆ. ನಾವು ಎಲ್ಲ ಸಾಧ್ಯತೆಗಳನ್ನೂ ಪರಿಶೀಲಿಸುತ್ತಿದ್ದು, ಕಾನೂನು ತಜ್ಞರ ಅಭಿಪ್ರಾಯ ಪಡೆಯುತ್ತಿದ್ದೇವೆ.
> -ಎಂ.ಬಿ.ಪಾಟೀಲ, ಸಚಿವ

ಶನಿವಾರದಂದು ಚನ್ನರಾಯಪಟ್ಟಣ ಹೋಬಳಿ ರೈತ ಹೋರಾಟ ಸಮಿತಿ ಹೆಸರಿನಲ್ಲಿ ಕೆಲವು ರೈತರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, 449 ಎಕರೆ ಸರಕಾರಕ್ಕೆ ಕೊಡುವುದಾಗಿ ಹೇಳಿದ್ದಾರೆ. ಯೋಜನೆ ಸಂಬಂಧ ಮೊದಲು ಅಧಿಸೂಚನೆ ಹೊರಡಿಸಿದ್ದೇ ಇಷ್ಟು ಭೂಮಿಗೆ. ಸರಕಾರವು ನಿಜವಾದ ರೈತರ ದನಿಗೆ ಬೆಲೆ ಕೊಡುತ್ತದೆಯೇ ವಿನಾಃ ರೈತರ ಹೆಸರಿನಲ್ಲಿ ಏನೇನೋ ಮಾತನಾಡುತ್ತಿರುವವರಿಗಲ್ಲ. ದೇವನಹಳ್ಳಿ ಸುತ್ತಮುತ್ತ ಯಾವ್ಯಾವ ಬಿಲ್ಡರ್‌ಗಳು ಎಷ್ಟೆಷ್ಟು ಭೂಮಿ ಖರೀದಿಸಿದ್ದಾರೆ, ಯಾರ ಜತೆ ಅವರು ಒಪ್ಪಂದ ಮಾಡಿಕೊಂಡಿದ್ದಾರೆ, ಯಾವ ರಾಜಕಾರಣಿಗಳ ಜಮೀನು ಎಷ್ಟಿದೆ, ಹೋರಾಟದ ಹಿಂದ ಯಾರ ಕುಮ್ಮಕ್ಕಿದೆ ಎನ್ನುವುದೆಲ್ಲ ನಮಗೆ ಗೊತ್ತಿದೆ. ದೇವನಹಳ್ಳಿ ಸುತ್ತಲಿನ ಪರಿಸರದಲ್ಲಿ ಕೃಷಿ ಉಳಿಯಬೇಕು ಎನ್ನುವ ಕೂಗೂ ಎದ್ದಿದೆ. ಹೀಗಾಗಿ ಸರಕಾರವು ಶಾಶ್ವತ ಕೃಷಿ ವಲಯ ಮಾಡುವ ಬಗ್ಗೆಯೂ ಚಿಂತಿಸುತ್ತಿದೆ. ಈಗ ಕೆಲವರು ಇದು ಬೇಡ ಎನ್ನುತ್ತಿದ್ದಾರೆ. ಈ ರೀತಿಯ ದ್ವಂದ್ವ ಸರಿಯಲ್ಲ ಎಂದರು.

- ದೇವನಹಳ್ಳಿ ಬಳಿ ಹೈಟೆಕ್ ರಕ್ಷಣಾ ಮತ್ತು ವೈಮಾನಿಕ ಪಾರ್ಕ್ ಸ್ಥಾಪನೆಗಾಗಿ ನಡೆದಿರುವ ಭೂ ಸ್ವಾಧೀನ ಪ್ರಕ್ರಿಯೆಗೆ ರೈತರ ವಿರೋಧ
- 449 ಎಕರೆ ಜಮೀನನ್ನು ಬಿಟ್ಟುಕೊಡಲು ಸಿದ್ಧವಾಗಿದ್ದು, ಎಕರೆಗೆ 3.5 ಕೋಟಿ ರು. ಪರಿಹಾರಕ್ಕೆ ರೈತರು ಆಗ್ರಹ
- ಸರಕಾರವು ಎಲ್ಲಾ ರೀತಿಯ ಸಾಧಕ-ಬಾಧಕಗಳನ್ನೂ ಪರಿಶೀಲಿಸುತ್ತಿದೆ -ಕೈಗಾರಿಕೆ ಸಚಿವ ಎಂಬಿಪಾ

ಪಂಚಮಸಾಲಿ ಮೀಸಲಾತಿ ಕಹಳೆ

ವಿಜಯಪುರ: ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಬೇಕೆಂದು ನಡೆದಿದ್ದ ಹೋರಾಟ ತುಸು ತಣ್ಣಗಾಗಿತ್ತು. ಇದೀಗ, ಮತ್ತೆ ಈ ಹೋರಾಟ ಆರಂಭವಾಗಿದೆ. ವಿಜಯಪುರ ನಗರದಲ್ಲಿ ನಡೆದ ಪಂಚಮಸಾಲಿ ವಕೀಲರ ಪರಿಷತ್ ಸಭೆಯಲ್ಲಿ ಮುಂದಿನ ಹೋರಾಟದ ರೂಪುರೇಷಗಳ ಬಗ್ಗೆ ಚರ್ಚೆಯಾಗಿದೆ. ಈ ಸಭೆಯಲ್ಲಿ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಭಾಗಿಯಾಗಿದ್ದರು.

ಪಂಚಮಸಾಲಿ 2ಎ ಮೀಸಲಾತಿ ಹೋರಾಟಕ್ಕೆ ಮತ್ತೆ ಚಾಲನೆ ಸಿಕ್ಕಿದೆ. ಬೆಳಗಾವಿಯಲ್ಲಿ ಪ್ರತಿಭಟನಾಕಾರರ ಮೇಲೆ ನಡೆದ ಲಾಠಿ ಚಾರ್ಜ್ ನಂತರ ಹೋರಾಟದ ಕಿಚ್ಚು ಕಡಿಮೆಯಾಗಿತ್ತು. ಇದೀಗ, ಪಂಚಮಸಾಲಿ ಸಮುದಾಯ ಮತ್ತೆ ಹೋರಾಟ ನಡೆಸಲು ಮುಂದಾಗಿದೆ. ವಿಜಯಪುರ ನಗರದ ಶಿವಾನುಭವ ಮಂಟಪದಲ್ಲಿ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಪಂಚಮಸಾಲಿ ವಕೀಲರ ಪರಿಷತ್ ರಾಜ್ಯ ಕಾರ್ಯಕಾರಿಣಿ ಸಭೆ ನಡೆಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ವಕೀಲರ ಪರಿಷತ್‌ನ ಪದಾಧಿಕಾರಿಗಳು, ಸದಸ್ಯರು ಮತ್ತು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿದ್ದರು. ಸಭೆಯಲ್ಲಿ ಮೀಸಲಾತಿಗಾಗಿ ಮುಂದಿನ ಹೋರಾಟದ ರೂಪುರೇಷೆ ಸ್ವರೂಪಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಲಾಯಿತು.

ವಿಜಯಪುರ ನಗರದಲ್ಲಿ ನಡೆದ ಪಂಚಮಸಾಲಿ ವಕೀಲರ ಪರಿಷತ್ ಸಭೆಯನ್ನು ಬಸವ ಜಯಮೃತ್ಯುಂಜಯ ಸ್ವಾಮೀಜಿ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಉದ್ಘಾಟಿಸಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪ

ಮನಿ ಪವರ್ ಬಳಸಿ ಕುದುರೆ ವ್ಯಾಪಾರ

ಹುಬ್ಬಳ್ಳಿ: ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳಲು ಸಿದ್ದರಾಮಯ್ಯ ಹಾಗೂ ಮುಖ್ಯಮಂತ್ರಿಯಾಗಬೇಕೆಂದು ಡಿ.ಕೆ. ಶಿವಕುಮಾರ್ ಅವರು, ಶಾಸಕರು ತಮ್ಮ ಪರವಾಗಿದ್ದಾರೆ ಎಂದು ತೋರಿಸಿಕೊಳ್ಳಲು ಮನಿ ಪವರ್ ಬಳಸಿ ಕುದುರೆ ವ್ಯಾಪಾರಕ್ಕೆ ಇಳಿದಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

55 ಶಾಸಕರ ಪಟ್ಟಿ ಹಿಡಿದುಕೊಂಡು ಬಿಜೆಪಿ ಇಡಿ ಹೆಸರಲ್ಲಿ ಬೆದರಿಕೆಯೊಡ್ಡಿ ಆಪರೇಷನ್ ಕಮಲಕ್ಕೆ ಮುಂದಾಗಿದೆ ಎನ್ನುವ ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನವರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಸ್ಥಾನಕ್ಕೆ ಕಾಂಗ್ರೆಸ್‌ನಲ್ಲಿ ಅವರದ್ದೇ ಶಾಸಕರ ಖರೀದಿ ನಡೆಯುತ್ತಿದೆ. ಇದು ಹೊರಗೆ ಬರಬಾರದು ಎಂದು, ಜನತೆಯ ದಿಕ್ಕುತಪ್ಪಿಸಲು ಕಾಶಪ್ಪನವರ್ ಸುಳ್ಳು ಆರೋಪ ಮಾಡಿದ್ದಾರೆ. ಅವ್ಯವಹಾರ ನಡೆಸಿದವರು ಮಾತ್ರ ಇಡಿ(ಜಾರಿ ನಿರ್ದೇಶನಾಲಯ) ದಾಳಿಗೆ ಹೆದರಬೇಕು. ಕಾಶಪ್ಪನವರ್ ಅಂತಹ ತಪ್ಪು ಏನು ಮಾಡಿದ್ದಾರೆ ಎಂದು ಪ್ರಶ್ನಿಸಿದರು.

ಡಿ.ಕೆ. ಶಿವಕುಮಾರ್‌ಗೆ ಶಾಸಕರ ಬೆಂಬಲ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಕ್ಕೆ, ಕಾಂಗ್ರೆಸ್‌ನಲ್ಲಿ ಆಂತರಿಕ ಕಚ್ಚಾಟ ನಡೆದಿದೆ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಒಬ್ಬರಿಗೊಬ್ಬರು ಸ್ಪರ್ಧೆಗೆ ಬಿದ್ದವರಂತೆ, ತಮ್ಮ ಸಾಮರ್ಥ್ಯ ಹೈಕಮಾಂಡ್ ಎದುರು ಪ್ರದರ್ಶಿಸಲು ಹಣ ನೀಡಿ ಶಾಸಕರನ್ನು ಖರೀದಿಸುತ್ತಿದ್ದಾರೆ. ಅವರಲ್ಲಿ ವ್ಯಾಪಾರ ಮಾಡುವವರು ಮತ್ತು ಕೊಳ್ಳುವವರು ಬಲಾಢ್ಯರಾಗಿದ್ದಾರೆ ಎಂದು ಹೇಳಿದರು.

> ಅಧಿಕಾರಕ್ಕಾಗಿ ನಡೆಯುತ್ತಿರುವ ಕಚ್ಚಾಟದಿಂದ ಆಡಳಿತದಲ್ಲಿ ದುಷ್ಪರಿಣಾಮ ಬೀರುದ್ದು, ಕಾಂಗ್ರೆಸ್ ಹೈಕಮಾಂಡ್ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ದಿನದಿಂದ ಇದನಕ್ಕೆ ಭ್ರಷ್ಟಾಚಾರ ಹೆಚ್ಚುತ್ತಿದೆ. ಶಾಸಕರು ತಾವೇ ಪ್ರಭುಗಳು ಎನ್ನುವ ಬೇಕಾಬಿಟ್ಟಿಯಾಗಿ, ರಾಜ್ಯವನ್ನು ಲೂಟಿ ಮಾಡುತ್ತಿದ್ದಾರೆ. ವರ್ಗಾವಣೆ ಹೆಸರಲ್ಲಿ ಲೂಟಿ ನಡೆಯುತ್ತಿದೆ. ಖಾಲಿ ಹುದ್ದೆ ಭರ್ತಿ ಮಾಡಿಕೊಳ್ಳಲು ಸರಕಾರದಲ್ಲಿ ಹಣವಿಲ್ಲದೆ, ಜನಸಾಮಾನ್ಯರು ಪರದಾಡುವಂತಾಗಿದೆ.
> -ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಕಾರು ಪಲ್ಟಿ: ಮೂವರ ಸಾವು

ರಾಮನಗರ: ತಾಲೂಕಿನ ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ-275ರ ಜಯಪುರ ಸೇತುವೆ ಬಳಿ ಭಾನುವಾರ ವೇಗವಾಗಿ ಬಂದ ಕಾರು ಹೆದ್ದಾರಿ ತಡೆಗೋಡೆಗೆ ಡಿಕ್ಕಿ ಹೊಡೆದಿದ್ದರಿಂದ ಮೂವರು ಮೃತಪಟ್ಟಿದ್ದು, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮಂಡ್ಯ ಜಿಲ್ಲೆಯ ಕೆ.ಆರ್. ನಗರ ತಾಲೂಕಿನ ಚಿಕ್ಕನಾಯಕನಹಳ್ಳಿಯ ತಮ್ಮಣ್ಣ (54), ಅವರ ಪುತ್ರ ಮುತ್ತುರಾಜು (27) ಹಾಗೂ ಬೆಂಗಳೂರಿನ ಕಾರು ಚಾಲಕ ಶಶಾಂಕ್ (26) ಮೃತರು. ಮುತ್ತುರಾಜ ಅವರ ಬಾಮೈದ ಕೆ.ಆರ್. ಪೇಟೆ ತಾಲೂಕಿನ ಸಂಜು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಮುತ್ತುರಾಜ್ ಮತ್ತು ಸಂಜು ಅವರು, ಬೆಳಗ್ಗೆ ಸ್ವಿಫ್ಟ್ ಡಿಸೈರ್ ಬಾಡಿಗೆ ಕಾರಿನಲ್ಲಿ ತಮ್ಮ ಗ್ರಾಮದಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದರು. ಕಾರು ಚಾಲನೆ ಮಾಡುತ್ತಿದ್ದ ಶಶಾಂಕ್ ಜಯಪುರ ಸೇತುವೆ ಬಳಿಯ ತಿರುವಿನಲ್ಲಿ ಕಾರಿನ ನಿಯಂತ್ರಣ ಕಳೆದುಕೊಂಡು ತಡೆಗೋಡೆಗೆ ಡಿಕ್ಕಿ ಹೊಡೆದಿದ್ದಾರೆ ಎಂದು ರಾಮನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದರು. ಡಿಕ್ಕಿಯ ತೀವ್ರತೆಗೆ ಕಾರು ಹೆದ್ದಾರಿಯಲ್ಲಿ ಎರಡ್ಮೂರು ಸಲ ಪಲ್ಟಿಯಾಗಿದ್ದರಿಂದ ಮೂವರು ಸ್ಥಳದಲ್ಲೇ ಮೃತಪಟ್ಟರು. ತೀವ್ರವಾಗಿ ಗಾಯಗೊಂಡ ಸಂಜು ಅವರನ್ನು ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಎಂದು ಹೇಳಿದರು.

ನಮ್ಮ ಸರಕಾರ 5 ವರ್ಷ ಸುಭದ್ರ: ಸಚಿವ ಎಚ್.ಕೆ.ಪಾಟೀಲ್

ಎಲ್ಲಿ ನಡೀತಿದೆ ಶಾಸಕರ ವ್ಯಾಪಾರ, ನನಗೇನು ಅನಿಸಿಲ್ಲ



ಗದಗ: ಶಾಸಕರ ವ್ಯಾಪಾರ ನಡೀತಿದೆ ಎಂದು ನನಗೇನು ಅನಿಸಿಲ್ಲ. ನಡೆಯುವುದಕ್ಕೆ ಅವಕಾಶವೂ ಇಲ್ಲ ಎಂದು ಶಾಸಕ ವಿಜಯಾನಂದ ಕಾಶಪ್ಪನವರ್ ಹೇಳಿಕೆಗೆ ಸಚಿವ ಎಚ್.ಕೆ ಪಾಟೀಲ ತಿರುಗೇಟು ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಶಪ್ಪನವರ್ ಹೇಳಿಕೆ ಗಮನಿಸಿ ದ್ದೇನೆ. ರಾಜಕೀಯ ಬೆಳವಣಿಗೆ ಬಗ್ಗೆ ಹೇಳಿ ದ್ದಾರೆ. ಶಾಸಕರ ವ್ಯಾಪಾರ ನಡೆಯುತ್ತವೆ. ಆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೆ ಈವಾಗ ಎಲ್ಲೂ ಟ್ರೇಡಿಂಗ್ ನಡೀತಿಲ್ಲ, ನಡೆಯಲು ಅವಕಾಶವೂ ಇಲ್ಲ. ನಮ್ಮ ಸರಕಾರ 5 ವರ್ಷ ಭದ್ರವಾಗಿ ಇರುತ್ತದೆ ಎಂದು ಸ್ಪಷ್ಟಪಡಿಸಿದರು.

ಪ್ರಲ್ಹಾದ ಜೋಶಿ ಅವರು ಕೊಟ್ಟಿರುವ ಸಿದ್ದರಾಮಯ್ಯ, ಡಿಕೆಶಿ ಬೆಂಬಲಿತ ಶಾಸಕರಿಂದ ಟ್ರೇಡಿಂಗ್ ನಡೀತಿದೆ ಹೇಳಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ವಾಸ್ತವಾಂಶ ಚರ್ಚೆ ಮಾಡೋಣ. ಕಪೋಲ ಕಲ್ಪಿತ ವಿಚಾರಗಳ ಬಗ್ಗೆ ಯಾಕೆ ಮಾತನಾಡುವುದು. ಇಂತಹ ವಿಚಾರಗಳು ಚರ್ಚೆ ಮಾಡಿದಲ್ಲಿ ಜನ ಮೆಚ್ಚುವುದಿಲ್ಲ. ಊಹಾಪೋಹಗಳು ಸುದ್ದಿಯಾಗೋದು ಬೇಡ ಎಂದು ಹೇಳಿದರು.

ಯಾರ ವಿರೋಧವೂ ಲೆಕ್ಕಿಸಲ್ಲ, ಗ್ಯಾರಂಟಿ ನಿಲ್ಲಿಸಲ್ಲ

ಗ್ಯಾರಂಟಿ ಯೋಜನೆಗಳಿಂದ ಜನ ಸೋಮಾರಿಗಳು ಆಗುತ್ತಿದ್ದಾರೆ ಎಂದಿರುವ ರಂಭಾಪುರಿ ಶ್ರೀಗಳ ಹೇಳಿಕೆ ವಿರುದ್ಧ ಕಿಡಿಕಾರಿದರು. ಗ್ಯಾರಂಟಿ ಯೋಜನೆಗಳಿಂದ ಜನ ಸೋಮಾರಿಗಳು ಆಗುತ್ತಿದ್ದಾರೆ ಎನ್ನುವುದು ಸುಳ್ಳು. ಆರ್ಥಿಕವಾಗಿ ಜನರನ್ನು ಸಬಲರನ್ನಾಗಿ ಮಾಡಲು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಲಾಗಿದೆ. 98.5 ಲಕ್ಷ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆ ತಲುಪಿಸಿದ್ದೇವೆ. ಯಾರದ್ದೇ ವಿರೋಧ ಇದ್ದರೂ ಅದನ್ನು ಲೆಕ್ಕಿಸದೇ ನಮ್ಮ ಸರಕಾರ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸುತ್ತದೆ ಎಂದು ಸಚಿವ ಎಚ್.ಕೆ.ಪಾಟೀಲ್ ಹೇಳಿದರು.

ಸರಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿಕೆ

ನವೆಂಬರ್‌ನಲ್ಲಿ ಸಚಿವ ಸಂಪುಟ ವಿಸ್ತರಣೆ

ಹಾವೇರಿ: ನವೆಂಬರ್‌ನಲ್ಲಿ ಸಚಿವ ಸಂಪುಟ ವಿಸ್ತರಣೆಯಾಗುತ್ತದೆ ಎಂದು ಮುಖ್ಯ ಸಚೇತಕ ಸಲೀಂ ಅಹ್ಮದ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವ ಸ್ಥಾನ ಕಳೆದುಕೊಂಡ ವರಿಗೆ ಪಕ್ಷದಲ್ಲಿ ಜವಾಬ್ದಾರಿಯುತ ಸ್ಥಾನ ನೀಡಲಾಗುತ್ತದೆ. ಹೊಸಬರಿಗೆ ಅವಕಾಶ ನೀಡುವ ಸಾಧ್ಯತೆ ಇದ್ದು, ಅಂತಿಮವಾಗಿ ಹೈಕಮಾಂಡ್ ಮತ್ತು ಸಿಎಂ ನಿರ್ಧರಿಸುತ್ತಾರೆ. ಕೆಲ ಸಚಿವರು ಕೆಪಿಸಿಸಿ ಅಧ್ಯಕ್ಷರನ್ನು ಬದಲಾಯಿಸ ಬೇಕೆಂದು ಕೇಳುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನಮಗೆ ಸಿಎಂ ಮತ್ತು ಕೆಪಿಸಿಸಿ ಅಧ್ಯಕ್ಷರ ಬಗ್ಗೆ ಮಾತನಾಡದಂತೆ ತಿಳಿಸಿದ್ದಾರೆ. ಈ ವಿಷಯದ ಕುರಿತಂತೆ ನಾವು ಏನೂ ಮಾತನಾಡುವುದಿಲ. ನಮ್ಮದು ಬಿಜೆಪಿ ಥರ ನರೇಂದ್ರ ಮೋದಿ ಪಾರ್ಟಿ ಅಲ್ಲ, ಪ್ರಜಾಪ್ರಭುತ್ವ ಇರುವ ಪಾರ್ಟಿ. ಮೋದಿ ಅವರು ಹೇಳಿದರೆ ಅರ್ಧ ಗಂಟೆಯಲ್ಲಿ ಆಗುತ್ತೆ. ಆದರೆ ನಮ್ಮ ಪಕ್ಷದಲ್ಲಿ ಚರ್ಚೆಯಾಗುತ್ತದೆ, ವಿಶ್ಲೇಷಣೆ ಮಾಡಲಾಗುತ್ತದೆ. ಬಿಜೆಪಿಯಲ್ಲಿ ಸರ್ವಾಧಿಕಾರಿ ಇದ್ದಾರೆ. ನಮ್ಮಲ್ಲಿ ಆ ರೀತಿ ಇಲ್ಲ ಎಂದು ಟೀಕಿಸಿದರು.

ನಾಯಕತ್ವ ಬದಲಾಗಬೇಕು

ಪ್ರಧಾನಿ ನರೇಂದ್ರ ಮೋದಿ ನಾಯಕತ್ವ ಬದಲಾಗಿ ಯುವಕರಿಗೆ ನೀಡಬೇಕಿದೆ. ಆ ಕಾರಣಕ್ಕಾಗಿ ಆರ್‌ಎಸ್‌ಎಸ್‌ನ ಮುಖ್ಯಸ್ಥ ಮೋಹನ ಭಾಗವತ್ ಅವರು 75 ವರ್ಷ ಆದವರು ರಾಜಕೀಯ ನಿವೃತ್ತಿ ಪಡೆಯಬೇಕೆಂದಿದ್ದಾರೆ . ಭಾಗವತ್ ಅವರು ನೇರವಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಉದ್ದೇಶಿಸಿಯೇ ಹೀಗೆ ಹೇಳಿದ್ದಾರೆ. ಅವರ ಈ ಹೇಳಿಕೆ ಅತ್ಯಂತ ಮಹತ್ವದ್ದಾಗಿದೆ ಎಂದು ರಾಜ್ಯ ಸರಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದರು.

ಬಿಜೆಪಿ ತಂತ್ರ ಸಕ್ಸಸ್ ಆಗಲ್ಲ: ಸಚಿವ ರಹೀಂ ಖಾನ್

ರಾಜ್ಯದಲ್ಲಿ ಕೈ ಸರಕಾರ ಸುಭದ್ರ

ಸಿಂಧನೂರು: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಸುಭದ್ರವಾಗಿದೆ. ಸರಕಾರದ ಬಗ್ಗೆ ಊಹಾಪೋಹ ಹರಿಬಿಡಲಾಗುತ್ತಿದ್ದು, ಬಿಜೆಪಿಯ ಈ ತಂತ್ರ ಫಲಿಸುವುದಿಲ್ಲ ಎಂದು ಪೌರಾಡಳಿತ ಮತ್ತು ಹಜ್ ಇಲಾಖೆ ಸಚಿವ ರಹೀಂ ಖಾನ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಈ ಹಿಂದೆ ಎರಡು ಬಾರಿಯೂ ಬಿಜೆಪಿ ಸ್ವಂತ ಬಲದಿಂದ ಅಧಿಕಾರಕ್ಕೆ ಬಂದಿಲ್ಲ. ಆಪರೇಷನ್ ಕಮಲ ನಡೆಸಿತ್ತು. ಮುಂದೆಯೂ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದಿಲ್ಲ. ನಮ್ಮ ಯಾವುದೇ ಶಾಸಕರು ಬಿಜೆಪಿಯೊಂದಿಗೆ ಸಂಪರ್ಕದಲ್ಲಿ ಇಲ್ಲ. ಆ ರೀತಿಯ ಊಹಾಪೋಹದಲ್ಲಿ ಹುರುಳಿಲ್ಲ. ರೂಮರ್ಸ್ ಹರಿಬಿಡುವ ಬಿಜೆಪಿ ತಂತ್ರ ಸಕ್ಸಸ್ ಆಗುವುದಿಲ್ಲ. ಸಿದ್ದರಾಮಯ್ಯ ನೇತೃತ್ವದ ಸರಕಾರ ಸುಭದ್ರ ಆಡಳಿತ ಕೊಡುತ್ತಿದೆ ಎಂದರು.

ರಾಜ್ಯದಲ್ಲಿ ಅನಧಿಕೃತ ಆಸ್ತಿಗಳಿಗೆ ಎ.ಖಾತಾ, ಬಿ.ಖಾತಾ ನೀಡುವ ಪ್ರಕ್ರಿಯೆ ಶೇ.50 ರಷ್ಟು ಯಶಸ್ವಿಯಾಗಿದೆ. ಮುಂದಿನ ದಿನಗಳಲ್ಲಿ ಪಂಚಾಯಿತಿ ಹಂತದಲ್ಲೂ ಖಾತೆ ಕೊಡಲಾಗುತ್ತದೆ. ಈ ಬಗ್ಗೆ ಗೆಜೆಟ್ ನೋಟಿಫಿಕೇಶನ್ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮೂರು ಇಲಾಖೆಗಳಿಂದ ಖಾತೆ ಮಾಡಿಕೊಡುವುದನ್ನು ವಿಶೇಷ ಆಸಕ್ತಿ ವಹಿಸಿ ಗಮನಿಸುತ್ತಿದ್ದಾರೆ. ಅಲ್ಲದೇ ಆಯಾ ಜಿಲ್ಲಾಧಿಕಾರಿಗಳಿಗೆ ಮಾನಿಟರಿಂಗ್ ಜವಾಬ್ದಾರಿ ಕೊಡಲಾಗಿದೆ. ಸಿಎಂ ಮನಸ್ಸು ಮಾಡಿದ್ದರಿಂದ ಬಡವರಿಗೆ ಖಾತೆ ಸಿಗುತ್ತಿದ್ದು, ಬ್ಯಾಂಕ್ ಸಾಲ ಪಡೆದುಕೊಳ್ಳಲು ಅನುಕೂಲ ವಾಗಲಿದೆ ಎಂದರು.

ಕಾಂಗ್ರೆಸ್ ವಿರುದ್ಧ ಮಾಜಿ ಡಿಸಿಎಂ ಈಶ್ವರಪ್ಪ ವಾಗ್ದಾಳಿ

ಕಾಂಗ್ರೆಸ್ ಹೈಕಮಾಂಡ್ ಬದುಕಿದೆಯೋ, ಸತ್ತಿದೆಯೋ

ಕಲಬುರಗಿ: ಹೈಕಮಾಂಡ್ ಮುಖ್ಯಮಂತ್ರಿ ಯಾರು ಎನ್ನುವುದು ಘೋಷಣೆ ಮಾಡಬೇಕು. ಆದರೆ, ರಾಜ್ಯದಲ್ಲಿ ಸಿದ್ದರಾಮಯ್ಯ ಐದು ವರ್ಷ ನಾನೇ ಸಿಎಂ, ಮುಂದಿನ ಚುನಾವಣೆ ನನ್ನ ನೇತೃತ್ವದಲ್ಲೆ ಎಂದು ಹೇಳುತ್ತಾರೆ. ಇದನ್ನು ನೋಡಿದರೆ, ಕೇಂದ್ರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಬದುಕಿದೆಯೋ, ಸತ್ತಿದೆಯೋ ಅನ್ನೋ ಅನುಮಾನ ಇದೆ ಎಂದು ಮಾಜಿ ಡಿಸಿಎಂ ಈಶ್ವರಪ್ಪ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ನೀವೇ ಘೋಷಣೆ ಮಾಡಿಕೊಳ್ಳೊದು ಒಳ್ಳೆಯದಲ್ಲ. ನಿಮ್ಮ ಪಕ್ಷದ ನಾಯಕರು ನೀವೇ ಐದು ವರ್ಷ ಸಿಎಂ ಎಂದು ಹೇಳಬೇಕು. ಅದನ್ನು ಬಿಟ್ಟು ನೀವೇ ಘೋಷಣೆ ಮಾಡಿಕೊಂಡರೆ ಹೇಗೆ, ನೀವೇ ಸಿಎಂ ಎಂದಾದ ಮೇಲೆ ದೆಹಲಿಯಲ್ಲಿ ಇದ್ದಾಗ ಹೈಕಮಾಂಡ್ ಏಕೆ ಭೇಟಿಗೆ ಅವಕಾಶ ಕೊಡಲಿಲ್ಲ. ಕ್ರಾಂತಿ ಆಗುತ್ತೋ, ವಾಂತಿ ಆಗುತ್ತೋ ಒಂದು ಗೊತ್ತಿಲ್ಲ ಎಂದು ಲೇವಡಿ ಮಾಡಿದರು.

ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಕರ ಬದಲಾವಣೆ ಕುರಿತು ಮಾತನಾಡಿ, ಇಷ್ಟಹೊತ್ತಿಗೆ ಬಿಜೆಪಿ ರಾಜ್ಯಧ್ಯಕ್ಷ ಆಯ್ಕೆ ಆಗಬೇಕಿತ್ತು. ಆದರೆ ಅದು ಇನ್ನೂ ಆಗಿಲ್ಲ. ಚುನಾವಣೆ ನಡೆಯುತ್ತೋ ಇಲ್ಲ ನನಗೆ ಭವಿಷ್ಯ ಗೊತ್ತಿಲ್ಲ. ಆದರೆ, ಬಿಜೆಪಿಯಲ್ಲೂ ಗೊಂದಲವಿದೆ. ಗೊಂದಲವಿಲ್ಲ ಎಂದು ನಾನು ಹೇಳಿಲ್ಲ ಎಂದು ಈಶ್ವರಪ್ಪ ಹೇಳಿದರು.

> ಆರ್‌ಎಸ್‌ಎಸ್ ಇರೋದಕ್ಕೆ ದೇಶದಲ್ಲಿ ಹಿಂದುತ್ವ ಉಳಿದಿರೋದು. ಪ್ರಿಯಾಂಕ್ ಖರ್ಗೆಗೆ ಹಿಡಿದು ಹುಚ್ಚು ವಾಸಿ ಮಾಡಲು ಪ್ರಪಂಚದಲ್ಲಿ ಯಾವ ಆಸ್ಪತ್ರೆಯು ಇಲ್ಲ. ಮಿಂಚುಳದಷ್ಟು ಯೋಗ್ಯತೆ ಪ್ರಿಯಾಂಕ್ ಖರ್ಗೆ ಇಲ್ಲ. ಆರ್‌ಎಸ್‌ಎಸ್ ಬಗ್ಗೆ ಮಾತಾಡೋಕ್ಕೆ ಅವರು ಯಾರು.?
> - ಕೆ.ಎಸ್ ಈಶ್ವರಪ್ಪ, ಮಾಜಿ ಡಿಸಿಎಂ

ಗೋಮಾಂಸ ಉತ್ಪಾದನೆಯಲ್ಲಿ ಉತ್ತರಪ್ರದೇಶ ಮೊದಲು

ಗೋಮಾಂಸ ರಫ್ತು ತಡೆಯಲು ಬಿಜೆಪಿಗೆ ಏಕೆ ಆಗಿಲ್ಲ: ಲಾಡ್

ದಾವಣಗೆರೆ: ಗೋಮಾಂಸ ರಫ್ತುವಿನಲ್ಲಿ ಭಾರತವು ವಿಶ್ವದಲ್ಲೇ 2ನೇ ಸ್ಥಾನದಲ್ಲಿದೆ. ಅದರೆ, ಗೋಮಾತೆಯ ಜಪ ಮಾಡುವ ಸಿಎಂ ಹೊಂದಿರುವ ಉತ್ತರಪ್ರದೇಶದಲ್ಲಿ ಗೋಮಾಂಸಕ್ಕೆ ಕಡಿವಾಣ ಬಿದ್ದಲ್ಲ. ಗೋಮಾಂಸ ಉತ್ಪಾದನೆಯಲ್ಲಿ ಉತ್ತರಪ್ರದೇಶ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಇದನ್ನು ತಡೆಯಲು ಬಿಜೆಪಿಗೆ ಏಕೆ ಸಾಧ್ಯವಾಗಿಲ್ಲ ಎಂದು ಸಚಿವ ಸಂತೋಷ ಲಾಡ್ ಹೇಳಿದರು.ಸುದ್ದಿಗಾರರೊಂದಿಗೆ ಮಾತನಾಡಿ, ದೇಶದ 20 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ.ಅದರೆ, ಗೋಮಾತೆ ಜಪ ಮಾಡುವ ಬಿಜೆಪಿ ಗೋಮಾಂಸಕ್ಕೆ ಕಡಿವಾಣ ಹಾಕಿಲ್ಲ ಎಂದರು.

ಕ್ರೀಡೆಯಲ್ಲೂ ತಾರತಮ್ಯ: ಕ್ರೀಡೆಗಳಲ್ಲಿ ಸಹ ಬಿಜೆಪಿ ರಾಜಕೀಯ ಮಾಡಿದೆ. ಗುಜರಾತ್ ಮತ್ತು ಉತ್ತರಪ್ರದೇಶದ ರಾಜ್ಯಗಳಲ್ಲಿ ಒಬ್ಬರು ಸಹ ಒಲಿಂಪಿಕ್ ಗೆ ಆಯ್ಕೆಯಾಗಿಲ್ಲ. ಗುಜರಾತಿಗೆ 600 ಕೋಟಿ ನೀಡ ಲಾಗಿದೆ. ಉತ್ತರಪ್ರದೇಶಕ್ಕೆ 400 ಕೋಟಿ ಹಂಚಿಕೆಯಾ ಗಿದೆ. ತಮಿಳುನಾಡಿಗೆ 43 ಕೋಟಿ ಮಾತ್ರ ಕೊಡಲಾ ಗಿದೆ. ಅತಿ ಹೆಚ್ಚು ಕ್ರೀಡಾ ಪದಕ ಗೆದ್ದ ಪಂಜಾಬ್ ಮತ್ತು ಹರಿಯಾಣಕ್ಕೆ ಕಡಿಮೆ ಅನುದಾನ ನೀಡಲಾ ಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

> ದೇಶದಲ್ಲಿ 45 ಲಕ್ಷ ಕೋಟಿ ತೆರಿಗೆ ಸಂಗ್ರಹದ ಬೇಡಿಕೆ ಇದೆ. ಇದರಲ್ಲಿ ಶೇ 20ರಷ್ಟು ಸಾಧನೆ ಮಾಡಲು ಕೂಡ ಕೇಂದ್ರಕ್ಕೆ ಸಾಧ್ಯವಾಗಿಲ್ಲ. ಆಡಳಿತ, ಪ್ರಗತಿ ಮತ್ತು ಅಭಿವೃದ್ಧಿ ಶೂನ್ಯವಾಗಿದೆ. ಬಂಡವಾಳಶಾಹಿಗಳ ರು. 16.5 ಲಕ್ಷ ಕೋಟಿ ಸಾಲವನ್ನು ರೈಟ್ ಆಫ್ ಹೆಸರಿನಲ್ಲಿ ಮನ್ನಾ ಮಾಡಲಾಗಿದೆ. ಸಣ್ಣ ವ್ಯಾಪಾರಿ ಹಾಗೂ ರೈತರ ಸಾಲ ಮನ್ನಾ ಮಾಡುತ್ತಿಲ್ಲ. ಬೆಣ್ಣೆ ದೋಸೆಯ ಹೋಟೆಲ್‌ಗಳಿಗೂ ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ನೋಟಿಸ್ ನೀಡಲಾಗಿದೆ.
> -ಸಂತೋಷ್ ಲಾಡ್, ಸಚಿವ

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್
ವಿಸಿಟ್ ಮಾಡಿ
www.pravasiprapancha.com

ವಿಶ್ವವಾಣಿ

ಸಂಪಾದಕೀಯ

ಜೀವಿಗಳ ಜೀವ ಅಗ್ಗವಾಗದಿರಲಿ

ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟದ ಅರಣ್ಯ ಪ್ರದೇಶದಲ್ಲಿ ವಿಷಪ್ರಾಶನದಿಂದಾಗಿ ಐದು ಹುಲಿಗಳು ಅಸುನೀಗಿದ ಘಟನೆಯಿನ್ನೂ ಹಚ್ಚಹಸಿರಾಗಿರುವಾಗಲೇ, ಅಂಥ ಮತ್ತೊಂದು ಸಾವಿನ ಸುದ್ದಿ ಅಪ್ಪಳಿಸಿದೆ. ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 3 ಹುಲಿಮರಿಗಳು ಸಾವಿಗೀಡಾಗಿವೆ ಎಂಬುದು ತಡವಾಗಿ ಲಭ್ಯವಾಗಿರುವ ಸುದ್ದಿ. ಸದರಿ ಹುಲಿಮರಿಗಳ ಕಳೇಬರದ ಪಂಚನಾಮೆ ಹಾಗೂ ಮರಣೋತ್ತರ ಪರೀಕ್ಷೆಯನ್ನು ನಡೆಸದೆಯೇ ಸಂಬಂಧಿತ ಅರಣ್ಯಾಧಿಕಾರಿಗಳು ಅವನ್ನು ಸುಟ್ಟುಹಾಕಿರುವುದು ಕೂಡ ಒಂದಷ್ಟು ಅನುಮಾನಗಳನ್ನು ಹುಟ್ಟುಹಾಕಿದೆ. ಕೂಲಂಕಷ ತನಿಖೆ ಮಾತ್ರವೇ ಇದರ ಸತ್ಯಾಸತ್ಯತೆಯನ್ನು ಬಯಲಿಗೆಳೆಯ ಬಲ್ಲದು. ಮತ್ತೊಂದೆಡೆ, ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನ ದಲ್ಲಿ ನೆಲೆಗೊಂಡಿದ್ದ, ನಮೀಬಿಯಾ ದೇಶದಿಂದ ತರಿಸಿಕೊಳ್ಳಲಾಗಿದ್ದ 'ನಭಾ' ಎಂಬ 8 ವರ್ಷದ ಹೆಣ್ಣು ಚೀತಾ ಸಾವನ್ನಪ್ಪಿರುವ ಸುದ್ದಿ ವರದಿಯಾಗಿದೆ. ವಾರದ ಹಿಂದೆ ಅರಣ್ಯ ಪ್ರದೇಶದಲ್ಲಿ ಆಹಾರಕ್ಕಾಗಿ ಬೇಟೆಯಾಡುವಾಗ ತೀವ್ರವಾಗಿ ಗಾಯಗೊಂಡಿದ್ದ ಈ ಚೀತಾ, ಚಿಕಿತ್ಸೆಯು ಫಲಪ್ರದವಾಗದ ಕಾರಣ ಅಸುನೀಗಿತು ಎನ್ನಲಾಗಿದೆ. ಇದೂ ಸೇರಿದಂತೆ, 'ಚೀತಾ ಯೋಜನೆ' ಅಡಿಯಲ್ಲಿ ಅನ್ಯದೇಶಗಳಿಂದ ತರಿಸಿಕೊಳ್ಳಲಾಗಿದ್ದ ಚೀತಾಗಳ ಪೈಕಿ ಇದುವರೆಗೆ 9 ಚೀತಾಗಳು ಸತ್ತಿರುವುದು ನಿರ್ಲಕ್ಷಿಸುವ ಸಂಗತಿಯಂತೂ ಅಲ್ಲ. ಚೀತಾಗಳು ಸೇರಿದಂತೆ, ಅಳಿವಿನ ಅಂಚಿನಲ್ಲಿರುವ ಅಪರೂಪದ ಪ್ರಭೇದದ ಪ್ರಾಣಿ ಮತ್ತು ಪಕ್ಷಿಗಳನ್ನು ಸಂರಕ್ಷಿಸಿ, ಸೂಕ್ತ ರೀತಿಯಲ್ಲಿ ನಿಗಾವಣೆ ಮಾಡಿ, ಸಮರ್ಥವಾಗಿ ಕಾಪಿಟ್ಟುಕೊಳ್ಳದಿದ್ದರೆ, ಮುಂಬರುವ ಪೀಳಿಗೆಗೆ ಇಂಥ ಅಪರೂಪದ ಜೀವಿಗಳನ್ನು ಚಿತ್ರಪಟಗಳಲ್ಲಿ ಮಾತ್ರವೇ ತೋರಿಸ ಬೇಕಾದ ಸ್ಥಿತಿ ಒದಗಿದರೂ ಅಚ್ಚರಿಯಿಲ್ಲ. ಅದು ಪ್ರಾಣಿಪ್ರಿಯರ ಪಾಲಿಗೆ ನಿಜಕ್ಕೂ ಆಘಾತಕಾರಿ ಬೆಳವಣಿಗೆ ಆಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಹೀಗಾಗಿ ಸಂಬಂಧಪಟ್ಟವರು ಈ ಬಾಬತ್ತಿನ ಕಡೆಗೆ ಆದ್ಯಗಮನವನ್ನು ನೀಡುವಂತಾಗಲಿ ಎಂಬುದು ಸಹೃದಯಿಗಳ ಆಗ್ರಹ ಮತ್ತು ನಿರೀಕ್ಷೆ.

ಸೊಂಪಾದಕೀಯ

ಉಂಡು ಮಲಗಿಸುವ ತನಕ

ಇತ್ತೀಚೆಗೆ ಸಾಮಾಜಿಕ ವಿಷಯಗಳಲ್ಲಿ ಹೆಚ್ಚು ಸದ್ದು ಮಾಡ್ತಾ ಇರೋದು ಅಂದ್ರೆ, ಗಂಡನನ್ನೇ ಕೊಂದ ಹೆಂಡತಿ ಅನ್ನೋದು. ಮೊದಲೆಲ್ಲಾ ಈ ಥರದ ಸುದ್ದಿಗಳು ಅಪರೂಪಕ್ಕೆ ಒಮ್ಮೆ ನಡೆಯುತ್ತಿದ್ದವು. ಹಾಗಾಗಿ ಮಾಧ್ಯಮಗಳಲ್ಲಿ ವರದಿ ಆಗುವಾಗ ಇದರ ಬಗ್ಗೆ ಒಂದು ಆಶ್ಚರ್ಯಸೂಚಕ ಟೋನ್ ಇರುತ್ತಿತ್ತು. ಆದರೆ ಇದು ಇತ್ತೀಚೆಗೆ ಕಾಮನ್ ಆಗಿದೆ. ಗಂಡ ಹೆಂಡಿರ ನಡುವೆ ಶೀತಲ ಸಮರ ಆದಾಗ, ಹೆಂಡತಿ ಗಂಡನನ್ನು ಕೊಂದು ಫ್ರಿಜ್‌ನಲ್ಲಿ ಇಟ್ಟಿದ್ದು, ಕುಕ್ಕರ್‌ನಲ್ಲಿ ಬೇಯಿಸಿದ್ದು ಹೀಗೆ ಥರಾವರಿ ನಂಬಲಾಗದ ಘಟನೆಗಳು ವರದಿ ಆಗಿವೆ. ಈಗೀಗ ಪ್ರತಿದಿನ ಈ ರೀತಿಯ ಸುದ್ದಿಗಳು ಕಾಮನ್ ಆಗಿವೆ. ಗಂಡ ಹೆಂಡತಿ ನಡುವೆ ಸಹಿಸಿಕೊಳ್ಳೋಕೆ ಆಗದ ಅನೇಕ ವಿಷಯಗಳು ಇವೆ. ಸಹಿಸಿಕೊಳ್ಳೋಕೆ ಆಗಲ್ಲ ಅಂದ್ರೆ ಸತಾಯಿಸಬಹುದು, ಆದರೆ ತೀರಾ ಸಾಯಿಸುವ ಮಟ್ಟಕ್ಕೆ ಹೋಗೋದು ಮಾತ್ರ ಅಸಹನೀಯ. ಆದರೆ ಈಗ ಹೀಗೆ ಸಾಯಿಸೋದಕ್ಕೂ ಸೈ ಅನ್ನೋ ಸಂಗಾತಿಗಳ ಸಂಖ್ಯೆ ಹೆಚ್ಚಾಗಿದೆ. ಇದಕ್ಕೆ ಪೂರಕವಾಗಿ ಇತ್ತೀಚೆಗೆ ಗಂಡನನ್ನೇ ನೀರಿಗೆ ತಳ್ಳಿ ಸಾಯಿಸುವ ಪ್ರಯತ್ನ ಮಾಡಿದ ಹೆಂಡತಿಯ ವಿಷಯ ಚರ್ಚೆಗೆ ಆಸ್ಪದವಾಗಿದೆ. ಮದುವೆ ಅಂದಮೇಲೆ ಸಂಸಾರವೆಂಬ ಸಾಗರದಲ್ಲಿ ಈಜಬೇಕು ನಿಜ. ಹಾಗಂತ ಹೆಂಡತಿಯೇ ಗಂಡನನ್ನು ನೀರಿಗೆ ತಳ್ಳಿದರೆ ಹೇಗೆ? ಗಂಡನಿಗೆ ಈಜು ಬರುತ್ತಿದ್ದುದರಿಂದ ಹೆಂಗೋ ಬಚಾವ್ ಆಗಿದ್ದಾನೆ. ಆದರೆ ಸೇತುವೆ ಒಂದರ ಮೇಲೆ ಪ್ರಯಾಣ ಮಾಡುವಾಗ ಇಲ್ಲಿ ಫೋಟೋ ತೆಗೆಸಿಕೊಳ್ಳೋಣ ಅಂತ ಗಂಡನನ್ನು ಕೆಳಗಿಳಿಸಿದ ಹೆಂಡತಿ ಮೊಬೈಲ್ ತಗೊಂಡು ಗಂಡನನ್ನು ಸೇತುವೆ ಮೇಲೆ ಹತ್ತಿಸಿ ಫೋಸ್ ಕೊಡೋಕೆ ಹೇಳಿದ್ದಾಳೆ. ಫೋಸ್ ಕೊಡೋಕೆ ಹೋದ ಗಂಡನನ್ನು ಕೊನೆಗೆ ಅವಳೇ ತಳ್ಳಿದ್ದಾಳೆ ಅಂತ ಗಂಡ ಆರೋಪ ಮಾಡಿದ್ದಾನೆ. ಆದರೆ ಹೆಂಡತಿ ಇದನ್ನು ನಿರಾಕರಿಸಿ ಗಂಡ ಕಾಲು ಜಾರಿ ಬಿದ್ದಿದ್ದಾನೆ ಅಂತಿದ್ದಾಳೆ. ಆದರೆ ತಳ್ಳಿಸಿಕೊಂಡವನಿಗೆ ತೀರಾ ಅಷ್ಟೂ ಗೊತ್ತಾಗೋದಿಲ್ವಾ ಅನ್ನೋದು ಪ್ರಕರಣ ವನ್ನು ಕೇಳಿದವರ ಅನಿಸಿಕೆ. ಗಂಡ ಹೆಂಡತಿ ನಡುವೆ ಆರೋಗ್ಯಕರವಾದ ಸೇತುವೆ ಇರಬೇಕು ಅಂತ ಮಾತು ಇದೆ. ಆದರೆ ಅಂಥ ಸೇತುವೆ ಹತ್ತಿಸಿ ಗಂಡನನ್ನು ತಳ್ಳಿದ ಹೆಂಡತಿಯ ಕಥೆಯಿದು. ಉಂಡು ಮಲಗುವ ತನಕ ಇರಬೇಕಾದ ಗಂಡ ಹೆಂಡತಿಯರ ಜಗಳ ಇತ್ತೀಚೆಗೆ ಪರ್ಮನೆಂಟಾಗಿ ಮಲಗಿಸೋವರೆಗೂ ಹೋಗ್ತಾ ಇರೋದು ಮಾತ್ರ ವಿಪರ್ಯಾಸ.

ಸಂಪಾದಕರ ಸದ್ಯಶೋಧನೆ

ಮಾಯವಾದ ಮ್ಯಾಜಿಷಿಯನ್ ಸಂಪಾದಕ

ಸುಮಾರು 15 ವರ್ಷಗಳ ಹಿಂದೆ ಓಶೋ ಸ್ಮರಣೆ ಕುರಿತು ಮೈಸೂರಿನಲ್ಲೊಂದು ಕಾರ್ಯಕ್ರಮ. ವಕೀಲ ಮಿತ್ರ ವೇಣುಗೋಪಾಲ ಆ ಕಾರ್ಯಕ್ರಮ ಏರ್ಪಡಿಸಿದ್ದರು. ನಾನು ಮತ್ತು 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕ, 'ಕೆಬಿಜಿ' ಎಂದೇ ಜನಪ್ರಿಯರಾದ ಕೆ.ಬಿ.ಗಣಪತಿ ವೇದಿಕೆಯಲ್ಲಿ. ''ನೀವು ಓಶೋ ಅನುಯಾಯಿ ಎಂಬುದು ಗೊತ್ತಿರಲಿಲ್ಲ'' ಎಂದು ಇಬ್ಬರ ಪರಸ್ಪರ ಆರಂಭಿಕ ಉವಾಚದೊಂದಿಗೆ ಮಾತುಕತೆ ಆರಂಭವಾಯಿತು. ಆ ದಿನ ನಾವು ಒಂದು ಗಂಟೆಯನ್ನು ಪರಸ್ಪರ ಅರ್ಧರ್ಧ ಹಂಚಿಕೊಂಡವರಂತೆ ಮಾತಾಡಿದ್ದೆವು. ಓಶೋ ಕುರಿತ 'ಕೆಬಿಜಿ' ಸೂಕ್ಷ್ಮ ಗ್ರಹಿಕೆ ನನಗೆ ಇಷ್ಟವಾಯಿತು. ಅಲ್ಲಿ ತನಕ ನನ್ನ ಹಾಗೆ ಓಶೋ ಗೀಳು ಹತ್ತಿಸಿಕೊಂಡ ಕನ್ನಡದ ಇನ್ನೊಬ್ಬ ಪತ್ರಕರ್ತ ಅಂದ್ರೆ ರವಿ ಬೆಳಗೆರೆ ಮಾತ್ರ ಎಂದುಕೊಂಡಿದ್ದೆ. ಕೆಬಿಜಿ ಸಂಗ್ರಹದಲ್ಲಿ ಓಶೋ ಪುಸ್ತಕಗಳಿದ್ದವು, ಅವೆಲ್ಲವನ್ನೂ ಅವರು ಓದಿಕೊಂಡಿದ್ದರು. ಒಮ್ಮೆ ನಾನು ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಅವರ ಮನೆಗೆ ಹೋದಾಗ ಓಶೋ ಪುಸ್ತಕಗಳ ಸಂಗ್ರಹವನ್ನು ತೋರಿಸಿದ್ದರು. ಅದಾದ ಬಳಿಕ ನಾನು ಅವರ ಸಂಪರ್ಕಕ್ಕೆ ಬಂದೆ. ನಾನು ಸಂಪಾದಕನಾಗಿದ್ದ 'ವಿಜಯ ಕರ್ನಾಟಕ', 'ಕನ್ನಡ ಪ್ರಭ' ಮತ್ತು ಈಗಿನ ನನ್ನ ಸಂಪಾದಕತ್ವದ 'ವಿಶ್ವವಾಣಿ'ಯಲ್ಲಿ ಒಳ್ಳೆಯ ಶೀರ್ಷಿಕೆಗಳನ್ನು ಓದಿದಾಗ, ಹೊಸ ಪ್ರಯೋಗ ಮಾಡಿದಾಗ, ಉತ್ತಮ ವರದಿಗಳನ್ನು ಕಂಡಾಗ, ಕೆಬಿಜಿ ತಪ್ಪದೇ ಫೋನ್ ಮಾಡುತ್ತಿದ್ದರು. ಆ ನೆಪದಲ್ಲಿ ನಮ್ಮ ಮಾತುಕತೆ ವಿಸ್ತರಿಸುತ್ತಿತ್ತು. ಆದರೆ ಪತ್ರಿಕೋದ್ಯಮದ ಚೌಕಟ್ಟು ದಾಟುತ್ತಿರಲಿಲ್ಲ. ಅವರೊಂದಿಗೆ ಪತ್ರಿಕೋದ್ಯಮ ಬಿಟ್ಟು ಬೇರೆ ವಿಷಯಗಳ ಬಗ್ಗೆ ಮಾತಾಡಬೇಕು ಎಂದು ನನಗೂ ಅನಿಸುತ್ತಿರಲಿಲ್ಲ. ಕಾರಣ ಅವರೊಬ್ಬ ಪಕ್ಕಾ ಕಸುಬುದಾರಿ (ಪ್ರೊಫೆಷನಲ್) ಸಂಪಾದಕರಾಗಿದ್ದರು. ಅವರು ತಮ್ಮನ್ನು ಮಾಲೀಕತ್ವಕ್ಕಷ್ಟೇ ಸೀಮಿತಗೊಳಿಸಿಕೊಂಡು, ಸಂಪಾದಕೀಯ ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಿಕೊಡುವ ಕಾಟಾಚಾರದ ಅಥವಾ ಪದನಿಮಿತ್ತ ಸಂಪಾದಕ ಆಗಿರಲಿಲ್ಲ. ಹಾಗೆ ನೋಡಿದರೆ ನನಗೆ ಕೆಬಿಜಿ ಮೊದಲು ಪರಿಚಿತರಾಗಿದ್ದು ಮತ್ತು ಆಪ್ತರಾಗಿದ್ದು 'ಸ್ಟಾರ್ ಆಫ್ ಮೈಸೂರ್'ನಲ್ಲಿ ಅವರು ಬರೆಯುತ್ತಿದ್ದ 'ಅಬ್ರಕಡಬ್ರಾ' ಮತ್ತು 'ಮೈಸೂರು ಮಿತ್ರ'ದಲ್ಲಿ ಬರೆಯುತ್ತಿದ್ದ 'ಛೂಮಂತ್ರ' ಅಂಕಣಗಳಿಂದ. ನಾನು ಆ ಅಂಕಣವನ್ನು ತಪ್ಪದೇ ಓದಿದವನು. ಕಾರಿನ ಡ್ಯಾಶ್‌ಬೋರ್ಡ್ ಮೇಲೆ ಮುಚ್ಚಿದ ಪೇಪರ್ ಕಪ್‌ನಲ್ಲಿ ಕಾಫಿ ಇಟ್ಟ ಹಾಗೆ ಅವರ ಬರವಣಿಗೆ. ಕೊನೆ ತನಕ ಆರದ ಬಿಸಿ ಮತ್ತು ಎಲ್ಲೂ ತುಳುಕದ ಸಮತೋಲನ. ಬರವಣಿಗೆಯ ಚಮತ್ಕಾರಗಳನ್ನು ಮೇಳೈಸಿದ, ಹೇಳಬೇಕಾದ ವಿಷಯಗಳನ್ನು ಸ್ವಾರಸ್ಯವಾಗಿ ಹೇಳುವ ಕಲೆಗಾರಿಕೆ ಅವರಿಗೆ ಒಲಿದಿತ್ತು. ಅವರು ನಿರಂತರ ಬರೆಯುವ ಮೂಲಕ 'ಬರೆಯುವ ಸಂಪಾದಕ'ರಾಗಿದ್ದರು. ಅಷ್ಟೇ ಅಲ್ಲ, ಓದುವ ಸಂಪಾದಕರೂ ಆಗಿದ್ದರು. ಅವರು ಅದೆಷ್ಟು ಓದುತ್ತಿದ್ದರು ಎಂಬುದು ಅವರ ಅಂಕಣಗಳಲ್ಲಿ ಗೊತ್ತಾಗುತ್ತಿತ್ತು. ಹಲವು ಸಂದರ್ಭಗಳಲ್ಲಿ, ಈಗ ತಾನೇ ಬಿಡುಗಡೆಯಾದ ಪುಸ್ತಕವನ್ನು ಆನ್‌ಲೈನ್‌ನಲ್ಲಿ ತರಿಸಿಕೊಂಡು ನಾನು ಓದಬೇಕು ಎನ್ನುವ ಹೊತ್ತಿಗೆ ಕೆಬಿಜಿ ಆ ಕೃತಿಯ ಕುರಿತು ಆ ವಾರ ಬರೆದಿರುತ್ತಿದ್ದರು. ಬೆಂಗಳೂರಿನ ಇಂಗ್ಲಿಷ್ ಪತ್ರಿಕೆಗಳ ಯಾವ ಸಂಪಾದಕರೂ (ಟಿಜೆಎಸ್ ಜಾರ್ಜ್ ಹೊರತು ಪಡಿಸಿ), ಕೆಬಿಜಿ ಥರ ಬರೆದಿದ್ದನ್ನು ನಾನು ನೋಡಿಲ್ಲ. ಎರಡು ವರ್ಷಗಳ ಹಿಂದೆ ನಾನು, 'ಜಗತ್ತಿನ ಸೆಕೆಂಡ್‌ಹ್ಯಾಂಡ್ ಪುಸ್ತಕಗಳ ಮಹಾಕಾಶಿ' ಎಂದು ಹೆಸರುವಾಸಿಯಾದ ಬ್ರಿಟನ್‌ನ ವೇಲ್ಸ್‌ನಲ್ಲಿರುವ 'ಹೇ-ಆನ್-ವೈ'ಯಲ್ಲಿದ್ದಾಗ, ನನ್ನ ಫೇಸ್‌ಬುಕ್ ಪೋಸ್ಟ್ ನೋಡಿ ಕೆಬಿಜಿ ಫೋನ್ ಮಾಡಿ, ''ಭಟ್ರೇ, ಅದೆಂಥ ಅದ್ಭುತ ಜಾಗದಲ್ಲಿದ್ದೀರಿ ನೀವು, ನನಗೂ ಅಲ್ಲಿಗೆ ಹೋಗಬೇಕು ಅಂತ ಅನಿಸುತ್ತಿದೆ'' ಎಂದು ಹೇಳಿದ್ದರು. ಇದು ಒಬ್ಬ ಅಕ್ಷರಪ್ರೇಮಿಯ ಅಂತರಂಗದ ಹಪಾಹಪಿ. ಕೆಬಿಜಿ ಅಂಥ ಅಕ್ಷರಮೋಹಿಯಾಗಿದ್ದರು. ಈ ಕಾರಣಕ್ಕೆ ಅವರ ಬರವಣಿಗೆ ಸೋಲಲಿಲ್ಲ ಮತ್ತು ಬರೆದು ಬರೆದು ಅವರು ಬಳಲಲೂ ಇಲ್ಲ, ತಮ್ಮ ಬಳಲಿಕೆಯನ್ನು ಓದುಗರಿಗೆ ವರ್ಗಾಯಿಸಲೂ ಇಲ್ಲ. ಕೊನೆ ತನಕ ತಮ್ಮ ಅಂಕಣದ ಮೇಲಿನ ಮಂಜಿನ ಹನಿಯ ಆರ್ದ್ರವನ್ನು ಕಾಪಾಡಿಕೊಂಡರು. ನಾನು ಅವರ ವ್ಯಕ್ತಿತ್ವದಿಂದ ಎರವಲು ಪಡೆದ ಬಹು ದೊಡ್ಡ ಕಾಣ್ಕೆ ಇದೂ ಹೌದು. ಮೊನ್ನೆಯಷ್ಟೇ, ಸ್ನೇಹಿತರಾದ ನಂಜನಗೂಡು ಮೋಹನ್ ಮತ್ತು ನಾನು, ''ಕೆಬಿಜಿಯವರನ್ನು ನೋಡಿ ಬರೋಣ, ಬಹಳ ದಿನ ಆಯ್ತು'' ಎಂದು ಮಾತಾಡಿಕೊಂಡಿದ್ದೆವು. ಆ ಅವಕಾಶ ಕೂಡಿಬರಲೇ ಇಲ್ಲ. ಮೈಸೂರಿನ 'ಪತ್ರಿಕೋದ್ಯಮದ ಮ್ಯಾಜಿಷಿಯನ್' ಕಣ್ಮರೆಯಾಗಿರ ಬಹುದು, ಆದರೆ ಆತ ಸೃಷ್ಟಿಸಿದ 'ಮಾಯಾಲೋಕ' ಮಾತ್ರ ಜೀವಂತವಾಗಿದೆ.

ಸಿದ್ದು ದಿಲ್ಲಿಯಲ್ಲಿ ಬಾಂಬ್ ಬ್ಲಾಸ್ಟ್ ಮಾಡಿದ್ದೇಕೆ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ರಾಜ್ಯ ಕಾಂಗ್ರೆಸ್‌ನ ಉಸ್ತುವಾರಿ ವಹಿಸಿಕೊಂಡಿರುವ ರಣದೀಪ್ ಸಿಂಗ್ ಸುರ್ಜೇವಾಲ ಕೆಲ ದಿನಗಳ ಹಿಂದೆ ಸಿಎಂ ಸಿದ್ದರಾಮಯ್ಯ ಅವರನ್ನು ಸಂಪರ್ಕಿಸಿದ್ದಾರೆ. ಹೀಗೆ ಸಂಪರ್ಕಿಸಿದವರು, ''ಸಿದ್ರಾಮಯ್ಯಾಜೀ, ಮುಂದಿನ ವಾರ ರಾಹುಲ್ ಗಾಂಧಿಯವರು ಪ್ರವಾಸದಿಂದ ವಾಪಸ್ಸಾಗುತ್ತಿದ್ದಾರೆ. ಅವರು ಬಂದ ತಕ್ಷಣ ನಿಮ್ಮ ಜತೆ ಮೀಟಿಂಗು ಮಾಡಲು ಬಯಸಿದ್ದಾರೆ'' ಎಂದಿದ್ದಾರೆ.

ಅಂದ ಹಾಗೆ, ವಿಧಾನಪರಿಷತ್ತಿಗೆ ಡಿ.ಜಿ.ಸಾಗರ್, ದಿನೇಶ್ ಅಮಿನ್ ಮಟ್ಟು, ರಮೇಶ್ ಬಾಬು ಮತ್ತು ಆರತಿ ಕೃಷ್ಣ ಅವರ ಹೆಸರುಗಳನ್ನು ಹೈಕಮಾಂಡಿಗೆ ಕಳಿಸಿ ಒಪ್ಪಿಗೆ ಪಡೆದಿದ್ದ ಸಿದ್ದರಾಮಯ್ಯ ಅವರಿಗೆ ಸುರ್ಜೇವಾಲ ಅವರೇ ಬ್ರೇಕ್ ಹಾಕಿದ್ದರಲ್ಲ? ಈ ವಿಷಯವನ್ನು ರಾಹುಲ್ ಗಾಂಧಿಯವರು ವಿದೇಶ ಪ್ರವಾಸದಿಂದ ಬಂದ ನಂತರ ಸೆಟ್ಲ್ ಮಾಡಿಕೊಳ್ಳಿ ಅಂತ ಬೇರೆ ಅವರು ಹೇಳಿದ್ದರಿಂದ ಸಿದ್ದರಾಮಯ್ಯ ಮುನಿಸಿನಿಂದಲೇ ಕಾಯುತ್ತಿದ್ದರು. ಹೀಗಾಗಿ ಜೂನ್ ಅಂತ್ಯದ ವೇಳೆಗೆ ಪಕ್ಷದ ಶಾಸಕರ ಅಹವಾಲು ಕೇಳಲು ಕರ್ನಾಟಕಕ್ಕೆ ಬಂದ ಸುರ್ಜೇವಾಲ, ''ಮುಂದಿನ ವಾರ ದಿಲ್ಲಿಗೆ ಬನ್ನಿ'' ಎಂದಾಗ ಸಿದ್ದರಾಮಯ್ಯ ಹೂಂಗುಟ್ಟಿದ್ದಾರೆ.

ಆದರೆ ಈ ಹಿಂದೆ ತಾವು ದಿಲ್ಲಿಗೆ ಹೋಗಿ ಬಂದ ನಂತರ ನಡೆದ ಘಟನಾವಳಿಗಳು ಸಿದ್ದರಾಮಯ್ಯ ಅವರನ್ನು ಮತ್ತಷ್ಟು ಕೆರಳಿಸಿವೆಯಲ್ಲದೆ, ರಾಹುಲ್ ಗಾಂಧಿಯವರ ಜತೆ ಮೀಟಿಂಗು ನಡೆಸಲು ಸುರ್ಜೇವಾಲ ತಮಗೆ ಆಹ್ವಾನ ನೀಡಿದ ಹಿನ್ನೆಲೆಯಲ್ಲಿ ಏನೇನು ನಡೆದಿದೆ ಎಂಬುದರ ಚಿತ್ರಣ ಸಿಕ್ಕಿದೆ. ಅದರ ಪ್ರಕಾರ, ಶಾಸಕರ ಅಹವಾಲು ಕೇಳಲು ಅಂತ ಬೆಂಗಳೂರಿಗೆ ಬಂದ ಸುರ್ಜೇವಾಲ ಅವರು ಶಾಸಕರ ಜತೆ 'ಒನ್-ಟು-ಒನ್' ಏನು ಮಾತನಾಡಿದ್ದಾರೆ? ಮತ್ತು ಅಭಿವೃದ್ಧಿ ಕಾರ್ಯಗಳಿಗೆ ತಮಗೆ ಅಗತ್ಯವಾದಷ್ಟು ಅನುದಾನ ಸಿಗುತ್ತಿಲ್ಲ ಅಂತ ಶಾಸಕರು ಹೇಳಿದ್ದಲ್ಲ ನಾಯಕತ್ವದ ಬಗೆಗಿನ ಅಸಮಾಧಾನ ಅಂತ ಬಿಂಬಿಸಲು ಹೇಗೆ ಹೆಣಗುತ್ತಿದ್ದಾರೆ ಎಂಬುದು ಕನ್‌ಫರ್ಮ್ ಆಗಿದೆ. ಅರ್ಥಾತ್, ರಾಹುಲ್ ಗಾಂಧಿ ಅವರು ವಿದೇಶ ಪ್ರವಾಸದಿಂದ ವಾಪಸ್ಸಾಗುವ ಮುನ್ನ ರಾಜ್ಯ ಕಾಂಗ್ರೆಸ್‌ನ ಎಲ್ಲ ಶಾಸಕರ ಜತೆ ಮಾತನಾಡಿ ಸುರ್ಜೇವಾಲ ರಿಪೋರ್ಟು ರೆಡಿ ಮಾಡುತ್ತಾರೆ. ಈ ರಿಪೋರ್ಟು ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಅನಿವಾರ್ಯ ಅಂತ ರಾಹುಲ್ ಗಾಂಧಿಯವರಿಗೆ ಕನ್ವಿನ್ಸು ಮಾಡುತ್ತದೆ. ಇವತ್ತು ಕರ್ನಾಟಕದ ಪ್ರತಿಯೊಂದು ವ್ಯವಹಾರಗಳಿಗೆ ಹೈಕಮಾಂಡ್ ಸುರ್ಜೇವಾಲ ಅವರ ಮಾತಿಗೇ ಆದ್ಯತೆ ನೀಡುವುದರಿಂದ ರಾಹುಲ್ ಗಾಂಧಿ ರಿಪೋರ್ಟು ನೋಡಿ ವಿವಶರಾಗುತ್ತಾರೆ. ''ಸಿದ್ರಾಮಯ್ಯಾಜೀ, ಅಧಿಕಾರ ಹಸ್ತಾಂತರಕ್ಕೆ ಸಹಕರಿಸಿ'' ಎನ್ನುತ್ತಾರೆ. ಹೀಗೆ ಮೀಟಿಂಗಿನಲ್ಲಿ ರಾಹುಲ್ ಗಾಂಧಿ ಈ ವಿಷಯ ಪ್ರಸ್ತಾಪಿಸಿದಾಗ ತಾವು ಒಪ್ಪದೆ ಹೋಗಬಹುದು. ಆದರೆ ಮೀಟಿಂಗಿನಲ್ಲಿರುವ ಉಳಿದವರು ಸುಮ್ಮನಿರುತ್ತಾರಾ? ಅವರು ಹೊರಗೆ ಬಂದು, ''ಸಿಎಂ ಹುದ್ದೆಯಿಂದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಹೈಕಮಾಂಡ್ ನಿರ್ಧರಿಸಿದೆ'' ಅಂತ ಹೇಳಿಯೇ ಹೇಳುತ್ತಾರೆ.

ತಮ್ಮನ್ನಿಳಿಸಲು ಹೈಕಮಾಂಡ್ ನಿರ್ಧರಿಸಿದೆ ಮತ್ತು ಅದನ್ನು ನೇರವಾಗಿ ಹೇಳಿದೆ ಎಂಬ ಮೆಸೇಜು ಒಂದು ಸಲ ಸಿಕ್ಕರೆ ತಮ್ಮ ವಿರೋಧಿಗಳಿಗಿರಲಿ, ತಮ್ಮ ಬೆಂಬಲಿಗರಲ್ಲೇ ಗೊಂದಲ ಶುರುವಾಗುತ್ತದೆ. ಹಾಗಾದಾಗ ಕುದುರೆ ವ್ಯಾಪಾರ ಆರಂಭವಾದರೂ ಅಚ್ಚರಿಯಿಲ್ಲ ಅಂತ ಸಿದ್ದರಾಮಯ್ಯ ಲೆಕ್ಕ ಹಾಕಿದ್ದಾರೆ. ಹೀಗವರು ಲೆಕ್ಕ ಹಾಕುವ ಕಾಲಕ್ಕೆ ಹಲವು ಸಚಿವರು ಬಂದು ಸುರ್ಜೇವಾಲ ಅವರ ಬಗ್ಗೆ ಅಸಮಾಧಾನ ತೋಡಿಕೊಂಡಿದ್ದಾರೆ. ''ಸರ್, ಈ ಸುರ್ಜೇವಾಲಾ ಶಾಸಕರ ಜತೆ ನಡೆಸುವ ಮೀಟಿಂಗುಗಳಲ್ಲಿ ನಮ್ಮ ಬಗ್ಗೆ ಉಲ್ಟಾ ರಿಪೋರ್ಟು ಸಂಗ್ರಹಿಸುತ್ತಾರೆ. ಆನಂತರ ಅಲ್ಲಿಂದಲೇ ನಮಗೆ ಫೋನು ಮಾಡಿ, 'ನಿಮ್ಮ ಬಗ್ಗೆ ಸಿಕ್ಕಾಪಟ್ಟೆ ಕಂಪ್ಲೇಂಟುಗಳಿವೆ' ಎನ್ನುತ್ತಾರೆ. ಹೀಗೆ ಹೇಳುವ ಮೂಲಕ ನಮ್ಮನ್ನು ಹೆದರಿಸುವುದು, ತಾವು ಹೇಳಿದ್ದನ್ನು ಮಾಡಲೇಬೇಕು ಅಂತ ಒತ್ತಡ ಬಿಲ್ಡ್ ಮಾಡುವುದು ಅವರ ತಂತ್ರ. ಇದಕ್ಕೆ ತಕ್ಕ ಉತ್ತರ ನೀಡದಿದ್ದರೆ ಕಷ್ಟ. ಇವತ್ತು ನೆರೆಯ ತೆಲಂಗಾಣವನ್ನೇ ತೆಗೆದುಕೊಳ್ಳಿ. ಅಲ್ಲಿ ಮುಖ್ಯಮಂತ್ರಿಯಾಗಿರುವ ರೇವಂತ್ ರೆಡ್ಡಿ ಪಕ್ಷದ ವರಿಷ್ಠರ ಡಿಮಾಂಡುಗಳಿಗೆ ಕ್ಯಾರೇ ಎನ್ನುತ್ತಿಲ್ಲ. ನೀವು ಹೇಳಿದಂತೆ ಪಾರ್ಟಿಫಂಡು ಕೊಡಲು ಸಾಧ್ಯವಿಲ್ಲ ಅಂತ ನೇರವಾಗಿ ಹೇಳುತ್ತಿದ್ದಾರೆ. ಹೀಗಾಗಿ ಅಲ್ಲಿ ಪಕ್ಷದ ಉಸ್ತುವಾರಿಯಾಗಿರುವ ಮೀನಾಕ್ಷಿ ನಟರಾಜನ್ ಅವರನ್ನು ಕಳಿಸಿ ರೇವಂತ್ ರೆಡ್ಡಿ ಅವರ ಬಗ್ಗೆ ಪಕ್ಷದ ಶಾಸಕರಿಗೆ ಅಸಮಾಧಾನವಿದೆ ಎಂದು ಪ್ರತಿಬಿಂಬಿಸುವ ಯತ್ನ ನಡೆದಿದೆ. ಯಾವಾಗ ಇದು ಕನ್‌ಫರ್ಮ್ ಆಯಿತೋ, ಮೀನಾಕ್ಷಿ ನಟರಾಜನ್ ಅವರ ವಿರುದ್ಧ ತಿರುಗಿಬಿದ್ದಿರುವ ರೇವಂತ್ ರೆಡ್ಡಿ, 'ತೆಲಂಗಾಣದಲ್ಲಿ ಪಕ್ಷ ಗೆಲ್ಲಲು ನಿಮ್ಮ ಕಾಂಟ್ರಿಬ್ಯೂಷನ್ ಏನು?' ಅಂತ ಗುಡುಗಿ ಶಾಸಕರ ಜತೆ ಸರಿಯಾಗಿ ಮೀಟಿಂಗು ಮಾಡದಂತೆ ನೋಡಿಕೊಂಡಿದ್ದಾರೆ. ಹೀಗೆ ತೆಲಂಗಾಣದಲ್ಲಿ ಮೀನಾಕ್ಷಿ ನಟರಾಜನ್ ಅವರಿಗೆ ಆದ ಗತಿಯೇ ಇಲ್ಲಿ ಸುರ್ಜೇವಾಲಾ ಅವರಿಗೂ ಆಗಬೇಕು'' ಅಂತ ವಿವರಿಸಿದ್ದಾರೆ.

ಸಿದ್ದು ಗೂಢಚಾರರು ತಂದ ಸಂದೇಶ

ಹೀಗೆ ಸಿದ್ದರಾಮಯ್ಯ ಅವರಿಗೆ ಆಪ್ತ ಸಚಿವರು ದೂರು ನೀಡುವ ಕಾಲಕ್ಕೆ ಸರಿಯಾಗಿ ಸಿದ್ದು ಗೂಢಚಾರರ ಪಡೆ ಡಿಕೆಶಿ ಕ್ಯಾಂಪಿನ ಬೆಳವಣಿಗೆಗಳ ಬಗ್ಗೆ ಎಚ್ಚರಿಕೆಯ ಸಂದೇಶ ತಲುಪಿಸಿದೆ. ಅದರ ಪ್ರಕಾರ, ಸರಕಾರ ಅಸ್ತಿತ್ವಕ್ಕೆ ಬಂದಾಗ ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರ ಸಂಖ್ಯೆ ಕಡಿಮೆ ಇತ್ತು. ಆದರೆ ದಿನ ಕಳೆದಂತೆ ಈ ಸಂಖ್ಯೆ ಹೆಚ್ಚತೊಡಗಿದೆ. ಇದಕ್ಕೆ ಡಿ.ಕೆ.ಶಿವಕುಮಾರ್ ಅವರ ಪವರ್ ಹೇಗೆ ಕಾರಣವೋ, ಹೈಕಮಾಂಡ್‌ನಲ್ಲಿ ಪ್ರಭಾವಿಯಾಗಿರುವ ನಾಯಕರೊಬ್ಬರು ಕೈ ಜೋಡಿಸಿರುವುದೂ ಕಾರಣ. ಇದರ ಪರಿಣಾಮವಾಗಿ ಡಿ.ಕೆ.ಶಿವಕುಮಾರ್ ಅವರ ಪರವಾಗಿ ನಿಮ್ಮ ಸಂಪುಟದ ಸಚಿವರೊಬ್ಬರು ಶಾಸಕರನ್ನು ಮೊಬಿಲೈಸ್ ಮಾಡುತ್ತಿದ್ದಾರೆ. ಗಂಭೀರವಾದ ವಿಷಯ ಎಂದರೆ ನಾಯಕತ್ವ ಬದಲಾವಣೆಯಾದರೆ ನಾವು ನಿಮ್ಮ ಜತೆ ನಿಲ್ಲಲು ಸಿದ್ದ. ಆದರೆ ನಾಯಕತ್ವ ಬದಲಿಸಲು ನಿರ್ಧರಿಸಿದ್ದೇವೆ ಅಂತ ವರಿಷ್ಠರಿಂದ ಅನೌನ್ಸು ಮಾಡಿಸಿ ಎಂಬುದು ಕೆಲ ಸೀನಿಯರ್ ಸಚಿವರು, ಶಾಸಕರು ಸೇರಿದಂತೆ ಹಲವರ ಸಿಗ್ನಲ್ಲು. ಹೀಗಾಗಿ ರಾಹುಲ್ ಗಾಂಧಿ ಅವರ ಮೂಲಕ ನಿಮಗೆ ಹೇಳಿಸಲು, ಅಧಿಕಾರ ಹಸ್ತಾಂತರಕ್ಕೆ ಸಹಕರಿಸಿ ಎಂದು ಮನವಿ ಮಾಡಿಸಲು ತಂತ್ರಗಳು ರೂಪುಗೊಂಡಿವೆ. ಈ ಎಲ್ಲದರಷ್ಟೇ ಮುಖ್ಯವಾಗಿ ಅಧಿಕಾರ ಹಸ್ತಾಂತರ ಪ್ರಕ್ರಿಯೆಗಾಗಿ ನವೆಂಬರ್ ತನಕ ಕಾಯಬೇಡಿ. ಹಾಗೇನಾದರೂ ಕಾದರೆ ರಾಜಸ್ಥಾನದಲ್ಲಿ ಸಿಎಂ ಅಶೋಕ್ ಗೆಹ್ಲೋಟ್ ಅವರು ಡಿಸಿಎಂ ಸಚಿನ್ ಪೈಲಟ್ ಅವರಿಗೆ ಏನು ಮಾಡಿದರೋ, ಅದೇ ಕತೆ ಇಲ್ಲಿ ಪುನರಾವರ್ತನೆ ಆಗಬಹುದು ಅಂತ ಆಪ್ತರು ಡಿ.ಕೆ.ಶಿವಕುಮಾರ್ ಅವರ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ಸಿದ್ದರಾಮಯ್ಯ ಅವರಿಗೆ ವರ್ತಮಾನ ತಲುಪಿಸಿದೆ. ಯಾವಾಗ ಈ ವರ್ತಮಾನ ತಲುಪಿತೋ, ಆಗ ಸಹಜವಾಗಿಯೇ ಸಿದ್ದರಾಮಯ್ಯ ಕುದ್ದು ಹೋಗಿದ್ದಾರೆ. ಅಷ್ಟೇ ಅಲ್ಲ, ನಿರ್ಣಾಯಕ ಯುದ್ಧಕ್ಕೆ ಸಜ್ಜಾಗಿ ನಿಂತಿದ್ದಾರೆ.

ವೀರೇಂದ್ರ ಪಾಟೀಲ್-ಚೆನ್ನಾರೆಡ್ಡಿ ಎಪಿಸೋಡು?

ಹೀಗೆ ಸಿದ್ದರಾಮಯ್ಯ ಯುದ್ಧಕ್ಕೆ ಸಜ್ಜಾಗಿ ನಿಲ್ಲುವ ಕಾಲಕ್ಕೆ, ಅವರ ಬಣದಲ್ಲಿ ಮತ್ತೊಂದು ಅನುಮಾನ ಕಾಣಿಸಿಕೊಂಡಿದೆ. ಅದೆಂದರೆ ವೀರೇಂದ್ರ ಪಾಟೀಲ್-ಚೆನ್ನಾರೆಡ್ಡಿ ಎಪಿಸೋಡನ್ನು ರಿಪೀಟ್ ಮಾಡಲು ಹೈಕಮಾಂಡ್ ಹೊರಟಿದೆಯೇ? ಎಂಬುದು.

ಅಂದ ಹಾಗೆ, 1989ರಲ್ಲಿ ವೀರೇಂದ್ರ ಪಾಟೀಲ್ ಕರ್ನಾಟಕದ ಮುಖ್ಯಮಂತ್ರಿಯಾದರೆ, ಅದೇ ಕಾಲಕ್ಕೆ ಆಂಧ್ರಪ್ರದೇಶದಲ್ಲಿ ಚೆನ್ನಾರೆಡ್ಡಿ ಮುಖ್ಯಮಂತ್ರಿಯಾಗಿ ಸೆಟ್ಲಾಗಿದ್ದರು. ಆದರೆ ಅವರು ಮುಖ್ಯಮಂತ್ರಿಗಳಾದ ಕೆಲವೇ ಕಾಲದಲ್ಲಿ ಕಾಂಗ್ರೆಸ್ ಹೈಕಮಾಂಡ್‌ಗೆ ಭ್ರಮನಿರಸನವಾಗಿದೆ. ಕಾರಣ? ಕಟ್ಟುನಿಟ್ಟಿನ ರಾಜಕೀಯ ಬದುಕಿಗೆ ಅಂಟಿಕೊಂಡಿದ್ದ ವೀರೇಂದ್ರ ಪಾಟೀಲ್ ಮತ್ತು ಚೆನ್ನಾರೆಡ್ಡಿ ಹೈಕಮಾಂಡ್ ಬಯಸಿದಂತೆ ಪಾರ್ಟಿಫಂಡ್ ಕೊಡಲು ಒಪ್ಪಿಲ್ಲ. ಆದರೆ ಅಷ್ಟೊತ್ತಿಗಾಗಲೇ ದಿಲ್ಲಿ ಗದ್ದುಗೆಯಿಂದ ದೂರವಿದ್ದ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಮಟ್ಟದ ಸಂಪನ್ಮೂಲದ ಅಗತ್ಯವಿತ್ತಲ್ಲ? ಹೀಗಾಗಿ ಅದು ಕರ್ನಾಟಕ, ಆಂಧ್ರಪ್ರದೇಶದಲ್ಲಿರುವ ಕಾಂಗ್ರೆಸ್ ಸರಕಾರಗಳಿಂದ ಹೆಚ್ಚಿನ ನೆರವು ಬಯಸುತ್ತಿತ್ತು. ತನ್ನ ಈ ಬಯಕೆಗೆ ವೀರೇಂದ್ರ ಪಾಟೀಲ್, ಚೆನ್ನಾರೆಡ್ಡಿ ಯಾವಾಗ ಸ್ಪಂದಿಸಲಿಲ್ಲವೋ, ಆಗ ಇಬ್ಬರನ್ನೂ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಲು ಅದು ತೀರ್ಮಾನಿಸಿತು.

ಹೀಗೆ ಉಭಯ ನಾಯಕರ ಪದಚ್ಯುತಿಗೆ ಅದು ಮುಂದಾದ ಕಾಲಕ್ಕೆ, ಇಲ್ಲಿ ವೀರೇಂದ್ರ ಪಾಟೀಲರು ಅನಾರೋಗ್ಯಕ್ಕೊಳಗಾದರು. ಇದೇ ಕಾಲದಲ್ಲಿ ರಾಮನಗರ ಸೇರಿದಂತೆ ಕರ್ನಾಟಕದ ಕೆಲ ಭಾಗಗಳಲ್ಲಿ ಕೋಮುಗಲಭೆ ನಡೆದಾಗ ಕಾನೂನು-ಸುವ್ಯವಸ್ಥೆ ವಿಫಲವಾಗಿದೆ ಎಂಬ ಕಾರಣ ಮುಂದಿಟ್ಟು ಪಾಟೀಲರನ್ನು ಕೆಳಗಿಳಿಸಲಾಯಿತು. ಇದೇ ರೀತಿ ಮುಂದಿನೆರಡು ತಿಂಗಳಲ್ಲಿ ಚೆನ್ನಾರೆಡ್ಡಿ ಕೆಳಗಿಳಿದರು. ಅರ್ಥಾತ್, ಇವತ್ತು ದಿಲ್ಲಿಯಲ್ಲಿ ಅಧಿಕಾರ ಕಳೆದುಕೊಂಡಿರುವ ಕಾಂಗ್ರೆಸ್ ಆರ್ಥಿಕವಾಗಿ ಸಂಕಷ್ಟದಲ್ಲಿದೆ. ಹೀಗಿರುವಾಗ ಕರ್ನಾಟಕದಿಂದ ಸಿದ್ದರಾಮಯ್ಯ, ತೆಲಂಗಾಣದಿಂದ ರೇವಂತರೆಡ್ಡಿ ಹೈಕಮಾಂಡ್ ನಿರೀಕ್ಷಿಸಿದ ಮಟ್ಟದಲ್ಲಿ ಪಾರ್ಟಿಫಂಡು ಕೊಡಬೇಕು ಅಂತ ಬಯಸುತ್ತಿದೆ. ಆದರೆ ಇದ್ದುದರಲ್ಲಿ ಸಿದ್ದರಾಮಯ್ಯ ಹೈಕಮಾಂಡ್‌ಗೆ ಬಲ ತುಂಬುತ್ತಾರಾದರೂ, ಅವರಿಗಿಂತ ದೊಡ್ಡ ಮಟ್ಟದಲ್ಲಿ ಶಕ್ತಿ ನೀಡುವವರು ಬೇಕು ಅಂತ ಹೈಕಮಾಂಡ್‌ನ ಕೆಲ ನಾಯಕರು ಯೋಚಿಸಿರಬಹುದು ಎಂಬುದು ಸಿದ್ದು ಆಪ್ತರ ಅನುಮಾನ. ಆದರೆ ವೀರೇಂದ್ರ ಪಾಟೀಲ್-ಚೆನ್ನಾರೆಡ್ಡಿ ಎಪಿಸೋಡಿನ ಕಾಲಕ್ಕೂ ಈಗಿನ ಕಾಲಕ್ಕೂ ಇರುವ ವ್ಯತ್ಯಾಸವೆಂದರೆ ಕಾಂಗ್ರೆಸ್ ಹೈಕಮಾಂಡ್‌ಗಿರುವ ಶಕ್ತಿ. ಅವತ್ತು ವೀರೇಂದ್ರ ಪಾಟೀಲ್-ಚೆನ್ನಾರೆಡ್ಡಿಯವರ ಮೇಲೆ ರಾಜೀವ್ ಗಾಂಧಿ ಮುಗಿಬಿದ್ದ ಕಾಲದಲ್ಲಿ ಕಾಂಗ್ರೆಸ್‌ಗೆ ಹಲ ರಾಜ್ಯಗಳಲ್ಲಿ ಅಧಿಕಾರವಿತ್ತು. ಅರ್ಥಾತ್, ಇಲ್ಲಿ ಮುಖ್ಯಮಂತ್ರಿಗಳ ಬದಲಾವಣೆಯ ರಿಸ್ಕ್ ತೆಗೆದುಕೊಂಡರೂ ಪರ್ಯಾಯ ಮೂಲಗಳಿದ್ದವು.

ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ಹಿಮಾಚಲ ಪ್ರದೇಶ, ತೆಲಂಗಾಣದಂಥ ರಾಜ್ಯಗಳಲ್ಲಿ ಪಕ್ಷ ಅಧಿಕಾರದಲ್ಲಿದೆ ಯಾದರೂ ಹೈಕಮಾಂಡ್‌ಗೆ ಬಲ ನೀಡುವ ಶಕ್ತಿ ಇರುವುದು ಕರ್ನಾಟಕಕ್ಕೆ ಮಾತ್ರ. ಇಲ್ಲಿ ಸರಕಾರ ಉರುಳಿದರೆ ಕಾಂಗ್ರೆಸ್‌ನ ಶಕ್ತಿ ನೆಲ ಕಚ್ಚುತ್ತದೆ. ಹೀಗಾಗಿ ಸಿದ್ದರಾಮಯ್ಯ ತಮ್ಮನ್ನು ಇಳಿಸುವ ದಿಲ್ಲಿಯ ಕೆಲ ನಾಯಕರ ತಂತ್ರಕ್ಕೆ ಕೌಂಟರ್ ಕೊಡುವುದು ಸೇಫ್ ಎಂಬ ನಿರ್ಧಾರವಾಗಿದೆ.

ದಿಲ್ಲಿಯಲ್ಲಿ ಬಾಂಬ್ ಬ್ಲಾಸ್ಟ್ ಆಯಿತು

ಯಾವಾಗ ಈ ನಿರ್ಧಾರವಾಯಿತೋ, ನಂತರ ದಿಲ್ಲಿಗೆ ಹೋದ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ ಮೀಟಿಂಗು ನಡೆಸುವ ಮುನ್ನವೇ ಬಾಂಬ್ ಬ್ಲಾಸ್ಟ್ ಮಾಡಿದ್ದಾರೆ. ''ಮುಂದಿನ ಐದು ವರ್ಷಗಳ ಕಾಲ ನಾನೇ ಸಿಎಂ ಆಗಿರುತ್ತೇನೆ. ಸಿಎಂ ಆಗಲು ಬಯಸಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಶಾಸಕರ ಬೆಂಬಲವಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಶಾಸಕಾಂಗ ನಾಯಕನ ಆಯ್ಕೆಗೆ ನಡೆದ ಚುನಾವಣೆಯಲ್ಲಿ ನಾನು ಗೆದ್ದಿದ್ದೇನೆ'' ಅಂತ ಅವರು ಬಾಂಬ್ ಬ್ಲಾಸ್ಟ್ ಮಾಡಿದ ರೀತಿಗೆ ಕಾಂಗ್ರೆಸ್ ಹೈಕಮಾಂಡ್ ತಣ್ಣಗಾಗಿ ಹೋಗಿದೆ.

ಅರ್ಥಾತ್, ಇದು ತಮಗೆ ಸಿದ್ದರಾಮಯ್ಯ ನೀಡಿದ ಪಂಥಾಹ್ವಾನ ಎಂಬುದು ವರಿಷ್ಠರಿಗೆ ಕನ್‌ಫರ್ಮ್ ಆಗಿದೆ. ಹೀಗಾಗಿ ಎಮ್ಮೆಲ್ಲೆ ಪಟ್ಟಿ ಕ್ಲಿಯರ್ ಮಾಡಿಸುವ ನೆಪದಲ್ಲಿ ನಡೆಸಲುದ್ದೇಶಿಸಲಾಗಿದ್ದ ರಾಹುಲ್ ಮೀಟಿಂಗು ಇದ್ದಕ್ಕಿದ್ದಂತೆ ಕ್ಯಾನ್ಸಲ್ ಆಗಿದೆ. ಕಾರಣ? ಮೀಟಿಂಗು ನಡೆದರೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರಿಗೆ ಏನು ಮೆಸೇಜು ಕೊಡಬೇಕೋ ಅದನ್ನು ಕೊಡಲು ಸಾಧ್ಯವಿಲ್ಲ ಎಂಬ ರಾಹುಲ್‌ರ ಅಸಹಾಯಕತೆ. ಪರಿಣಾಮ? ಅಧಿಕಾರ ಹಂಚಿಕೆಯ ಮಾತಿಗೆ ದಿಲ್ಲಿ ಮಟ್ಟದಲ್ಲೀಗ ತಾತ್ಕಾಲಿಕ ಬ್ರೇಕ್ ಬಿದ್ದಿದೆ. ಹಾಗಂತ ಈ ಮಾತು ನಿಂತೇಬಿಡುತ್ತದೆ ಅಂತೇನಲ್ಲ, ಯಾಕೆಂದರೆ ಡಿಕೆಶಿ ಹಿಡಿದ ಹಠ ಬಿಡುವ ನಾಯಕ ಅಲ್ಲವಲ್ಲ?

ಲಾಸ್ಟ್ ಸಿಪ್: ಅಂದ ಹಾಗೆ, ಸಿಎಂ ಹುದ್ದೆಗಾಗಿ ಡಿಕೆಶಿ ಮರಳಿ ಯತ್ನಿಸುವುದು ಖಚಿತವಾದ್ದರಿಂದ, ಈಗಿನಿಂದಲೇ ಅವರಿಗೆ ಕೌಂಟರ್ ಕೊಡುತ್ತಾ ಹೋಗಲು ಸಿದ್ದು ಬಯಸಿದ್ದಾರೆ. ಹೀಗಾಗಿಯೇ ಆಗಸ್ಟ್ 1ರಂದು ದಿಲ್ಲಿಗೆ ದೌಡಾಯಿಸಲಿರುವ ಅವರು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಹಲವು ಡಿಮಾಂಡುಗಳನ್ನು ಮುಂದಿಡಲಿದ್ದಾರಂತೆ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸತೀಶ್ ಜಾರಕಿಹೊಳಿ ಅವರನ್ನು ತರಬೇಕು, ತಾವು ಬಯಸಿದವರನ್ನು ಸಂಪುಟಕ್ಕೆ ತೆಗೆದುಕೊಳ್ಳಲು ಅವಕಾಶ ನೀಡಬೇಕು ಎಂಬುದು ಅವರ ಡಿಮಾಂಡು ಅಂತ ಸದ್ಯದ ಮಾಹಿತಿ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದು ಶಿಕ್ಷಕರ ಸ್ಥಿತಿಗತಿ

ಸರಕಾರಿ ಶಿಕ್ಷಕರ ಸ್ಥಿತಿಗತಿ ನಿಜಕ್ಕೂ ಶೋಚನೀಯ. ಪಾಪ, ಮಕ್ಕಳಿಗೆ ಪಾಠ ಮಾಡಲು ಸಮಯ ಸಿಗದಷ್ಟರ ಮಟ್ಟಿಗೆ ಶಿಕ್ಷಕರ ಮೇಲೆ ಬೇರೆ ಕೆಲಸಗಳ ಹೊರೆಯನ್ನು ಹೇರುತ್ತಿದೆ ಶಿಕ್ಷಣ ಇಲಾಖೆ. ಒಮ್ಮೆ ಅವರ ಸ್ಥಾನದಲ್ಲಿ ನಿಂತು ಯೋಚಿಸಿದರೆ, ಅವರ ಈ ಕಷ್ಟ ಅರ್ಥವಾಗುತ್ತದೆ.

'ಶಾಲೆಯ ಅಕ್ಕಪಕ್ಕದ ಶೆಡ್‌ಗಳಲ್ಲಿರುವ ಮಕ್ಕಳನ್ನು ಕರೆತಂದು ಶಾಲೆಗೆ ಸೇರಿಸಿ' ಅಂತಾರೆ. ಇಲ್ಲವಾದರೆ, 'ಯಾಕೆ ನೀವು ಸರ್ವೆ ಮಾಡಿಲ್ಲ? ಮಕ್ಕಳ ಸಂಖ್ಯೆ ಕಡಿಮೆಯಿದೆ' ಎಂಬ ಆರೋಪ! ಹಾಗೆ ಸೇರಿಸಲು ಅವರಲ್ಲಿ ಸರಿಯಾದ ವಿಳಾಸ ಇರುವುದಿಲ್ಲ, ಆಧಾರ್ ಕಾರ್ಡ್ ಅಲಭ್ಯ. ಕೆಲವೊಮ್ಮೆ ಸೇರಿಸಿಕೊಂಡರೂ, ಮೂರೇ ತಿಂಗಳಿಗೆ ಪರವೂರಿಗೆ ಹೋದವರು ಬರುವುದೇ ಇಲ್ಲ. ಅವರ ಬಗ್ಗೆ ನಿಗಾ ಇಟ್ಟು, ಅವರಿಗೆ ಟಿ.ಸಿ. ಕೊಟ್ಟು ಕಳುಹಿಸದಿದ್ದರೆ 'ಫೇಕ್ ಹಾಜರಾತಿ' ಎಂಬ ಆಪಾದನೆ. ಸಾಲದೆಂಬಂತೆ, ಮಕ್ಕಳಿಗೆ ಬಿಸಿಯೂಟ ಕೊಡುವ 'ಅಕ್ಷಯಪಾತ್ರೆ' ಲೆಕ್ಕ ಬೇರೆ, ಸರಕಾರ ಕೊಡುವ ಬಿಸಿಯೂಟದ ಲೆಕ್ಕ ಬೇರೆ. ಜತೆಗೆ ಕೊಡುವ ಮೊಟ್ಟೆಯು 40 ಗ್ರಾಂ ತೂಕದ್ದೇ ಇರಬೇಕಂತೆ. ಅದೇನು ಕೋಳಿಯ ಎಲ್ಲಾ ಮೊಟ್ಟೆಗಳೂ ಒಂದೇ ತೂಕದ್ದೇ ಇರುತ್ತಾ?! ಎಂಥಾ ಹುಚ್ಚು ನಿಯಮಗಳು ಅಲ್ಲವೇ?!

ಶಿಕ್ಷಕರೆನಿಸಿಕೊಂಡವರು ಜನಗಣತಿ, ಜಾತಿಗಣತಿ, ಚುನಾವಣೆ ಕಾರ್ಯ ಮಾತ್ರವಲ್ಲದೆ, ಪುಸ್ತಕ ಮತ್ತು ಸಮವಸ್ತ್ರ ತರುವುದಕ್ಕೆ ಹೋಗಬೇಕು. ಕಾಲಾನುಕಾಲಕ್ಕೆ ಆಗುವ ಮೀಟಿಂಗುಗಳಲ್ಲಿ ಪಾಲ್ಗೊಳ್ಳಬೇಕು. ತರಬೇತಿಗೆಂದು ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರದಲ್ಲಿ ವಾರಗಟ್ಟಲೆ ತೊಡಗಿಸಿಕೊಳ್ಳಬೇಕು. ಶಾಲೆಯನ್ನು ಸುಸ್ಥಿತಿಯಲ್ಲಿಡಬೇಕು- ಹೀಗೆ ಹತ್ತಾರು ಕೆಲಸಗಳನ್ನು ಅಂಟಿಸಿದರೆ ಶಿಕ್ಷಕರು ಪಾಠ ಮಾಡುವುದು ಯಾವಾಗ? ಗುಣಾತ್ಮಕ ಶಿಕ್ಷಣವನ್ನು ಕೊಡುವುದು ಹೇಗೆ? ಕೆಲವು ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರು, ಅವರೇ ಎಲ್ಲವನ್ನೂ ನಿಭಾಯಿಸಬೇಕು, ಯಾವುದೇ ಸಹಾಯಕರನ್ನು ಒದಗಿಸುವುದಿಲ್ಲ. ಪಠ್ಯಕ್ರಮವನ್ನೇನೊ ಬಹಳ ಚೆನ್ನಾಗಿ ರೂಪಿಸಿದ್ದಾರೆ, ಒಂದೊಂದು ಪಾಠವನ್ನೂ ಆಯಾ ದಿನದ ವೇಳಾಪಟ್ಟಿಯಲ್ಲಿ ನಮೂದಿಸಿ ಸುಂದರವಾದ ಕ್ಯಾಲೆಂಡರ್ ಅನ್ನು ಮುದ್ರಿಸಿದ್ದಾರೆ. ಆದರೆ ಅದನ್ನು ಮಕ್ಕಳಿಗೆ ಹೇಳಿಕೊಡಲು ಸಮಯವನ್ನೇ ನೀಡುತ್ತಿಲ್ಲ! ಶಿಕ್ಷಣ ಇಲಾಖೆಯವರ ಈ ರೀತಿಯ ಒತ್ತಡದಿಂದಾಗಿ ಶಿಕ್ಷಕರ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಗಳು ಹೆಚ್ಚಿವೆ. ಆದ್ದರಿಂದ ಸರಕಾರವು ಇನ್ನಾದರೂ ಎಚ್ಚೆತ್ತು ಸಾಕಷ್ಟು ಶಿಕ್ಷಕರನ್ನು ನೇಮಿಸಿ, ಈ ಒತ್ತಡವನ್ನು ತಪ್ಪಿಸಬೇಕು.

- ಸುಜಯ ಆರ್. ಕೊಣ್ಣೂರ್ ವಿದ್ಯಾಮಾನ್ಯ ನಗರ

ಶ್ಲಾಘನೀಯ ಕ್ರಮ

ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಒಂದೆನಿಸಿರುವ ಬ್ಯಾಂಕ್ ಆಫ್ ಬರೋಡಾ, ವಿವಿಧ ರಾಜ್ಯಗಳಲ್ಲಿ ಕೆಲಸ ಮಾಡುವ ತನ್ನ ಸಿಬ್ಬಂದಿಗಳಿಗೆ ಸ್ಥಳೀಯ ಭಾಷೆಯನ್ನು ಕಲಿಸುವ ಸಿಬ್ಬಂದಿಗಳ ನೇಮಕಾತಿಗೆ ಮುಂದಾಗಿದೆ. ಈ ಪೈಕಿ ಕರ್ನಾಟಕದಲ್ಲಿ 450 ಹುದ್ದೆಗಳಿಗೆ ನೇಮಕಾತಿ ನಡೆಸಲು ಅಧಿಸೂಚನೆ ಹೊರಡಿಸಲಾಗಿದೆ. ಇದೊಂದು ಬಹುನಿರೀಕ್ಷಿತ ಮತ್ತು ಶ್ಲಾಘನೀಯ ಕ್ರಮವಾಗಿದ್ದು, ಮಿಕ್ಕೆಲ್ಲಾ ಬ್ಯಾಂಕುಗಳೂ ಇದನ್ನು ಅನುಸರಿಸಲಿ ಎಂಬುದು ಕನ್ನಡಿಗರ ಆಶಯ. ಕನ್ನಡಿಗರ ಕೂಗು ಮತ್ತು ಆಗ್ರಹಗಳು ಸಂಬಂಧಪಟ್ಟವರನ್ನು ತಡವಾಗಿಯಾದರೂ ತಲುಪಿದೆ ಮತ್ತು ಅದಕ್ಕೆ ಸಕಾರಾತ್ಮಕ ಸ್ಪಂದನೆ ಸಿಕ್ಕಂತಾಗಿದೆ. ಆದರೆ ಈ ಸಿಬ್ಬಂದಿಗಳು ಸ್ಥಳೀಯ ಭಾಷೆ ಕಲಿತು ಅದರಲ್ಲಿ ವ್ಯವಹರಿಸಲು ಆರಂಭಿಸುವ ಹೊತ್ತಿಗೆ ಅವರ ವರ್ಗಾವರ್ಗಿ ಆಗಿರುತ್ತದೆ. ಹೀಗಾಗಿ ಈ ಪ್ರಯತ್ನ ಯಶಸ್ವಿಯಾಗುತ್ತದೆಯೇ ಎಂಬ ಅನುಮಾನ ಹಲವರನ್ನು ಕಾಡುತ್ತಿದೆ. ಇದರ ಬದಲಾಗಿ, ಸಿಬ್ಬಂದಿಗಳನ್ನು ಸ್ಥಳೀಯವಾಗಿ ಆಯ್ಕೆಮಾಡಿ, ಅವರವರ ಭಾಷಾ ಪ್ರದೇಶಗಳಲ್ಲಿಯೇ ಸೇವೆಗೆ ನಿಯೋಜಿಸುವ, ವರ್ಗಮಾಡುವ ಪರಿಪಾಠವನ್ನು ಅನುಸರಿಸಬಹುದಲ್ಲವೇ?

- ರಮಾನಂದ ಶರ್ಮಾ ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಧಿಕಾರದ ಚದುರಂಗದಾಟದಲ್ಲಿ ಡಿಕೆಶಿಗೆ ಮತ್ತೆ ಹಿನ್ನಡೆಯೇ?

ಚದುರಂಗ

ರಾಘವ ಶರ್ಮ ನಿಡ್ಲೆ

vveditoped@gmail.com

'ಪೂರ್ಣಾವಧಿಗೆ ನಾನೇ ಮುಖ್ಯಮಂತ್ರಿ. 2029ರಲ್ಲೂ ನಾನೇ ಸಿಎಂ' ಎಂಬ ಸಿದ್ದರಾಮಯ್ಯನರ ಮಾತುಗಳನ್ನು ನಾವು ಹಲವು ಆಯಾಮಗಳಲ್ಲಿ ನೋಡಬೇಕು. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಸಿಎಂ ಕುರ್ಚಿ ಮೇಲೆ ಕಣ್ಣಿಟ್ಟಿದ್ದ ಮಹತ್ವಾಕಾಂಕ್ಷಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ, ಎರಡೂವರೆ ವರ್ಷದ ಬಳಿಕ ಅಧಿಕಾರ ಹಸ್ತಾಂತರ ಸಾಧ್ಯವೇ ಇಲ್ಲ ಎಂಬ ಸಂದೇಶ ರವಾನಿಸುವ ಜತೆಗೆ, ಶಿವಕುಮಾರ್‌ರ ನಾಯಕತ್ವ ಮತ್ತು ಸಾಮರ್ಥ್ಯವನ್ನು ಕೂಡ ಸಿದ್ದರಾಮಯ್ಯ ಬದಿಗೆ ಸರಿಸಿದ್ದಾರೆ. 'ರಾಜ್ಯ ಕಾಂಗ್ರೆಸ್‌ನ ಪರಮೋಚ್ಚ ನಾಯಕ ನಾನೇ ಮತ್ತು ಶಾಸಕರೂ ನನ್ನೊಂದಿಗಿದ್ದಾರೆ' ಎನ್ನುವ ಮೂಲಕ ಶಿವಕುಮಾರ್ ಪಕ್ಷದೊಳಗಿನ ವಿಶ್ವಾಸಾರ್ಹ ನಾಯಕ ಅಲ್ಲ ಎಂಬುದನ್ನೂ ಅವರೂ ಪರೋಕ್ಷವಾಗಿ ತಿಳಿಸಿದ್ದಾರೆ. ಸಿಎಂ ಸ್ಥಾನದ ಕನಸು ಕಾಣಬಹುದು. ಆದರೆ, 'ಅದಕ್ಕೆ ನಾ ಬಿಡಲಾರೆ' ಎಂದಿರುವ ಸಿದ್ದರಾಮಯ್ಯ, 'ಶಿವಕುಮಾರ್ ಕನಸು ನನಸಾಗದು' ಎಂಬ ಸಂದೇಶ ಕೊಟ್ಟಿದ್ದಾರೆ.

ನಾಯಕತ್ವದ ವಿಷಯಕ್ಕೆ ಸಂಬಂಧಿಸಿ ದಿಲ್ಲಿಯಲ್ಲಿ ರಾಹುಲ್ ಗಾಂಧಿಯವರಿಂದ ಖಚಿತತೆ ಪಡೆದು ವಾಪಸಾಗುವ ಉದ್ದೇಶ ಹೊಂದಿದ್ದ ಸಿದ್ದರಾಮಯ್ಯರಿಗೆ ರಾಹುಲ್ ಭೇಟಿ ಸಾಧ್ಯವಾಗಲಿಲ್ಲ. ಆದರೆ, ದಿಲ್ಲಿ ಅಂಗಳದಲ್ಲಿ ನಿಂತು ಪಕ್ಷ, ಶಾಸಕರು, ಮುಖಂಡರು, ಕಾರ್ಯಕರ್ತರಿಗೆ 'ನಾಯಕತ್ವ ಬದಲಾವಣೆ ಸಾಧ್ಯವಿಲ್ಲ' ಎನ್ನುವುದನ್ನು ಖಚಿತಪಡಿಸಿದ್ದಾರೆ. ಇದರಿಂದಾಗಿ, ಈ ಅವಧಿಯಲ್ಲಿ ಡಿ.ಕೆ. ಶಿವಕುಮಾರ್ ಸಿಎಂ ಗಾದಿಗೇರುವ ಲಕ್ಷಣ ಕ್ಷೀಣಿಸಲಾರಂಭಿಸಿದೆ. ಒಂದೊಮ್ಮೆ ಹೈಕಮಾಂಡ್ ಡಿ.ಕೆ. ಶಿವಕುಮಾರ್ ಕಡೆ ಒಲವು ತೋರಬಹುದು ಎಂದು ಭಾವಿಸಿದರೂ, ಬಹುಪಾಲು ಸಚಿವರು, ಶಾಸಕರು ಸಿದ್ದರಾಮಯ್ಯರ ಬೆನ್ನಿಗೆ ನಿಂತಿರುವುದರಿಂದ ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ಮುಳ್ಳಿನ ಹಾದಿಯೇ ಸರಿ.

ಹಾಗಂತ, ಡಿ.ಕೆ. ಶಿವಕುಮಾರ್ ಸುಮ್ಮನೆ ಕೂರಲು ಸನ್ಯಾಸಿಯೇನೂ ಅಲ್ಲ. ಅಕ್ರಮ ಹಣ ಸಂಪಾದನೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ (ಇ.ಡಿ.) ತನಿಖೆಗೊಳಗಾಗಿ 55 ದಿನಗಳ ಕಾಲ ತಿಹಾರ್ ಜೈಲಿನಲ್ಲಿದ್ದು ಬಂದು, ನಂತರ ರಾಜ್ಯ ಕಾಂಗ್ರೆಸ್ ನೇತೃತ್ವ ವಹಿಸಿ, ಪಕ್ಷವನ್ನು ಅಧಿಕಾರಕ್ಕೇರಿಸಲು ಅವರು ನೀಡಿದ ಕೊಡುಗೆಯನ್ನು ಅಲ್ಲಗಳೆಯುಂತಿಲ್ಲ. ಅವರು ತನಿಖೆ ಎದುರಿಸಿ, ಜೈಲಿನಲ್ಲಿದ್ದು ಅನುಭವಿಸಿದ ಮಾನಸಿಕ ತುಮುಲ ಅಷ್ಟಿಷ್ಟಲ್ಲ. ದಿಲ್ಲಿಯ ರೌಸ್ ಅವೆನ್ಯೂ ಕೋರ್ಟಿನ ಕಟಕಟೆ ಎದುರು ನಿಂತಾಗ ಅವರ ಮುಖಭಾವ ಸೊರಗಿ ದೈಹಿಕವಾಗಿ ಕುಸಿದಂತೆ ಕಾಣುತ್ತಿದ್ದರು, ಭವಿಷ್ಯದ ಬಗೆಗಿನ ಚಿಂತೆಗಳು ಅವರನ್ನು ಬಾಧಿಸಿದ್ದವು. ಈ ಎಲ್ಲಾ ಸಂದರ್ಭಗಳಲ್ಲಿ ಧೃತಿಗೆಡದೆ ಧೈರ್ಯ ಹೇಳುತ್ತಾ, ಕಾನೂನು ಹೋರಾಟ ಮಾಡಿ, ಶಿವಕುಮಾರ್‌ರ ಬೆನ್ನಿಗೆ ನಿಂತದ್ದು ಅವರ ಸೋದರ ಡಿ.ಕೆ. ಸುರೇಶ್. ಜೈಲು ಸೇರಿದ್ದಾಗ ತನ್ನ ನೋವಿಗೆ ಸ್ಪಂದಿಸುವುದಕ್ಕಿಂತ ಅದನ್ನು ಪಕ್ಷದ ಹಲವರು ಸಂಭ್ರಮಿಸಿದ್ದೇ ಹೆಚ್ಚು ಎನ್ನುವುದು ಡಿಕೆಶಿಗೆ ಗೊತ್ತಿದೆ. ಬಿಜೆಪಿಯಿಂದ ಆಮಿಷಗಳು ಬಂದಾಗಲೂ, ಇ.ಡಿ. ಪ್ರಕರಣದ ಬಿಸಿಗೆ ಬಗ್ಗದೆ ಕಾಂಗ್ರೆಸ್‌ನಲ್ಲೇ ಮುಂದುವರಿದು, ಹೋರಾಟ ಮಾಡಿರುವ ಡಿಕೆಶಿ, ತಾವು ಪಕ್ಷನಿಷ್ಠರು ಎನ್ನುವುದನ್ನೂ ಸಾಬೀತುಪಡಿಸಿದ್ದಾರೆ. ಇದೇ ಕಾರಣಕ್ಕೆ ಮಾಜಿ ಸಂಸದ, ಸೋದರ ಡಿ.ಕೆ. ಸುರೇಶ್ ಆದಿಯಾಗಿ ಶಿವಕುಮಾರ್ ಹಿಂದೆ ಬಂಡೆಯಂತೆ ನಿಂತಿರುವ ಅನೇಕರು ಈ ಅವಧಿಗೇ ಅವರಿಗೆ ಸಿಎಂ ಸ್ಥಾನ ಸಿಗಬೇಕು ಎಂಬ ವಾದ ಮುಂದಿಡುತ್ತಿರುವುದು.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಿ, ಸರಕಾರ ರಚಿಸುವ ಮುನ್ನ ದೆಹಲಿಗೆ ಬಂದಿದ್ದ ಶಿವಕುಮಾರ್ ತಮ್ಮನ್ನು ಸಿಎಂ ಮಾಡಲೇಬೇಕೆಂದು ಪಟ್ಟುಹಿಡಿದಿದ್ದರು. ''ಸಿದ್ದರಾಮಯ್ಯ 5 ವರ್ಷಕ್ಕೆ ಪೂರ್ಣಾವಧಿ ಸಿಎಂ ಆಗಿದ್ದವರು ಮತ್ತು ಈ ಬಾರಿ ಹೊಸ ನಾಯಕತ್ವಕ್ಕೆ ಅವಕಾಶ ನೀಡಬೇಕು. ಗುಜರಾತ್‌ನಲ್ಲಿ ಅಹ್ಮದ್ ಪಟೇಲ್‌ರನ್ನು ರಾಜ್ಯಸಭೆ ಚುನಾವಣೆಯಲ್ಲಿ ಗೆಲ್ಲಿಸಲು ಹೋರಾಟ ಮಾಡಿದ್ದರ ಫಲವಾಗಿ ಇ.ಡಿ. ಕೇಸು ನನ್ನ ಮೈಗಂಟಿಕೊಂಡು 2 ತಿಂಗಳ ಕಾಲ ತಿಹಾರ್ ಜೈಲಿನಲ್ಲಿದ್ದು ಬಂದೆ. ಬೇರೆಯವರಾಗಿದ್ದರೆ, ಬಿಜೆಪಿ ಆಮಿಷಕ್ಕೆ ಮಣಿದು ಆ ಪಕ್ಷ ಸೇರುತ್ತಿದ್ದರು. ನಾನು ಹಾಗೆ ಮಾಡಲಿಲ್ಲ. ಮೇಲಾಗಿ, ಈ ಚುನಾವಣೆ ಗೆಲ್ಲಲು ಏನೆಲ್ಲಾ ಮಾಡಿದ್ದೇನೆ ಎಂಬ ಸಂಪೂರ್ಣ ವರದಿ ನಿಮ್ಮ ಮುಂದಿದೆ. ಹೀಗಿದ್ದ ಮೇಲೂ ನೀವು ಸಿದ್ದರಾಮಯ್ಯರನ್ನು ಸಿಎಂ ಮಾಡುವುದನ್ನು ನಾನು ಸ್ವೀಕರಿಸಲಾರೆ'' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ನಿವಾಸ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ನಿವಾಸಕ್ಕೆ ಹತ್ತಾರು ಬಾರಿ ತೆರಳಿ ಕಟುವಾಗಿ ಹೇಳಿದ್ದರು. ಆದರೆ, ದಿಲ್ಲಿಯಲ್ಲಿ ಕೂತು ಪಟ್ಟುಬಿಡದ ಸಿದ್ದರಾಮಯ್ಯ, ''ಶಾಸಕರು ನನ್ನೊಂದಿಗಿದ್ದಾರೆ. ಶಾಸಕರ ಅಭಿಪ್ರಾಯವೇ ಅಂತಿಮ. ಮೇಲಾಗಿ, ಶಿವಕುಮಾರ್ ವಿರುದ್ಧ ಇ.ಡಿ. ಪ್ರಕರಣವಿದೆ. ಅವರು ಮತ್ತೊಮ್ಮೆ ಬಂಧನಕ್ಕೀಡಾದಲ್ಲಿ ಪಕ್ಷ, ಸರಕಾರ ಎರಡಕ್ಕೂ ಮುಜುಗರ'' ಎಂದು ವಾದಿಸಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯ ಒಬಿಸಿ ನಾಯಕ. ಅವರ ವಿರೋಧ ಕಟ್ಟಿಕೊಂಡು, ಮೇಲ್ವರ್ಗದ (ಒಕ್ಕಲಿಗ) ಶಿವಕುಮಾರ್‌ರನ್ನು ಸಿಎಂ ಮಾಡುವುದು ಅಪಾಯಕಾರಿ ಎಂದು ದಿಲ್ಲಿ ನಾಯಕರು ಭಾವಿಸಿದ್ದರು. ಹಾಗಂತ, ಶಿವಕುಮಾರ್ ತಮ್ಮ ನಿಲುವನ್ನು ಬದಲಿಸಿರಲಿಲ್ಲ. ಡಿಕೆಶಿಗಿಂತ ಹೆಚ್ಚು ಅವರ ಸೋದರ ಡಿ.ಕೆ. ಸುರೇಶ್, ''ಸಿಎಂ ಸ್ಥಾನ ಸಿಗದೆ ದಿಲ್ಲಿ ಬಿಡುವುದು ಬೇಡ. ಸಿದ್ದರಾಮಯ್ಯಗೆ ಸಿಎಂ ಸ್ಥಾನ ನೀಡುವುದನ್ನು ನಾನಂತೂ ಒಪ್ಪಲಾರೆ'' ಎಂದಿದ್ದರು. ಇಷ್ಟೆಲ್ಲಾ ನಡೆಯುತ್ತಿದ್ದಾಗ, ಸೋನಿಯಾ ಗಾಂಧಿ ದೆಹಲಿಯಲ್ಲಿರಲಿಲ್ಲ. ಹೀಗಾಗಿ, ವಿಡಿಯೋ ಕಾನ್ಫರೆನ್ಸ್ ಮೂಲಕ ಶಿವಕುಮಾರ್ ಜತೆಗೆ ಮಾತನಾಡಿ, ''ಅರ್ಹ ಸಂದರ್ಭದಲ್ಲಿ ನಿಮಗೆ ಅಧಿಕಾರ ಸಿಗಲಿದೆ. ಈಗ ನೀವು ತಾಳ್ಮೆಯಿಂದಿರಬೇಕು. ಬೆಂಗಳೂರಿಗೆ ಹೋಗಿ, ಸರಕಾರ ರಚನೆ ಮಾಡಿ'' ಎಂದು ಸಮಾಧಾನ ಮಾಡಿದ್ದರು.

ಅಧಿನಾಯಕಿ ಹೇಳಿದ್ದನ್ನು ವಿರೋಧಿಸಿ ಹೆಜ್ಜೆ ಇಡುವ ಮನಸ್ಸು ಅಂದು ಶಿವಕುಮಾರ್‌ರಲ್ಲಿ ಇರಲಿಲ್ಲ. ಅಧಿಕಾರದ ಭರವಸೆ ನೀಡಿದ್ದನ್ನು ಒಪ್ಪಿ, ನಂತರ ತಮ್ಮ ಸೋದರ ಸುರೇಶ್‌ಗೂ ಸಾಂತ್ವನ ಹೇಳಿ ದಿಲ್ಲಿಯಿಂದ ಬೆಂಗಳೂರಿಗೆ ಮುಖ ಮಾಡಿದ್ದರು. ಎರಡೂವರೆ ವರ್ಷದ ನಂತರ ಅಧಿಕಾರ ಹಸ್ತಾಂತರ ಆಗಲಿದೆ ಎಂಬ ಸಂದೇಶ ಸಿಕ್ಕರೂ, ಛತ್ತೀಸ್‌ಗಢ ಮತ್ತು ಪಂಜಾಬ್‌ನ ಉದಾಹರಣೆಗಳು ಕಣ್ಣಮುಂದಿದ್ದರಿಂದ ಡಿ.ಕೆ. ಸುರೇಶ್ ಮತ್ತವರ ಬೆಂಬಲಿಗ ಪಡೆಗೆ ಸೋನಿಯಾ ಗಾಂಧಿ ಭರವಸೆ ಸಮಾಧಾನ ತಂದಿರಲಿಲ್ಲ. ''ಎರಡೂವರೆ ವರ್ಷದ ಬಳಿಕ ಅಧಿಕಾರ ಬಿಟ್ಟುಕೊಡಲು ಸಿದ್ದರಾಮಯ್ಯನವರು ಸನ್ಯಾಸಿಯೇ? ಮೇಲಾಗಿ, ಅವರ ಬೆಂಬಲಿಗ ಶಾಸಕರು ಅದಕ್ಕೆ ಒಪ್ಪುತ್ತಾರಾ? ಇದು ಕೇವಲ ಕಣ್ಣೊರೆಸುವ ತಂತ್ರ'' ಎಂದೇ ಡಿಕೆಶಿ ಆಪ್ತರು, ಅಂದು ದಿಲ್ಲಿಯಲ್ಲಿ ಪತ್ರಕರ್ತರೊಂದಿಗೆ ಅನೌಪಚಾರಿಕವಾಗಿ ಮಾತನಾಡುತ್ತಾ ಬೇಸರ ಹೊರಹಾಕಿದ್ದರು. ಈಗ ಅಧಿಕಾರ ಸಿಗದಿದ್ದರೆ, 5 ವರ್ಷದಲ್ಲಿ ಎಂದಿಗೂ ಸಿಗದು ಎನ್ನುವುದು ಅವರ ಖಚಿತ ವಾದವಾಗಿತ್ತು. ಈಗಿನ ಬೆಳವಣಿಗೆಗಳನ್ನು ನೋಡಿದರೆ, 2 ವರ್ಷಗಳ ಹಿಂದಿನ ಡಿಕೆಶಿ ಬೆಂಬಲಿಗರ ವಾದವೇ ನಿಜವಾಗುವ ಲಕ್ಷಣ ಗೋಚರಿಸಿದೆ.

ಅದೇನೇ ಇರಲಿ, ಕರ್ನಾಟಕದಲ್ಲಿ ಡಿಕೆ-ಸಿದ್ದರಾಮಯ್ಯ, ಮತ್ತವರ ಬೆಂಬಲಿಗರ ಗುದ್ದಾಟಗಳು ಪಕ್ಷಕ್ಕೆ ವಿಪರೀತ ಹಾನಿ ಮಾಡುತ್ತಿವೆ. ಛತ್ತೀಸ್‌ಗಢ, ಪಂಜಾಬ್, ರಾಜಸ್ಥಾನಗಳಲ್ಲಿನ ಕಾಂಗ್ರೆಸ್ಸಿಗರ ಅಧಿಕಾರಕ್ಕಾಗಿನ ಕಿತ್ತಾಟಗಳು ಕೂಡ ಚುನಾವಣಾ ಸೋಲಿಗೆ ಕಾರಣವಾಗಿದ್ದವು ಎನ್ನುವುದಿಲ್ಲಿ ಉಲ್ಲೇಖಾರ್ಹ. ಪಂಜಾಬ್‌ನಲ್ಲಿ ಕ್ಯಾಪ್ಟನ್ ಅಮರಿಂದರ್ ಸಿಂಗ್‌ರಿಂದ ರಾಜೀನಾಮೆ ಪಡೆದುಕೊಂಡ ಪ್ರಹಸನ ಅಂದು ಪಕ್ಷವನ್ನೇ ಬುಡಮೇಲು ಮಾಡಿತ್ತು. ಆಗಿನ ಪಿಸಿಸಿ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಹಠಕ್ಕೆ ಕಟ್ಟುಬಿದ್ದ ದಿಲ್ಲಿ ನಾಯಕರು, ಕ್ಯಾಪ್ಟನ್‌ರನ್ನು 2021ರ ಸೆಪ್ಟೆಂಬರ್ ತಿಂಗಳಲ್ಲಿ ಸಿಎಂ ಸ್ಥಾನದಿಂದ ಕೆಳಗಿಳಿಸಿ, ಸಿಧು ಆಪ್ತ, ದಲಿತ ಮುಖಂಡ ಚರಣ್‌ಜಿತ್ ಸಿಂಗ್ ಚನ್ನಿಯವರನ್ನು ಕೊನೆಯ ಆರೆಂಟು ತಿಂಗಳುಗಳಿಗೆ ಮುಖ್ಯಮಂತ್ರಿಯನ್ನಾಗಿ ನೇಮಕ ಮಾಡಿದರು. 'ಬರಲಿರುವ ವಿಧಾನಸಭೆ ಚುನಾವಣೆ ಗೆದ್ದು ಪೂರ್ಣಾವಧಿಗೆ ನಾನೇ ಸಿಎಂ ಆಗುತ್ತೇನೆ' ಎಂಬುದು ಸಿಧು ಮಹತ್ವಾಕಾಂಕ್ಷೆಯಾಗಿತ್ತು. ಆದರೆ, ಆಗಿದ್ದೇನು? ಕ್ಯಾಪ್ಟನ್ ಅಮರಿಂದರ್ ಪಕ್ಷ ಬಿಟ್ಟು, ತಮ್ಮದೇ ಸ್ವಂತ ಪಕ್ಷ ಸ್ಥಾಪಿಸಿ ಪರೋಕ್ಷವಾಗಿ ಬಿಜೆಪಿ ಜತೆ ಕೈಜೋಡಿಸಿದರು. ದಶಕಗಳ ಕಾಲದ ಸೋನಿಯಾ ಗಾಂಧಿ ಜತೆಗಿನ ಒಡನಾಟವೂ ಅಲ್ಲಿಗೆ ಅಂತ್ಯಗೊಂಡಿತ್ತು. ನವಜೋತ್ ಸಿಧು ಕೂಡ ಅಮೃತಸರ ಪೂರ್ವ ಕ್ಷೇತ್ರದಲ್ಲೇ ಸೋತು ಮನೆ ಸೇರಿದರು. ಆಮ್ ಆದ್ಮಿ ಪಕ್ಷ ಅಭೂತಪೂರ್ವ ಗೆಲುವು ಸಾಧಿಸಿ, ಕಾಂಗ್ರೆಸ್‌ಗೆ ಮಣ್ಣುಮುಕ್ಕಿಸಿತು. ಪಂಜಾಬ್ ಕಾಂಗ್ರೆಸ್‌ನ ಹಿಂದೂ ನಾಯಕ ಎಂದು ಗುರುತಿಸಿಕೊಂಡಿದ್ದ ಸುನೀಲ್ ಜಾಖಡ್ ಕೂಡ ಬಿಜೆಪಿಗೆ ಸೇರ್ಪಡೆಯಾದರು.

ಛತ್ತೀಸ್‌ಗಢದಲ್ಲೂ ಇದೇ ರೀತಿ ನಾಯಕತ್ವದ ಬಿಕ್ಕಟ್ಟು ತಾರಕಕ್ಕೇರಿತ್ತು. 2018ರಲ್ಲಿ ಛತ್ತೀಸ್‌ಗಢ ಸಿಎಂ ಸ್ಥಾನಕ್ಕೆ ಭೂಪೇಶ್ ಬಘೇಲ್‌ರನ್ನು ಆಯ್ಕೆ ಮಾಡುವ ಹೈಕಮಾಂಡ್ ತೀರ್ಮಾನ ರಾಜ್ಯಾಧ್ಯಕ್ಷ ತ್ರಿಭುವನೇಶ್ವರ ಶರಣ್‌ಸಿಂಗ್ ದೇವ್‌ಗೆ (ಟಿ.ಎಸ್.ಸಿಂಗ್ ದೇವ್) ಒಪ್ಪಿಗೆಯಾಗಿರಲಿಲ್ಲ. ಇದರಿಂದಾಗಿ, ಅಧಿಕಾರ ಹಂಚಿಕೆ ಸೂತ್ರ ಹೆಣೆದಿದ್ದ ಹೈಕಮಾಂಡ್, ಎರಡೂವರೆ ವರ್ಷಗಳ ಬಳಿಕ ಟಿ.ಎಸ್. ಸಿಂಗ್ ದೇವ್‌ಗೆ ಸಿಎಂ ಸ್ಥಾನ ನೀಡುವುದಾಗಿ ಹೇಳಿತ್ತು. ಆದರೆ, ಸಿದ್ದರಾಮಯ್ಯರಂತೆ ಅಧಿಕಾರ ಬಿಡಲು ಒಲ್ಲದ ಭೂಪೇಶ್ ಬಘೇಲ್, ಪೂರ್ಣಾವಧಿಗೆ ಸಿಎಂ ಸ್ಥಾನದಲ್ಲಿ ಮುಂದುವರಿದರು. ಟಿ.ಎಸ್. ಸಿಂಗ್ ಬಂಡಾಯವು 2023ರ ವಿಧಾನಸಭೆ ಚುನಾವಣೆಗೆ ಹಾನಿ ಮಾಡಲಿದೆ ಎಂಬುದನ್ನರಿತ ದಿಲ್ಲಿ ನಾಯಕರು, ಚುನಾವಣೆಗೆ 6 ತಿಂಗಳು ಬಾಕಿ ಇರುವಾಗ ಅವರನ್ನು ರಾಜ್ಯದ ಡಿಸಿಎಂ ಆಗಿ ನೇಮಿಸಿದರು. ಡಿಸಿಎಂ ಹುದ್ದೆಯನ್ನು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡಿದ್ದ ದೇವ್‌ಗೆ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎನ್ನುವ ನಂಬಿಕೆಯೂ ಇರಲಿಲ್ಲ. ಅವರಿಬ್ಬರ ಅಧಿಕಾರ ಸಂಘರ್ಷ 2023ರಲ್ಲಿ ಬಿಜೆಪಿಯ ಗೆಲುವಿಗೆ ನಾಂದಿಹಾಡಿತು.

ರಾಜಸ್ಥಾನದಲ್ಲೂ ಇಂಥದ್ದೇ ಘಟನಾವಳಿಗಳು ನಡೆದಿದ್ದವು. ಸಿಎಂ ಸ್ಥಾನಕ್ಕಾಗಿ ಅಶೋಕ್ ಗೆಹ್ಲೋಟ್ ಮತ್ತು ಮಾಜಿ ಪಿಸಿಸಿ ಅಧ್ಯಕ್ಷ ಸಚಿನ್ ಪೈಲಟ್ ಮಧ್ಯೆ ನಿತ್ಯವೂ ಕಾದಾಟ ನಡೆಯುತ್ತಿತ್ತು. ಗೆಹ್ಲೋಟ್ ಹಠ ಬಿಡದ ಕಾರಣ ಸಚಿನ್ ಪೈಲಟ್ ಕಾಂಗ್ರೆಸ್ ಸರಕಾರದ ವಿರುದ್ಧವೇ ಪ್ರತಿಭಟನೆಗಳನ್ನು ಮಾಡುತ್ತಾ ಮುಜುಗರ ತರುತ್ತಿದ್ದರು. ದಿಲ್ಲಿ ದೊರೆಗಳು ಉಭಯ ಸಂಕಟದಲ್ಲಿ ಸಿಲುಕಿದರೂ, ಗೆಹ್ಲೋಟ್ ಪ್ರಭಾವಳಿ ಮುಂದೆ ದುರ್ಬಲ ಹೈಕಮಾಂಡ್‌ಗೆ ಏನೂ ಮಾಡಲಾಗಲಿಲ್ಲ. ಪರಿಣಾಮ- ರಾಜಸ್ಥಾನದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೇರಿತು.

ಈಗ ಕರ್ನಾಟಕದಲ್ಲಿ ನಾಯಕತ್ವದ ಬಗ್ಗೆ ಸಿದ್ದರಾಮಯ್ಯರ ಖಚಿತ ನಿಲುವು ಡಿಕೆಶಿ ಮತ್ತವರ ಬೆಂಬಲಿಗರ ನಿದ್ದೆಗೆಡಿಸಿರುವುದಂತೂ ಹೌದು. ಒಕ್ಕಲಿಗ ಸ್ವಾಮೀಜಿಗಳು, ಲಿಂಗಾಯತ ಸಮುದಾಯದ ರಂಭಾಪುರಿ ಶ್ರೀಗಳು ಸೇರಿ ಅನೇಕರು ಡಿಕೆಶಿ ಸಿಎಂ ಆಗಬೇಕು ಎನ್ನುತ್ತಿದ್ದಾರೆ. ಮುಂದಿನ ಅವಧಿಗೂ ನಾನೇ ಸಿಎಂ ಎಂಬ ಸಿದ್ದರಾಮಯ್ಯರ ಮಾತುಗಳಿಗೆ ಡಿಕೆಶಿ ಸುಮ್ಮನಿದ್ದರೂ, ಸೋದರ ಡಿ.ಕೆ. ಸುರೇಶ್ ಮತ್ತವರ ಬೆಂಬಲಿಗರು ಮತ್ತೆಷ್ಟು ದಿನ ಸುಮ್ಮನಿರುತ್ತಾರೆ? ಅವರ ದಾಳಗಳೇನಿರಬಹುದು? ಎನ್ನುವುದಕ್ಕೆ ಕಾಲವೇ ಉತ್ತರಿಸಲಿದೆ.

(ಲೇಖಕರು ಹಿರಿಯ ಪತ್ರಕರ್ತರು)

ಭಟ್ಟರ್ ಸ್ಕಾಚ್

- **ಟಿ.ಕೆ.ಬಿಂದುಮಾಧವಾಚಾರ್, ತ್ಯಾಗರಾಜನಗರ**
ಭಟ್ರೇ, ನೀವು ಹೇಳಿದಂತೆ ಉತ್ತರಾದಿಮಠ-ರಾಯರ ಮಠದ ಸಂಧಾನ ಮುರಿದುಬಿತ್ತು. ನಿಮಗೆ ಭವಿಷ್ಯ ನುಡಿದು ಗೊತ್ತಾ?
- **ಅಂಗೈ ಹುಣ್ಣಿಗೆ ಕನ್ನಡಿ ಬೇಕಾ ಆಚಾರ್ರೇ? ಸುಳ್ಳು ಸುಬ್ಬಣ್ಣ ಎಂಟ್ರಿ ಕೊಟ್ಟಾಗಲೇ ಗೊತ್ತಿತ್ತು ಸಂಧಾನದ ಹಣೆಬರಹ!**

- **ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು**
ಮೊಯಿಲಿ ನಿಮ್ಮ ವಿರುದ್ಧ ಮಾನ ನಷ್ಟ ಮೊಕದ್ದಮೆ ಹೂಡಿದರೆ?
- **ವಿಷಯ ಅದಲ್ಲ, ಮೊಯಿಲಿ ಮಹಾಕಾವ್ಯಗಳನ್ನು ಓದಬೇಕಾದ ನ್ಯಾಯಾಧೀಶರ ಗತಿ?**

- **ರಾಜಣ್ಣ, ಶಿವಮೊಗ್ಗ**
ಭಟ್ರೇ, ಕೆಲವರಿಗೆ ಇದ್ದಕ್ಕಿದ್ದ ಹಾಗೆ ಗ್ರಹಣ ಹಿಡಿಯುತ್ತದಲ್ಲ?
- **ನೀನು ಈಶ್ವರಪ್ಪನವರ ಬಗ್ಗೆ ಹೇಳ್ತಾ ಇಲ್ಲ ತಾನೇ?!**

- **ನರಹರಿ ಕಶ್ಯಪ, ಕತ್ತರಿಗುಪ್ಪೆ**
ಭಟ್ರೇ, ಸಮಯ ಗಾಳಿಯಲ್ಲಿ ಹಾರಿಹೋಯ್ತು ಅಂತಾರಲ್ಲ?
- **ಯಾರಾದರೂ ವಾಚನ್ನು ಬಿಸಾಡಿದಾಗ ಹಾಗೆ ಹೇಳಬಹುದು!**

- **ಹರಿ, ಮೈಸೂರು**
ಭಟ್ರೇ, ಪ್ರತಿ ಸಲ ಆಕೆಗೆ ಫೋನ್ ಮಾಡಿದಾಗ, 'ನೀವು ಸಂಪರ್ಕಿಸಿದ ಚಂದಾದಾರರು ಕೋತಿ ಇದ್ದಾರೆ' ಅಂತ ಬರುತ್ತದಲ್ಲ?
- **ನೀನು ನಿಮ್ಮೂರ ಝೂಗೆ ಫೋನ್ ಮಾಡುತ್ತಿರಬೇಕು!**

- **ಜಯಂತ ದೀಕ್ಷಿತ, ಬೆಳಗಾವಿ**
ಭಟ್ರೇ, ಕೆಲವು ಸಂದರ್ಭದಲ್ಲಿ ಮಾತ್ರ ನಾವು ಗೆಲ್ಲುತ್ತೇವೆ, ಉಳಿದ ಸಮಯದಲ್ಲಿ?
- **ಪಾಠ ಕಲಿಯುತ್ತೇವೆ!**

- **ಯಮುನಾ ಶ್ರೀನಾಥ, ಬೆಂಗಳೂರು**
ಭಟ್ರೇ, ಮಾತುಮಾತಿಗೆ, 'ಹತ್ತು ವರ್ಷಗಳ ಹಿಂದಿನ ತನಕ ನನ್ನ ಜೀವನ ಎಷ್ಟು ಚೆನ್ನಾಗಿತ್ತು' ಅಂತಾಳಲ್ಲ?
- **ನಂತರ ಫೇಸ್‌ಬುಕ್ ಅಕೌಂಟ್ ಓಪನ್ ಮಾಡಿಕೊಂಡಿರಬೇಕು!**

- **ಕೆ. ನಾಣಿ, ಮದ್ದೂರು**
ಭಟ್ರೇ, ನಿನ್ನ ಕನಸು ನಿನ್ನ ಭವಿಷ್ಯವನ್ನು ರೂಪಿಸುತ್ತದೆ ಎಂದು ಹೇಳುತ್ತಾರಲ್ಲ?
- **ಹಾಗಾದ್ರೆ ಮೊದಲು ಮುಚ್ಕೊಂಡು ಮಲಗು!**

- **ವಿ.ಆರ್.ಬಾಲು, ಚಾಮರಾಜಪೇಟೆ**
ಭಟ್ರೇ, ದಂತವೈದ್ಯರ ಅನೆಸ್ತೀಶಿಯಾ ಪರಿಣಾಮ ಬೇಗ ಇಳಿಯುವುದಿಲ್ಲವಲ್ಲ?
- **ಬಿಲ್ ಪಾವತಿಸುವ ತನಕವಾದರೂ ಪರಿಣಾಮ ಇರಬೇಡವೇ?!**

- **ವಿನಯ್ ಹೆಗಡೆ, ಶಿರಸಿ**
ಭಟ್ರೇ, ಹೆಂಡತಿ ಜತೆ ಹೊರಗೆ ಹೋಗೋಣ ಅಂದ್ರೆ, ಲೇಟ್ ಮಾಡ್ತಾಳಲ್ಲ?
- **ಸದ್ಯ ಪಕ್ಕದ ಕೋಣೆಗೆ ಹೋಗೋಣ ಅಂದಾಗ ಮೇಕಪ್ ಹಚ್ಚಿ ಬರಲಾ ಅಂತ ಕೇಳಲಿಲ್ಲವಲ್ಲ!?**

ತೃಪ್ತಿ ಎಂಬುದು ಸಹಜ ಶ್ರೀಮಂತಿಕೆ

ನಮ್ಮಲ್ಲಿರುವ ಹಣವನ್ನಾಗಲಿ, ಆಸ್ತಿಯನ್ನಾಗಲಿ ಅನುಭವಿಸಬೇಕು. ಇಲ್ಲವಾದರೆ ಅದು ಚಿತ್ರದಲ್ಲಿರುವ ಜಿಲೇಬಿಗೆ ಸಮ. ಆದರೂ ಕೆಲವರು ಅದರಲ್ಲೇ ಖುಷಿಪಡುತ್ತಾರೆ. ಚಿತ್ರದಲ್ಲಿ ನೂರು ಜಿಲೇಬಿ ಇದ್ದರೂ, ಏಕಾಲದಲ್ಲಿ ನೂರು ಜಿಲೇಬಿ ತಿನ್ನುವವರು ನೂರಕ್ಕೆ ಒಬ್ಬರೂ ಸಿಗಲಾರರು. ಹಾಗಂತ ಒಮ್ಮೆ ಮಾಡಿದ ಜಿಲೇಬಿಯನ್ನು ನೂರುದಿನ ಇಟ್ಟುಕೊಂಡು ತಿನ್ನಲೂ ಆಗುವುದಿಲ್ಲ.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಗ್ರೀಕ್ ತತ್ತ್ವಜ್ಞಾನಿ ಎಪಿಕ್ಯೂರಸ್ ಹೇಳಿದ ಮಾತಿದು: ''ನಿಮ್ಮಲ್ಲಿ ಇಲ್ಲದಿರುವುದಕ್ಕೆ ಆಸೆಪಟ್ಟು ಇರುವುದನ್ನು ಹಾಳುಮಾಡಿಕೊಳ್ಳಬೇಡಿ. ಈಗ ನಿಮ್ಮ ಬಳಿ ಇರುವುದು ಒಂದು ಕಾಲದಲ್ಲಿ ನೀವು ಬಯಸಿದ್ದು ಎಂಬುದು ನೆನಪಿರಲಿ''.

ಜೀವನದಲ್ಲಿ ನೆಮ್ಮದಿಯಿಂದ ಬದುಕಲು ನಮಗೆ ಬೇಕಾಗಿರುವ ವಸ್ತುಗಳು ಕೆಲವೇ ಕೆಲವು. ನಾವು ಅನೇಕ ಭೌತಿಕ ವಸ್ತುಗಳನ್ನು ಕಂಡು ಅದರೆಡೆಗೆ ಆಕರ್ಷಿತರಾಗುತ್ತೇವೆ. ನಮ್ಮ ಇಂದ್ರಿಯಗಳು ಬೇಡವೆಂದರೂ ನಮ್ಮನ್ನು ಆ ಕಡೆ ಎಳೆದುಕೊಂಡು ಹೋಗುತ್ತವೆ. ನಾವೂ ಅಷ್ಟೇ, ನಮಗೆ ಅದರ ಅವಶ್ಯಕತೆ ಇದೆಯೇ, ಇಲ್ಲವೇ ಎಂದು ಆಲೋಚಿಸದೆ ಅದನ್ನು ಪಡೆಯುವುದಕ್ಕೆ ಆಸೆಪಟ್ಟು, ಅದರ ಬೆನ್ನು ಹತ್ತಿ ಹೋಗುತ್ತೇವೆ. ಒಮ್ಮೆ ಯೋಚಿಸಿ, ನಾವು ಜೀವಮಾನದಲ್ಲಿ ಕಾಣದ, ಕೇಳದ ಅದೆಷ್ಟೋ ವಿಷಯಗಳಿವೆ. ಅದು ನಮಗೆ ದೊರೆತರೆ ನಮ್ಮ ಬದುಕು ಇನ್ನಷ್ಟು ಸುಲಭವೂ, ಹಸನೂ ಆಗಬಹುದು. ಆದರೆ ಅದರ ಕುರಿತಾಗಿ ನಮಗೆ ತಿಳಿದಿರುವುದಿಲ್ಲವಾದ್ದರಿಂದ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಅದು ನಮಗೆ ಬೇಕು ಎಂದು ಅನಿಸುವುದೂ ಇಲ್ಲ. ಉದಾಹರಣೆಗೆ, ಆಧುನಿಕವಾಗಿ ಮುಂದುವರಿದ ನಗರಗಳ ವಿಷಯ ಕೇಳರಿಯದ ಹಳ್ಳಿಗಾಡಿನ ವ್ಯಕ್ತಿ ಆಧುನಿಕತೆಯ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಒಂದು ಔನ್ಸ್‌ಗೆ 13 ಲಕ್ಷ ಡಾಲರ್ ಬೆಲೆ ಬಾಳುವ ಶುಮುಖ್ ಪರ್ಫ್ಯೂಮ್, 3 ಕೋಟಿ ಡಾಲರ್ ಬೆಲೆಯ ಫಾಟೆಕ್ ಫಿಲಿಪ್ ವಾಚು, ಬುಗಾಟಿ, ಲ್ಯಾಂಬರ್ಗಿನಿ ಅಥವಾ ಜಾಗ್ವಾರ್ ಕಾರು ಮುಂತಾದವುಗಳ ಅರಿವು ಇರುವುದಿಲ್ಲವಾದ್ದರಿಂದ ಅವೆಲ್ಲ ಆತನಿಗೆ ಬೇಕು ಎಂದೆನಿಸುವುದಿಲ್ಲ. ಅಂದರೆ, ಯಾವುದರ ಕುರಿತು ನಮಗೆ ಅರಿವಿಲ್ಲವೋ ಅದರ ಕುರಿತು ನಮ್ಮ ಮನಸ್ಸು ಯೋಚಿಸುವುದಿಲ್ಲ.

ಎಷ್ಟೋ ಬಾರಿ ನಾವು ನೋಡಿದ್ದು, ಕೇಳಿದ್ದು ಎಲ್ಲವೂ ಬೇಕು ಎಂದೂ ಅನಿಸುವುದಿಲ್ಲ. ಸಾಕ್ರೆಟಿಸ್‌ನ ಒಂದು ಮಾತಿದು: ''ನಾವು ಪೇಟೆಗೆ ಹೋದಾಗ ನಮಗೆ ಬೇಡವಾದ ಎಷ್ಟೊಂದು ವಸ್ತುಗಳು ಇಲ್ಲಿವೆ ಎಂದು ತಿಳಿಯುತ್ತದೆ''. ಕೆಲವೊಮ್ಮೆ ನಮಗೆ ಅವಶ್ಯವಿರುವ ಒಂದು ವಸ್ತುವಿನ ಜತೆಗೆ 10 ಅನವಶ್ಯಕ ವಸ್ತುವನ್ನು ಕೊಳ್ಳುವುದೂ ಇರುತ್ತದೆ. ಈಗ ಅವಶ್ಯವಿಲ್ಲವಾದರೆ ಏನಂತೆ, ಮುಂದೊಂದು ದಿನ ನಮಗೆ ಇದರ ಅವಶ್ಯಕತೆ ಬರಬಹುದು ಎಂಬ ಭವಿಷ್ಯದ ಚಿಂತನೆಯಲ್ಲೂ ಕೆಲವು ವಸ್ತುಗಳು ನಮ್ಮ ಮನೆಯೊಳಗೆ ಸೇರಿಕೊಳ್ಳುತ್ತವೆ. ಕೆಲವೊಮ್ಮೆ ಇನ್ನೊಬ್ಬರ ಮನೆಯಲ್ಲಿ ಅಥವಾ ಇನ್ನೊಬ್ಬರ ಬಳಿ ಕಂಡ ವಸ್ತು ನಮ್ಮ ಕೈಗೆ ಎಟುಕುವಂತಿದ್ದರೆ ನಮ್ಮ ಬಳಿಯೂ ಇರಲಿ ಎಂದು ಖರೀದಿಸುತ್ತೇವೆ. ಬೇಕಾದರೆ ಈಗಲೂ ನಿಮ್ಮ ಮನೆಯಲ್ಲಿ ಒಮ್ಮೆ ನೋಡಿ, ವರ್ಷಾನುಗಟ್ಟಲೆ ಉಪಯೋಗಿಸದ ಎಷ್ಟೋ ಪಾತ್ರೆ, ಬಟ್ಟೆ, ಆಟಿಕೆ, ಮನೆಬಳಕೆಯ, ಬಳಸದ ವಸ್ತುಗಳು ಸಿಗುತ್ತವೆ. ಇವೆಲ್ಲ ನಮ್ಮ ಉಪಯೋಗಕ್ಕೆ ಬಾರದ ವಸ್ತುಗಳು ಎಂದು ಅರಿವಾಗಲು ಬುದ್ಧಿವಂತರಿಗೆ ಸ್ವಲ್ಪ ಕಾಲ ಬೇಕಾಗುತ್ತದೆ. ಇನ್ನು ಕೆಲವರಿಗೆ ಬುದ್ಧಿ ನಶಿಸಿಹೋದರೂ ಅರಿವಿಗೆ ಬರುವುದಿಲ್ಲ.

ಹಣ ಅಥವಾ ಆಸ್ತಿಯ ವಿಷಯದಲ್ಲೂ ಹಾಗೆಯೇ. ಉಪಯೋಗಿಸಲಾಗದ ಹೆಚ್ಚಿನ ಆಸ್ತಿ ಎಂದರೆ, ಒಂದು ಅಟ್ಲಾಸ್ ನಕಾಶೆಯನ್ನಿಟ್ಟುಕೊಂಡು ಅದರೊಳಗಿನ ದೇಶವನ್ನೋ, ರಾಜ್ಯವನ್ನೋ ಅಥವಾ ಭೂಮಿಯ ಒಂದು ತುಂಡನ್ನೋ ತನ್ನದು ಎಂದು ತಿಳಿದುಕೊಂಡಂತೆ. ಅಸಲಿಗೆ ಖರೀದಿಸಿದ್ದು ನಕಾಶೆಯನ್ನೇ ಹೊರತು ಭೂಮಿಯನ್ನಲ್ಲ. ಭೂಮಿ ಖರೀದಿಸಿದ ಕರಾರುಪತ್ರದಲ್ಲಿ ನಕಾಶೆ ಇದ್ದರೆ ಪ್ರಯೋಜನವೇ ಹೊರತು ಅಟ್ಲಾಸ್ ಪುಸ್ತಕದಲ್ಲಿ ನಕಾಶೆ ಇದ್ದರೆ ಸ್ವಂತಕ್ಕೆ ಯಾವ ಲಾಭವೂ ಇಲ್ಲ. ಅಟ್ಲಾಸ್ ನಕಾಶೆಯಲ್ಲಿರುವ ವಸ್ತುಗಳು ನಿಜವಾದ ವಸ್ತುಗಳಲ್ಲ. ಅಲ್ಲಿ ಯಾವುದೇ ವರ್ಣನೆ ಇದ್ದರೂ ಅದು ನಿಜ ವರ್ಣನೆಯಲ್ಲ. ಕಾಗದದ ಮೇಲಿನ ಆಸ್ತಿಯೂ ಹಾಗೆಯೇ. ಎಷ್ಟೇ ವಿಸ್ತಾರವಾಗಿ ವಿವರಿಸಿದ್ದರೂ, ಎಷ್ಟೇ ರಂಜನೀಯವಾಗಿ ಚಿತ್ರಿಸಿದ್ದರೂ, ಅದನ್ನು ಅನುಭವಿಸದಿದ್ದರೆ ಯಾವ ಪ್ರಯೋಜನವೂ ಇಲ್ಲ. ನಮ್ಮ ಬಳಿ ನೂರು ಗುಲಾಬ್ ಜಾಮೂನ್, ಜಿಲೇಬಿ ಇದೆಯೆಂದು ಊಹಿಸಿಕೊಂಡರೆ ಅಥವಾ ಚಿತ್ರ ನೋಡಿದರೆ ಅದನ್ನು ತಿಂದಂತಾಗುತ್ತದೆಯೇ? ಚಿತ್ರದಲ್ಲಿರುವ ಜಾಮೂನು ಸಿಹಿಯೋ, ಕಹಿಯೋ, ಹಳಸಿದೆಯೋ ತಿಳಿಯುವುದು ಹೇಗೆ? ಸಿಹಿಯಾಗಿದೆ ಎಂದೇ ಇಟ್ಟುಕೊಳ್ಳೋಣ, ಎಷ್ಟು ಸಿಹಿಯಾಗಿದೆ ಎಂದು ಗೊತ್ತಾಗುವುದು ಹೇಗೆ? ಅದರ ಆನಂದ ಅನುಭವಿಸಬೇಕು ಎಂದರೆ ಅದನ್ನು ತಿನ್ನಬೇಕು. ಹಾಗೆಯೇ ನಮ್ಮಲ್ಲಿರುವ ಹಣವನ್ನಾಗಲಿ, ಆಸ್ತಿಯನ್ನಾಗಲಿ ಅನುಭವಿಸಬೇಕು. ಇಲ್ಲವಾದರೆ ಅದು ಚಿತ್ರದಲ್ಲಿರುವ ಜಿಲೇಬಿಗೆ ಸಮ. ಆದರೂ ಕೆಲವರು ಅದರಲ್ಲೇ ಖುಷಿಪಡುತ್ತಾರೆ. ಇನ್ನೊಂದು ವಿಷಯ, ಚಿತ್ರದಲ್ಲಿ ನೂರು ಜಿಲೇಬಿ ಇದ್ದರೂ, ಏಕಕಾಲದಲ್ಲಿ ನೂರು ಜಿಲೇಬಿ ತಿನ್ನುವವರು ನೂರಕ್ಕೆ ಒಬ್ಬರೂ ಸಿಗಲಾರರು. ಹಾಗಂತ ಒಮ್ಮೆ ಮಾಡಿದ ಜಿಲೇಬಿಯನ್ನು ನೂರುದಿನ ಇಟ್ಟುಕೊಂಡು ತಿನ್ನಲೂ ಆಗುವುದಿಲ್ಲ. ತಾಜಾ ಆಗಿದ್ದಾಗ ಮಾತ್ರ ತಿಂಡಿ ರುಚಿ. ತಾಜಾ ಇದೆ ಎಂದು ಹೊಟ್ಟೆಬಿರಿಯ ತಿನ್ನಲೂ ಆಗುವುದಿಲ್ಲ. ಯಾವುದೇ ಆದರೂ ಮಿತಿಯಲ್ಲಿದ್ದರೆ ಮಾತ್ರ ಹಿತ. ಆದರೂ ನಾವು ಹೆಚ್ಚು ಹೆಚ್ಚು ಒಟ್ಟುಹಾಕುವುದರಲ್ಲೇ ತಲ್ಲೀನರಾಗಿರುತ್ತೇವೆ. ಯಾಕೆ, ನಮ್ಮ ಶಾಲಾದಿನಗಳನ್ನೇ ನೆನಪಿಸಿಕೊಳ್ಳಿ, ನಮಗೆ ಅವಶ್ಯಕತೆ ಇರುತ್ತಿದ್ದುದು ಒಂದು ಪೆನ್, ಒಂದು ಪೆನ್ಸಿಲ್. ಎಲ್ಲಾದರೂ ಒಂದು ಕೈಕೊಟ್ಟರೆ ಇರಲಿ ಎಂದು ಇನ್ನೊಂದು ಜೊತೆ. ಆದರೂ ಪಕ್ಕದಲ್ಲಿ ಕುಳಿತವನ ಬಾಕ್ಸ್‌ನಲ್ಲಿ ನನಗಿಂತ ಹೆಚ್ಚಿದೆ ಎಂಬ ಕಾರಣಕ್ಕೋ, ಚೆಂದದ, ಬೇರೆ ಬೇರೆ ನಮೂನೆಯದ್ದು ನನ್ನ ಬಳಿಯೂ ಇರಲಿ ಎಂಬ ಕಾರಣಕ್ಕೋ ನಾವು ಪೆನ್, ಪೆನ್ಸಿಲ್ ಒಟ್ಟುಹಾಕುತ್ತಿದ್ದೆವಲ್ಲ! ನಮ್ಮ ಪೆಟ್ಟಿಗೆ, ಜೋಳಿಗೆ ತುಂಬಿಸಿಕೊಳ್ಳುತ್ತಿದ್ದೆವಲ್ಲ! ನಮ್ಮ ಧೋರಣೆ ಇಂದಿಗೂ ಬದಲಾಗಿಲ್ಲ, ಈಗಲೂ ಕಾರಣ ಅದೇ, ವಸ್ತು ಮಾತ್ರ ಬದಲಾಗಿದೆ. ಈಗ ನಾವು ದೊಡ್ಡವರಾಗಿದ್ದೇವೆ. ಪೆನ್, ಪೆನ್ಸಿಲ್, ಇರೇಸರ್‌ನ ಜಾಗವನ್ನು ಮನೆ, ಹಣ, ಕಾರು, ಆಸ್ತಿ ಆವರಿಸಿಕೊಂಡಿದೆ. ಅಗತ್ಯ ಇದೆಯೋ, ಇಲ್ಲವೋ; ಬೇಕು ಎಂದರೆ ಬೇಕು ಅಷ್ಟೇ!

ವಿಪರ್ಯಾಸವೆಂದರೆ, ಅವಶ್ಯಕತೆಗಿಂತ ಹೆಚ್ಚು ಗಳಿಸಿ ಪ್ರಯೋಜನವಿಲ್ಲ ಎಂದು ತಿಳಿದಿದ್ದರೂ, ಹೆಚ್ಚು ಗಳಿಸಬೇಕು ಎಂಬ ಮನೋಭಾವ ಜನರಲ್ಲಿ ಹೆಚ್ಚುತ್ತಿದೆ. ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು. ಹೆಚ್ಚು ಗಳಿಸಬೇಕು ಎಂದರೆ ಹೆಚ್ಚು ಶ್ರಮಪಡಬೇಕು, ಹೆಚ್ಚಿನ ಜವಾಬ್ದಾರಿ ಹೊರಬೇಕು, ಹೆಚ್ಚು ಸಂಘರ್ಷ ಎದುರಿಸಬೇಕು, ಹೆಚ್ಚು ರಿಸ್ಕ್ ತೆಗೆದುಕೊಳ್ಳಬೇಕು. ಕೆಲವೊಮ್ಮೆ ನಮಗೆ ಇಷ್ಟವಿಲ್ಲದಿದ್ದರೂ 'ಜೀ ಹುಜೂರ್' ಎನ್ನಬೇಕು. ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ, ಉದ್ಯಮಿಗಳಿಗೆ, ಸಹೋದ್ಯೋಗಿಗೆ, ಮೇಲಧಿಕಾರಿಗೆ, ಮನಸ್ಸಿದ್ದೋ, ಇಲ್ಲದೆಯೋ ಬೆಣ್ಣೆ ಸವರಬೇಕು. ಒಟ್ಟಾರೆ ಹೆಚ್ಚಿನ ಶಕ್ತಿ, ಸಮಯ ಎರಡನ್ನೂ ಅದಕ್ಕೆ ಮೀಸಲಿಡಬೇಕು. ಹೆಂಡತಿ-ಮಕ್ಕಳು, ಅಪ್ಪ-ಅಮ್ಮ, ಬಂಧು-ಬಾಂಧವರು, ಮಿತ್ರರಿಗಷ್ಟೇ ಅಲ್ಲ, ಕೆಲವೊಮ್ಮೆ ಸ್ವಂತಕ್ಕೂ ಸಮಯ ಕೊಡಲಾಗದೆ ಪರಿತಪಿಸಬೇಕು.

ಹೆಚ್ಚು ಹೆಚ್ಚು ಗಳಿಸಬೇಕು ಎಂದು ಸಾಗುವ ಮಾರ್ಗ ಕೊನೆ ಮುಟ್ಟುವಂಥದ್ದಲ್ಲ. ಆ ಮಾರ್ಗವೇನಿದ್ದರೂ ನಿತ್ಯ ನಿರಂತರವಾದದ್ದು. ಅದೊಂದು ರೀತಿಯಲ್ಲಿ ತೀರದ ಬಯಕೆ. ಇಂದು ಒಂದರ ಹಿಂದೆ ಓಡುವುದು, ಅದು ಸಿಕ್ಕಿದಾಕ್ಷಣ ಇನ್ನೊಂದರ ಹಿಂದೆ ಓಡುವುದು, ಅದೂ ದೊರೆತರೆ ಮತ್ತೊಂದರ ಬೆನ್ನು ಬೀಳುವುದು. ಅಂತೂ ಅದಕ್ಕೆ ನಿಲ್ದಾಣ ಎಂಬುದು ಇಲ್ಲವೇ ಇಲ್ಲ!

ಇನ್ನೊಬ್ಬರೊಂದಿಗೆ ನಮ್ಮನ್ನು ಹೋಲಿಸಿಕೊಳ್ಳುವುದಕ್ಕಿಂತ, 'ಅವರಿಗಿಂತ ನನ್ನಲ್ಲಿ ಕಡಿಮೆಯಿದೆ' ಎಂಬ ಕೀಳರಿಮೆಯಲ್ಲಿ ಬದುಕುವುದಕ್ಕಿಂತ ನಮ್ಮ ಸ್ಥಿತಿ ಹೇಗಿದೆ ಎಂದು ಅರಿತುಕೊಳ್ಳಬೇಕು. ನಮ್ಮ ಸ್ಥಿತಿ ಈಗ ನಾವಿರುವುದಕ್ಕಿಂತ ಇನ್ನೂ ಕೆಟ್ಟದ್ದಾಗಿರುತ್ತಿದ್ದರೆ ಹೇಗಿರುತ್ತಿತ್ತು ಎಂದು ಒಮ್ಮೆ ಯೋಚಿಸಿದರೆ ಸಾಕು, ನಾವೆಷ್ಟು ಸುಖವಾಗಿದ್ದೇವೆ ಎಂದು ಅರ್ಥವಾಗುತ್ತದೆ. ನಮ್ಮ ಸ್ಥಿತಿಯೇ ಅತ್ಯಂತ ಕೆಟ್ಟದ್ದು ಎಂದು ನಾವು ಅಂದುಕೊಂಡರೂ, ನಮಗಿಂತಲೂ ಕೆಟ್ಟ ಸ್ಥಿತಿಯಲ್ಲಿ ಇರುವವರು

ನಮಗೆ ಸಿಗುತ್ತಾರೆ. ಅವರಿಗಿಂತ ಸುಖವಾಗಿದ್ದೇವೆ ಎಂದು ನಾವು ಸಮಾಧಾನ ಪಟ್ಟುಕೊಳ್ಳಬಹುದಲ್ಲ! ನಮ್ಮಲ್ಲಿ ಈಗ ಇರುವುದನ್ನು ಅಥವಾ ನಾವು ಈಗಿರುವ ಸ್ಥಿತಿಯನ್ನು ಅರಿತುಕೊಳ್ಳದಿದ್ದರೆ, ಪ್ರಶಂಸಿಸಿಕೊಳ್ಳದಿದ್ದರೆ, ಈಗ ನಮ್ಮಲ್ಲಿ ಎಷ್ಟೇ ವಸ್ತು, ಆಸ್ತಿ, ಹಣವಿದ್ದರೂ ಯಾವುದೇ ಫಲವಿಲ್ಲ. ಅನುಭವಿಸದಿದ್ದರೆ ಅವೆಲ್ಲ ಇದ್ದೂ ಇಲ್ಲದಂತೆಯೇ.

ಇನ್ನೂ ಹೆಚ್ಚು ಹೆಚ್ಚು ಗಳಿಸಬೇಕು ಎನ್ನುವ ಭಾವ ಒಬ್ಬನಲ್ಲಿ ತುಂಬಿದೆ ಎಂದರೆ, ಅವನಲ್ಲಿ ಇನ್ನೂ ಶೂನ್ಯತೆ ಇದೆ, ಇನ್ನೂ ಖಾಲಿ ಬಿಟ್ಟ ಸ್ಥಳ ಇದೆ ಎಂದು ಅರ್ಥ. ಆ ಖಾಲಿ ಬಿಟ್ಟ ಸ್ಥಳವನ್ನು ತುಂಬಿಸುವ ಪ್ರಯತ್ನದಲ್ಲಿ ಆ ವ್ಯಕ್ತಿ ಹಣ, ಆಸ್ತಿಯ ಹಿಂದೆ ಹೋಗುತ್ತಾನೆ. ತಿಂಗಳ ಕೊನೆಗೋ, ವರ್ಷದ ಕೊನೆಗೋ, ಕಾಗದದ ಮೇಲೆ ಲಾಭಾಂಶ ಕಂಡಾಗ ಸಮಾಧಾನ ಪಟ್ಟುಕೊಳ್ಳುತ್ತಾನೆ. ಸುತ್ತಮುತ್ತಲಿನವರ ಹೊಗಳಿಕೆ ಅವನಲ್ಲಿರುವ ಶೂನ್ಯವನ್ನು ತುಂಬಿಸುತ್ತದೆ ಎಂದೇ ಇಟ್ಟುಕೊಳ್ಳೋಣ. ಇದರಿಂದ ಕೆಲವು ಕ್ಷಣವಾದರೂ ಸಂತಸದಿಂದ ಇರಲು ಪ್ರಯತ್ನಿಸುತ್ತಾನೆ. ಅದೇ ಒಬ್ಬ ವ್ಯಕ್ತಿ ಸಂತೃಪ್ತನಾಗಿದ್ದರೆ, ತನ್ನೊಳಗೆ ಸ್ನೇಹ, ಪ್ರೀತಿ, ಪ್ರೇಮ ತುಂಬಿಕೊಂಡು ನೆಮ್ಮದಿಯಿಂದ ಇದ್ದರೆ, ಅವನಲ್ಲಿ ಯಾವುದೇ ರೀತಿಯ ಶೂನ್ಯಭಾವ ಕಾಡುವುದಿಲ್ಲ. ಏಕೆಂದರೆ ಅವನ ಖಾಲಿಸ್ಥಳ ಪ್ರೀತಿಯಿಂದ ತುಂಬಿರುತ್ತದೆ. ಹಣದ ನೆಮ್ಮದಿ, ಆಸ್ತಿಯ ಸಂತೃಪ್ತಿಯನ್ನು ಗಳಿಸಬೇಕು ಎನ್ನುವ ಆಸೆಯ ಬೆನ್ನು ಹತ್ತಿ ಓಡುವುದನ್ನು ಆತ ನಿಲ್ಲಿಸುತ್ತಾನೆ. 'ನಿಜವಾಗಿ ಸಿರಿವಂತನೆಂದೆನಿಸಿಕೊಳ್ಳುವ ವ್ಯಕ್ತಿ ಸದಾ ಹಣದ ಬಗ್ಗೆಯೇ ಯೋಚಿಸಬಾರದು. ಅವನಲ್ಲಿ ಕೋಟಿಗಟ್ಟಲೆ ಹಣವಿದ್ದರೂ ಅವನು ಅದರಿಂದ ಸಂತುಷ್ಟನಾಗದಿದ್ದರೆ, ಸದಾ ಅದನ್ನು ಕಳೆದುಕೊಳ್ಳುವ ಭಯದಲ್ಲಿದ್ದರೆ ಅಥವಾ ಅದಕ್ಕೆ ಇನ್ನೂ ಹೆಚ್ಚು ಕೂಡಿಸಬೇಕು ಎಂದು ಯೋಚಿಸುತ್ತಿದ್ದರೆ, ಅದೆಷ್ಟೇ ಹಣವಿದ್ದರೂ ಆತ ಬಡವನೇ'. ಇದು ನನ್ನ ಮಾತಲ್ಲ, ಖ್ಯಾತ ಲೇಖಕ ದೀಪಕ್ ಚೋಪ್ರಾರದ್ದು.

ಆಸೆಯು ವ್ಯಕ್ತಿಯನ್ನು ಭಿಕ್ಷುಕನನ್ನಾಗಿಸುತ್ತದೆ. ಅವನು ಏನನ್ನೇ ಬೇಡಲಿ, ಯಾರನ್ನೇ ಬೇಡಲಿ, ಎಷ್ಟನ್ನೇ ಬೇಡಲಿ, ಬೇಡಿದ್ದಂತೂ ನಿಜ ತಾನೆ? ಆದ್ದರಿಂದ ಇನ್ನೂ ಬೇಕು ಎಂಬ ಬೇಡಿಕೆಯನ್ನು ಕಡಿಮೆ ಮಾಡಿ, ಇದ್ದುದರಲ್ಲೇ ಸಂತುಷ್ಟನಾಗಿರುವುದರಿಂದ, ಬದುಕನ್ನು ಬಂದಂತೆ ಸ್ವೀಕರಿಸುವುದರಿಂದ ಹೆಚ್ಚು ನೆಮ್ಮದಿಯಿಂದಲೂ, ಲವಲವಿಕೆಯಿಂದಲೂ ಇರಬಹುದು. ಬದುಕು ನಮಗೆ ಏನನ್ನು ಕೊಟ್ಟಿದೆಯೋ ಈಗ ನಮ್ಮ ಬಳಿ ಏನಿದೆಯೋ ಅದನ್ನು ಅನುಭವಿಸುವುದರಿಂದ, ನಮಗೆ ಪ್ರಿಯವಾದದ್ದನ್ನು ಮಾಡುವುದರಿಂದ ನಾವು ಹೆಚ್ಚು ಸಂತೃಪ್ತರಾಗಿರಬಹುದು.

ಶ್ರೀಮಂತಿಕೆ ಎಂಬುದು ನಾವು ಎಷ್ಟು ಹೊಂದಿದ್ದೇವೆ ಎಂಬುದಲ್ಲ, ಹೊಂದಿದ್ದನ್ನು ನಾವು ಎಷ್ಟು ಬಳಸುತ್ತಿದ್ದೇವೆ, ಅನುಭವಿಸುತ್ತಿದ್ದೇವೆ, ಆನಂದಿಸುತ್ತಿದ್ದೇವೆ ಎಂಬುದು. ಮೆತ್ತನೆಯ ಹಾಸು-ಹೊದಿಕೆ ಇದ್ದರೂ ನಿದ್ರೆಗಾಗಿ ಪರಿತಪಿಸುವವರು ಎಷ್ಟಿಲ್ಲ? ಹೊಟ್ಟೆ ಹಸಿದರೂ ಬೇಕಾದದ್ದನ್ನು ತಿನ್ನಲಾಗದೇ ಇರುವವರು ಎಷ್ಟಿಲ್ಲ? ಇದರರ್ಥ ನಾವು ದುಡಿಯಲೇಬಾರದು, ಕೂಡಿಸಿ ಇಡಲೇಬಾರದು ಎಂದು ಖಂಡಿತ ಅಲ್ಲ. ನಮಗೆ ಬೇಕಾದಷ್ಟನ್ನು ನಾವು (ನಾವೇ) ದುಡಿಯಬೇಕು, ಭವಿಷ್ಯಕ್ಕಾಗಿ ಒಂದಿಷ್ಟನ್ನು ಕೂಡಿ ಇಡಲೇಬೇಕು. ಊಟಕ್ಕೆ ಕುಳಿತಾಗ ಹೊಟ್ಟೆ ತುಂಬಿದ ನಂತರ ಸಾಕು ಎಂದು ಎದ್ದೇಳುತ್ತೇವೆ. ನಿದ್ರೆ ಮುಗಿದ ನಂತರ ಹಾಸಿಗೆಯಿಂದ ಎದ್ದು ಬರುತ್ತೇವೆ, ಆದರೆ ಹಣ ಮತ್ತು ಆಸ್ತಿಯ ವಿಷಯದಲ್ಲಿ ಸಾಕು ಎಂದು ಅನಿಸುವುದೇ ಇಲ್ಲ. ಅದಕ್ಕೂ ಒಂದು ಕಟ್ಟೆಯನ್ನು ನಾವೇ ಕಟ್ಟಿಕೊಳ್ಳಬೇಕು. ಅದು ಎಲ್ಲರಿಗೂ ಒಂದೇ ರೀತಿ ಆಗಿರಬೇಕೆಂದೇನೂ ಇಲ್ಲ, ಅವರವರಿಗೆ ತಕ್ಕಂತೆಯೇ ಇರಲಿ. ಆದರೆ ನಮಗೆ ನಾವೇ ಒಂದು ಪುಟ್ಟ ನಿರ್ಬಂಧ ಹೇರಿಕೊಳ್ಳಬೇಕು. ನಮ್ಮ ಬಳಿ ಇರುವುದನ್ನು ಆ ಕ್ಷಣದಲ್ಲಿ ಅನುಭವಿಸಬೇಕು. ಇಲ್ಲವಾದರೆ, 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ' ತುಡಿಯುವಂತಾಗುತ್ತದೆ.

ಕೊನೆಯದಾಗಿ ಸಾಕ್ರೆಟಿಸ್‌ನ ಒಂದು ಮಾತು ನೆನಪಿಗೆ ಬರುತ್ತಿದೆ- 'ತೃಪ್ತಿ' ಎಂಬುದು ಸಹಜ ಆಸ್ತಿ; 'ಭೋಗ' ಎಂಬುದು ಕೃತಕ ಬಡತನ!



ನಾರದ ಸಂಚಾರ
ಕಲಹಪ್ರಿಯ
naadigru@gmail.com

ಎಲ್ಲಾ ಗದ್ದುಗೆ ಮಹಿಮೆ!

ರಾಜಕೀಯ ಕ್ಷೇತ್ರ ನಿಜಕ್ಕೂ ಒಂಥರಾ ವಿಚಿತ್ರ ಕಣ್ರೀ. ಇಲ್ಲಿ ಅಧಿಕಾರದ ಗದ್ದುಗೆಯನ್ನು ಏರುವುದಕ್ಕೆ ಒಬ್ಬೊಬ್ಬರು ಒಂದೊಂದು ಮಾರ್ಗವನ್ನು ಆಯ್ದುಕೊಳ್ಳುವುದುಂಟು. Slow and steady wins the race ಎಂಬ ಜಾಣನುಡಿಯಂತೆ ಕೆಲವರು ಪಕ್ಷದ ಕಾರ್ಯಕರ್ತರ ಹಂತದಿಂದ ಶುರುಹಚ್ಚಿಕೊಂಡು, ಹಗಲು-ರಾತ್ರಿ ಎನ್ನದೆ ಪಕ್ಷಕ್ಕಾಗಿ ದುಡಿದು (ಕೆಲವೊಮ್ಮೆ ಎದುರಾಳಿ ಪಕ್ಷದ ಕಾರ್ಯಕರ್ತರೊಡನೆ ಹೊಡೆದಾಡಿ!), ಚುನಾವಣಾ ಸಮಯದಲ್ಲಿ ಸಿಕ್ಕ ಸಿಕ್ಕ ಗೋಡೆಗಳ ಮೇಲೆ ತಮ್ಮ ಪಕ್ಷದ ಅಭ್ಯರ್ಥಿಗಳ ಪೋಸ್ಟರ್‌ಗಳನ್ನು ಅಂಟಿಸಿ, ನಂತರ ಪಕ್ಷದಲ್ಲಿ ಯಾವುದಾದರೂ ಪದಾಧಿಕಾರಿಯ ಹುದ್ದೆಯನ್ನು ಗಿಟ್ಟಿಸಿಕೊಂಡು,

'ಒಂದು ಲೆವೆಲ್ಲಿನ ನಾಯಕ' ಎನಿಸಿಕೊಂಡು, ನಂತರ ಎಂಎಲ್‌ಎ ಅಥವಾ ಎಂಪಿ ಸ್ಥಾನಕ್ಕೆ ಸ್ಪರ್ಧಿಸುವುದುಂಟು. ಅದೃಷ್ಟ ನೆಟ್ಟಗಿದ್ದರೆ ಗೆಲ್ಲುವುದುಂಟು, 'ಮಂತ್ರಿ-ಮಹೋದಯ' ಎನಿಸಿಕೊಳ್ಳುವುದೂ ಉಂಟು!

ಇನ್ನು ಕೆಲವರು 'ಷಾರ್ಟ್-ಕಟ್' ಮಾದರಿಯನ್ನು ಅನುಸರಿಸುವುದಿದೆ. ಆಯಕಟ್ಟಿನ ಸ್ಥಾನದಲ್ಲಿರುವ ನಾಯಕರಿಗೆ 'ಬೇಕಾದವರು' ಎನಿಸಿಕೊಂಡು ಅಥವಾ ಹಣದ ಥೈಲಿ ಇರುವವರು ಎಂದು ಬಿಂಬಿಸಿಕೊಂಡು ಮಹತ್ವದ ಸ್ಥಾನಗಳನ್ನು ದಕ್ಕಿಸಿಕೊಳ್ಳುವುದಿದೆ. ಆದರೆ ಮಹಾರಾಷ್ಟ್ರದಿಂದ ಬಂದಿರುವ ಸುದ್ದಿಯೊಂದು ಇನ್ನೂ ವಿಚಿತ್ರವಾಗಿದೆ. ಅಧಿಕಾರವನ್ನು ಬೆನ್ನತ್ತುವ ಪರಿಪಾಠವು ವ್ಯಕ್ತಿಯೊಬ್ಬನನ್ನು ಹೇಗೆಲ್ಲಾ ಪ್ರಲೋಭಿಸುತ್ತದೆ, ಯಾವೆಲ್ಲಾ ವಿಚಿತ್ರವಾದ 'ಕತ್ತಲ ಹಾದಿ'ಗಳಲ್ಲಿ ಕರೆದೊಯ್ಯುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ. ಅಲ್ಲಿನ ರಾಯಗಢ ಜಿಲ್ಲೆಯ ಉಸ್ತುವಾರಿ ಸಚಿವರ ಹುದ್ದೆಯನ್ನು ದಕ್ಕಿಸಿಕೊಳ್ಳಲು ಶಿವಸೇನೆಯ (ಏಕನಾಥ್ ಶಿಂದೆ ಬಣದ) ಸಚಿವ ಭರತ್ ಗೋಗವಾಲೆ ಅವರು 'ಅಘೋರಿ ಆಚರಣೆಗಳಿಗೆ' ಮುಂದಾಗಿದ್ದಾರೆ ಎಂಬುದು ಈಗ ಕೇಳಿಬಂದಿರುವ ಆರೋಪ. ಮಹಾರಾಷ್ಟ್ರದಲ್ಲಿ ಅಸ್ತಿತ್ವದಲ್ಲಿರುವ 'ಮಹಾಯುತಿ' ಮೈತ್ರಿಕೂಟದ ಮಿತ್ರಪಕ್ಷ ಎನಿಸಿಕೊಂಡಿರುವ 'ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ'ಯ (ಎನ್‌ಸಿಪಿ) ವಕ್ತಾರರಾದ ಸೂರಜ್ ಚವಾಣ್ ಅವರು ಈ ಸಂಬಂಧವಾಗಿ ವಿಡಿಯೋ ವೊಂದನ್ನು ಹಂಚಿಕೊಂಡಿದ್ದಾರಂತೆ. ಸಚಿವ ಭರತ್ ಗೋಗವಾಲೆ ಅವರು ಅಘೋರಿ ಸಾಧುಗಳ ಜತೆಯಲ್ಲಿರುವುದನ್ನು ಈ ವಿಡಿಯೋ ಬಿಂಬಿಸುತ್ತಂತೆ. ಈ ಹುದ್ದೆಯನ್ನು ದಕ್ಕಿಸಿಕೊಳ್ಳಲೆಂದು ಶಿವಸೇನೆಯ ಗೋಗವಾಲೆ ಮತ್ತು ಎನ್‌ಸಿಪಿಯ ಅದಿತಿ ತಟ್ಕರೆ ಅವರ ನಡುವೆ ತೀವ್ರ ಪೈಪೋಟಿ ಇದೆ ಎಂಬುದೇ ಈ ಕಸರತ್ತಿಗೆ ಕಾರಣ ಎನ್ನಲಾಗುತ್ತಿದೆ.

ಈ ಮಧ್ಯೆ, ಶಿವಸೇನೆಯ ಉದ್ಧವ್ ಠಾಕ್ರೆ ಬಣದ ಭಾಸ್ಕರ್ ಜಾಧವ್ ಹಾಗೂ ಶಿಂದೆ ಬಣದ ರಾಮದಾಸ್ ಕದಮ್ ಕೂಡ, ಪರಸ್ಪರರ ಮೇಲೆ ಮಾಟಮಂತ್ರದ ಪ್ರಯೋಗಕ್ಕೆ ಮುಂದಾಗಿದ್ದಾರೆ ಎಂಬ ಮಾತುಗಳು ಕೇಳಿಬಂದಿವೆ. ಒಟ್ಟಿನಲ್ಲಿ, ಮುಂಬೈ ಮಹಾನಗರಿಯ ಮೇಲೆ ಸುಳಿದಾಡುತ್ತಿರುವ ಕರಾಳ ಮೋಡಗಳು, ಅಲ್ಲಿನ ನೇತಾರರ ಮೇಲೂ ಪರಿಣಾಮ ಬೀರುತ್ತಿವೆ ಎಂಬ 'ಭರತವಾಕ್ಯ'ವನ್ನು ನುಡಿಯಲು ಇದು ಸಕಾಲ ಎನ್ನಬಹುದು!

ನಾರಾಯಣ ನಾರಾಯಣ!

ತಮಿಳುನಾಡು, ಆಂಧ್ರಪ್ರದೇಶ ಮುಂತಾದ ಪಕ್ಕದ ರಾಜ್ಯಗಳಲ್ಲಿ ಠಳಾಯಿಸುತ್ತಿರುವ ಬೀದಿನಾಯಿಗಳು ಕರ್ನಾಟಕಕ್ಕೆ, ಅದರಲ್ಲೂ ನಿರ್ದಿಷ್ಟವಾಗಿ ಮಹಾನಗರಿ ಬೆಂಗಳೂರಿಗೆ ವಲಸೆ ಬರಲು ತೀರ್ಮಾನಿಸಿವೆಯಂತೆ. ಬೆಂಗಳೂರಿನ ಬೀದಿನಾಯಿಗಳಿಗೆ 'ಬಾಡೂಟದ ಭಾಗ್ಯ'ವನ್ನು ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ತವಕಿಸುತ್ತಿದೆ, ಇದಕ್ಕಾಗಿ ಟೆಂಡರ್ ಕರೆದಿದೆ ಎಂಬ ಸುದ್ದಿಯು ಅದು ಹೇಗೋ ಪಕ್ಕದ ರಾಜ್ಯಗಳ ಆ ಬೀದಿನಾಯಿಗಳ ಕಿವಿಗೆ ಅಪ್ಪಳಿಸಿಬಿಟ್ಟಿರುವುದೇ ಈ ತೀರ್ಮಾನಕ್ಕೆ ಕಾರಣವಂತೆ! ಜತೆಗೆ, ''ಬೀದಿನಾಯಿಗಳಿಗೆ ಹೀಗೆ ನಿತ್ಯವೂ ಮಾಂಸಾಹಾರವನ್ನು ನೀಡುವುದರಿಂದ ಅವು ಮತ್ತಷ್ಟು ಉಗ್ರವಾಗುವ ಸಾಧ್ಯತೆಯಿರುತ್ತದೆ; ಹೀಗಾಗಿ ಬಿಬಿಎಂಪಿ ಈ ನಿರ್ಧಾರದಿಂದ ಹಿಂದೆ ಸರಿಯಬೇಕು'' ಎಂದು ಆಗ್ರಹಿಸುತ್ತಿರುವವರ ವಿರುದ್ಧ ಪರರಾಜ್ಯದ ಆ ಬೀದಿನಾಯಿಗಳು ತಾವಿದ್ದ ಜಾಗದಿಂದಲೇ 'ಬೌ ಬೌ' ಎನ್ನುವ ಮೂಲಕ ಆಕ್ಷೇಪವನ್ನು ಎತ್ತಿವೆಯಂತೆ!

ಹೀಗಿತ್ತು ಎ.ಕೆ.ರಾಮಾನುಜನ್‌ರ ಸೌಹಾರ್ದಮಯ ಒಡನಾಟ

ವಿಶ್ವಮಾನ್ಯ ಕವಿ, ಪ್ರಾಧ್ಯಾಪಕ, ಚಿಂತಕ, ಭಾಷಾಂತರಕಾರ, ಭಾಷಾತಜ್ಞ ಹೀಗೆ ಬಹುಮುಖ ಪ್ರತಿಭೆಗಳ ಅನುಪಮ ಸಂಗಮ ಎನಿಸಿಕೊಂಡಿದ್ದ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಹತ್ವದ ಕೊಡುಗೆ ಕೊಟ್ಟಿದ್ದರ ಜತೆಗೆ 'ಕನ್ನಡ-ಕಸ್ತೂರಿ'ಯ ಕಂಪನ್ನು ಇಂಗ್ಲಿಷ್ ಭಾಷೆಯ ಮೂಲಕ ವಿಶ್ವದೆಲ್ಲೆಡೆ ಪಸರಿಸಿದ ಅತ್ತಿಪಟ್ ಕೃಷ್ಣಸ್ವಾಮಿ ರಾಮಾನುಜನ್ (ಎ.ಕೆ.ರಾಮಾನುಜನ್) ಅವರು ನಿಧನರಾಗಿದ್ದು 1993ರ ಜುಲೈ 13ರಂದು. ಅವರ ಸವಿನೆನಪಿಗಾಗಿ ಈ ಲೇಖನ.

ಸಂಸ್ಮರಣೆ
ಎಸ್.ಎಲ್.ಎಂ. ಪಾಟೀಲ
vveditoped@gmail.com

ಎ.ಕೆ.ರಾಮಾನುಜನ್ ಅವರು ಭಾರತದಲ್ಲಿದ್ದ ದಿನಗಳಲ್ಲಿ ಒಡನಾಡಿದ ಮುಖ್ಯವಾದ ನಗರಗಳೆಂದರೆ ಮೈಸೂರು, ಬೆಳಗಾವಿ ಮತ್ತು ಧಾರವಾಡ. ಮೈಸೂರಿನಲ್ಲಿ ಯು.ಆರ್.ಅನಂತಮೂರ್ತಿ, ಅಡಿಗರೊಂದಿಗೆ, ಬೆಳಗಾವಿಯಲ್ಲಿ ಸುಮತೀಂದ್ರ ನಾಡಿಗ, ಚಂದ್ರಶೇಖರ ಕಂಬಾರರೊಂದಿಗೆ, ಧಾರವಾಡದಲ್ಲಿ ಚೆನ್ನವೀರ ಕಣವಿ, ಕೀರ್ತಿನಾಥ ಕುರ್ತಕೋಟಿ, ಶಂಕರ ಮೊಖಾಶಿ ಪುಣೇಕರರೊಂದಿಗೆ ಅವರ ಒಡನಾಟವಿತ್ತು.

ಬೆಳಗಾವಿಯ ಲಿಂಗರಾಜ ಕಾಲೇಜಿಗೆ ಅವರು 1952ರಲ್ಲಿ ಕಿರಿಯ ಇಂಗ್ಲಿಷ್ ಉಪನ್ಯಾಸಕರೆಂದು ಬಂದರು. ಯಾವ ಊರಿನಲ್ಲೂ 2 ವರ್ಷಕ್ಕಿಂತ ಹೆಚ್ಚಿಗೆ ಇರಕೂಡದೆಂದು ತಾವೇ ವಿಧಿಸಿಕೊಂಡ ನಿಯಮ ಮೀರಿ, ಆರ್ಥಿಕ ಕಾರಣದಿಂದ ಅವರು 1957ರವರೆಗೂ ಬೆಳಗಾವಿಯಲ್ಲೇ ಇದ್ದರು. ಇದು ಅವರ ಜೀವನದಲ್ಲಿನ ಪ್ರಮುಖ ಕಾಲಘಟ್ಟವಾಗಿತ್ತು. ಆಗಿನ ಪ್ರಸಿದ್ಧ ಇಂಗ್ಲಿಷ್ ವಾರಪತ್ರಿಕೆ The Illustrated Weekly Of Indiaದಲ್ಲಿ ಅವರ ಕವನಗಳು ಪ್ರಕಟವಾದವು. ಆದರೆ ಎಲ್ಲಕ್ಕಿಂತ ಮಹತ್ವದ ಬೆಳವಣಿಗೆಯೆಂದರೆ, ಅವರು ಕನ್ನಡದ ವಚನಗಳನ್ನು ಇಂಗ್ಲಿಷ್‌ಗೆ ಅನುವಾದಿಸಲು ಶುರುಮಾಡಿದ್ದು ಇಲ್ಲಿದ್ದಾಗಲೇ. ಆ ಕೆಲಸ ಮಾಡುವಾಗ ಅವರು ಆಗಾಗ್ಗೆ ಭೂಗತರಾಗುತ್ತಿದ್ದರು ಎನ್ನುತ್ತಿದ್ದರು ಅವರ ಸಹೋದ್ಯೋಗಿಗಳು. ಗಿರೀಶ್ ಕಾರ್ನಾಡರು ಹೇಳುವಂತೆ, ಆ ಕಾಲದಲ್ಲಿ ವಚನಗಳು ಕೇವಲ ಧಾರ್ಮಿಕ ಕೃತಿಗಳಾಗಿದ್ದು, ಕನ್ನಡದ ಎಷ್ಟೋ ಪ್ರೊಫೆಸರ್‌ಗಳಿಗೇ ಅವುಗಳ ಬಗ್ಗೆ ಜಾಸ್ತಿ ಅರಿವಿರಲಿಲ್ಲ. ರಾಮಾನುಜನ್ ಮಾತ್ರ ಅವನ್ನು ಕಾವ್ಯಗಳೆಂದು ಪರಿಗಣಿಸಿ Speaking of Siva ಎಂದರು. ಉಳಿದ ಅನುವಾದಗಳಿಗಿಂತ ಇವರದ್ದು ಭಿನ್ನವಾಗಿತ್ತು. ಈ ಅನುವಾದದಿಂದಾಗಿ ಕನ್ನಡದ ವಚನಕಾರರು ವಿಶ್ವದ ಗಮನ ಸೆಳೆದರು. ಜತೆಗೆ ರಾಮಾನುಜನ್‌ರಿಗೂ ಅಪಾರವಾದ ಅಂತಾರಾಷ್ಟ್ರೀಯ ಖ್ಯಾತಿ ಬಂದಿತು. ಧಾರವಾಡದ ಹಿರಿಯ ಪ್ರೊಫೆಸರ್ ಹಾಗೂ ಖ್ಯಾತ ವಿದ್ವಾಂಸ ಆರ್ಮಂಡೋ ಮೆನೆಜಿಸ್‌ರ ವಚನಗಳ ಅನುವಾದದ ಬಗ್ಗೆ ನಾನು ಕೇಳಿದಾಗ ರಾಮಾನುಜನ್ ಅವರ ಬಗ್ಗೆ ಗೌರವ ವ್ಯಕ್ತಪಡಿಸಿದರು, ಆದರೆ ಅವು ಕಾವ್ಯವಾಗಿಲ್ಲ ಎಂದರು. ಕುತೂಹಲಕಾರಿ ವಿಷಯವೆಂದರೆ, ಶಿಕಾಗೋದ ಅವರ ಮನೆಯಲ್ಲಿ ಮೆನೆಜಿಸ್‌ರ ಶಿಷ್ಯೆಯೊಬ್ಬರು ಭೇಟಿಯಾಗಿ, 'ರಾಮಾನುಜನ್, ನಿಮ್ಮ ಅನುವಾದಕ್ಕಿಂತ ಮೆನೆಜಿಸ್ ಅವರದ್ದು ಚೆನ್ನಾಗಿದೆ' ಎಂದಾಗ ರಾಮಾನುಜನ್ ಸುಮ್ಮನಿದ್ದರಂತೆ. ಆದರೆ ಮರುದಿನ ಫೋನ್ ಮಾಡಿ, 'ನೀವು ಹೇಳಿದ್ದು ಸರಿಯಿದೆ' ಎಂದರಂತೆ. ಕನ್ನಡದ ಈ ವಚನಗಳನ್ನು ಹಾಗೂ ಆಳ್ವಾರರ ಪದ್ಯಗಳನ್ನು ರಾಮಾನುಜನ್ ಕೊನೆಯವರೆಗೂ ನೆನಪಿಸಿಕೊಳ್ಳುತ್ತಿದ್ದರು ಎಂದು ಹೇಳಿಕೊಂಡಿದ್ದಾರೆ ಯು.ಆರ್.ಅನಂತಮೂರ್ತಿಯವರು.

ಇದೇ ಸಮಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕಾಗಿ 'ಗಾದೆಗಳು' ಎಂಬ ನಾಲ್ಕಾಣೆ ಮುಖಬೆಲೆಯ ಪುಸ್ತಕ ಮಾಡಿಕೊಟ್ಟರು. ಇದು ಕೂಡ ತುಂಬಾ ಜನಪ್ರಿಯವಾಯಿತು. ಕಾರ್ನಾಡರೇ ಹೇಳುವಂತೆ, ಇಂಗ್ಲಿಷ್ ಅಧ್ಯಾಪಕರೊಬ್ಬರು ಕನ್ನಡದ ಗಾದೆಗಳು, ಒಗಟುಗಳ ಬಗ್ಗೆ ಕೆಲಸ ಮಾಡಿದ್ದು ಅಂದು ಕೆಲವರಿಗೆ ವಿಚಿತ್ರ ಎನಿಸಿತ್ತಂತೆ. ಪ್ರೊ.ಎಂ.ಎಂ. ಕಲಬುರ್ಗಿಯವರು ಗಾದೆಗಳ ಪುಸ್ತಕವನ್ನು ಮೆಚ್ಚಿಕೊಂಡಿದ್ದರೂ, ವಚನಗಳ ಅನುವಾದ, ಅಂದರೆ ಅಂಕಿತನಾಮದ ಅನುವಾದವು ಬಹಳ ಜನರಂತೆ ಅವರಿಗೂ ಇಷ್ಟವಾಗಿರಲಿಲ್ಲ. ಹನುಮಂತನನ್ನು 'ಗಾಡ್ ಆಫ್ ಮಂಕೀಸ್' ಅಂತಾರಾ ರಾಮಾನುಜನ್? ಎಂದು ನನ್ನನ್ನು ಕೇಳಿದ್ದರು (ಆದರೆ, ಅಡಿಗರ ಒಂದು ಪದ್ಯದ ಅನುವಾದದಲ್ಲಿ ರಾಮಾನುಜನ್ ಹಾಗೇ ಮಾಡಿದ್ದುಂಟು). ಈಡಿಪಸ್ ಕತೆಯ ಹೊಸದೊಂದು ಅವತಾರ ರಾಮಾನುಜನ್‌ರಿಗೆ ಸಿಕ್ಕಿದ್ದು ಕೂಡ ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ. ಈ ಕತೆ ಹೇಳಿದ ಅನಕ್ಷರಸ್ಥ ಅಜ್ಜಿಗೆ ಕೂಡ ಒಂದು ಕಣ್ಣು ಕುರುಡಾಗಿತ್ತು. ಈ ಕತೆಯನ್ನು ಅವರು 'ಭಾರತದ ಈಡಿಪಸ್' ಎಂದು ವಿಶ್ಲೇಷಿಸಿದ್ದಾರೆ.

ಒಬ್ಬ ಅಧ್ಯಾಪಕರಾಗಿ ತುಂಬಾ ಜನಪ್ರಿಯರಾಗಿದ್ದ ರಾಮಾನುಜನ್‌ರಲ್ಲಿ, ತಮ್ಮ ಕತೆ, ಜೋಕ್ಸ್ ಮೂಲಕವೂ ಪಾಠ ಹೇಳುವ ವಿಶೇಷತೆಯಿತ್ತು. ಒಮ್ಮೆ ವಿದ್ಯಾರ್ಥಿಗಳು 'ಜೋಕ್ ಹೇಳಿ' ಎಂದಾಗ ರಾಮಾನುಜನ್ ತಮ್ಮ ದೇಹವನ್ನು ನಿರ್ದೇಶಿಸಿ 'ಇದೇ ಒಂದು ಜೋಕ್' ಎಂದಾಗ ಹುಡುಗರು ನಕ್ಕರು. ಮುಂದುವರಿದು, 'ಇದು ನನ್ನ ತಂದೆಯ ಜೋಕ್' ಎಂದಾಗ ಮತ್ತೆ ನಗು. 'ನನಗೂ ನಿಮಗೂ ವ್ಯತ್ಯಾಸವೇನಿಲ್ಲ' ಎಂದಾಗ ಮತ್ತೆ ಮತ್ತೆ ನಗು. ತರಗತಿಯೊಂದರಲ್ಲಿ ವಿದ್ಯಾರ್ಥಿಗಳು ಹುಯಿಲೆಬ್ಬಿಸಿದಾಗ ರಾಮಾನುಜನ್, Remember you are on benches, not on branches ಎಂದರಂತೆ. ಆಗ ವಿದ್ಯಾರ್ಥಿಗಳು, 'ಸರ್, ಇದು ನಿಮ್ಮ ಹಳೆಯ ಜೋಕ್' ಅಂದಾಗ ರಾಮಾನುಜನ್, I didn't know monkeys have memory also ಅಂದರಂತೆ! ಹುಡುಗರನ್ನು ಸುಮ್ಮನಿರಿಸಲು ಕೆಲವೊಮ್ಮೆ ಇಂಗ್ಲಿಷ್‌ನ articles ಮತ್ತು prepositions ಹೇಳುತ್ತಿದ್ದರಂತೆ. ನಂತರ ರಾಮಾನುಜನ್ ಬರೋಡಾಕ್ಕೆ ತೆರಳಿದಾಗ, ಪ್ರತಿಯೊಂದು ತರಗತಿಯಲ್ಲೂ ಅವರಿಗೆ ಬೀಳ್ಕೊಡುಗೆ ಸಮಾರಂಭ ಆಯಿತಂತೆ.

ನನ್ನ ವಿದ್ಯಾರ್ಥಿಯೊಬ್ಬ, 'ರಾಮಾನುಜನ್‌ರ ತರಗತಿಗಳು ಅದ್ಭುತವಾಗಿರುತ್ತಿದ್ದವು' ಎಂದೆಲ್ಲ ಉತ್ತರ ಪತ್ರಿಕೆಯಲ್ಲಿ ಬರೆದಿದ್ದ. ನಾನು ಅವನನ್ನು ಕರೆದು, 'ಅಲ್ಲಪ್ಪಾ, ರಾಮಾನುಜನ್ ತೀರಿಕೊಂಡಾಗ ನೀನಿನ್ನೂ ಹುಟ್ಟಿರಲಿಲ್ಲ, ಮತ್ತೆ ಹೀಗೆಲ್ಲಾ ಬರೆದಿದ್ದೀಯಲ್ಲಾ?' ಎಂದು ಕೇಳಿದೆ. ಆಗ ಅವನು, 'ನಮ್ಮ ಅಜ್ಜ ಹಾಗೆ ಹೇಳಿದರು' ಎಂದ.



ಕಾರ್ನಾಡರು ಹೇಳುವಂತೆ, ಆ ಕಾಲದಲ್ಲಿ ಬೆಳಗಾವಿಯ ಲಿಂಗರಾಜ ಕಾಲೇಜು ಮತ್ತು ಧಾರವಾಡದ ಕರ್ನಾಟಕ ಕಾಲೇಜುಗಳ ಮಧ್ಯೆ ಒಂದು ಆರೋಗ್ಯಕರ ಸ್ಪರ್ಧೆಯಿತ್ತು- ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ತರಹ. ಕೆಲವು ಸಲ ರಾಮಾನುಜನ್ ವಿದ್ಯಾರ್ಥಿಗಳನ್ನು ಕರೆದುಕೊಂಡು ಧಾರವಾಡಕ್ಕೆ ಬರುತ್ತಿದ್ದರಂತೆ. ಆ ದಿನಗಳಲ್ಲಿ ರಾಮಾನುಜನ್ ಜತೆ ನಿಕಟವಾಗಿದ್ದ ಕಾರ್ನಾಡರು ಅವರ ಪ್ರತಿಭೆಗೆ ಮಾರುಹೋಗಿದ್ದರ ಬಗ್ಗೆ ಬರೆದಿದ್ದಾರೆ. ಚೆನ್ನವೀರ ಕಣವಿಯವರು ನನ್ನೊಡನೆ ನೆನಪಿಸಿಕೊಂಡ ಹಾಗೆ, 1956ರಲ್ಲಿ ಮೈಸೂರು ರಾಜ್ಯ ಉದಯವಾಗುವ ಕೆಲವೇ ದಿನಗಳ ಮೊದಲು ಬೆಳಗಾವಿಯ ಮೈದಾನವೊಂದರಲ್ಲಿ ಪೊಲೀಸ್ ರಕ್ಷಣೆಯಲ್ಲಿ ದೊಡ್ಡ ಸಭೆ ಏರ್ಪಡಿಸಲಾಗಿತ್ತು. ಈ ಐತಿಹಾಸಿಕ ಸಮಾರಂಭದ ಅಧ್ಯಕ್ಷತೆಯನ್ನು ರಾಮಾನುಜನ್ ವಹಿಸಿದ್ದರು.

ರಾಮಾನುಜನ್‌ರ ಆತ್ಮೀಯ ಸ್ನೇಹಿತರಾಗಿದ್ದ ಕೀರ್ತಿನಾಥ ಕುರ್ತಕೋಟಿಯವರು, ಅವರ ಕುರಿತಂತೆ ಒಂದೆರಡು ಸ್ವಾರಸ್ಯಕರ ವಿಷಯಗಳನ್ನು ನನಗೆ ಹೇಳಿದರು. ಶಂಕರ ಮೊಖಾಶಿ ಪುಣೇಕರರು ಬೆಳಗಾವಿಯಲ್ಲಿ ರಾಮಾನುಜನ್‌ರನ್ನು ಭೇಟಿ ಮಾಡಿ ಬಂದ ಮೇಲೆ ಧಾರವಾಡದಲ್ಲಿ ಕುರ್ತಕೋಟಿಯವರೊಡನೆ ಹೀಗೆಂದರಂತೆ: 'ಬೆಳಗಾವಿಗೆ ರಾಮಾನುಜನ್ ಅಂತ ಒಬ್ಬ ಇಂಗ್ಲಿಷ್ ಲೆಕ್ಚರರ್ ಬಂದಾನಪ್ಪ. ಅಂವಾ ಏನೋ ಮಾರಾಯಾ, ಮಿಲ್ಟನ್ ಕವೀನ ಅಲ್ಲ ಅಂತಾನ!'. ರಾಮಾನುಜನ್‌ರಿಗೆ ಕಾವ್ಯದ ಬಗ್ಗೆ ತಮ್ಮವೇ ಆದ ನಿರೀಕ್ಷೆಗಳಿದ್ದವು. ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ಅವರು ತಮ್ಮ ಪದ್ಯಗಳನ್ನು ಓದಿದಾಗ ಕೇಳುಗರೊಬ್ಬರು, 'ನಿಮ್ಮ ಪದ್ಯಗಳನ್ನು ಪದ್ಯ ಎಂದು ಏಕೆ ಕರೆಯಬೇಕು?' ಎಂದಾಗ ರಾಮಾನುಜನ್ ಅವರ ಉತ್ತರ- 'ಕರೆಯಬೇಡಿ'! ಮೇಲ್ನೋಟಕ್ಕೆ ಇದು ಒರಟು ಉತ್ತರವೆನಿಸಿದರೂ, ಅವರಿಗೆ ಕಾವ್ಯದ ಬಗ್ಗೆ ತಮ್ಮದೇ ಕಲ್ಪನೆ ಇದ್ದಿದ್ದನ್ನು ಅದು ಹೇಳುತ್ತದೆ ('ರಾಮಾನುಜನ್ ನಿಮ್ಮನ್ನು ನಿರುತ್ತರರನ್ನಾಗಿಸುತ್ತಾರೆ' ಎಂದೂ ಕುರ್ತಕೋಟಿಯವರು ನನಗೆ ಒಮ್ಮೆ ಹೇಳಿದ್ದರು). ಇನ್ನೊಂದು ವಿಷಯವೆಂದರೆ, ಬೇಂದ್ರೆಯವರ ಸಮ್ಮುಖದಲ್ಲಿ ರಾಮಾನುಜನ್ ಸ್ವಲ್ಪ 'ನರ್ವಸ್' ಆಗುತ್ತಾರೆ ಎಂದೂ ಅವರು ಹೇಳಿದ್ದರು. ಕಾರಣ ಕೇಳಬೇಕಿತ್ತು ಎಂದು ಈಗ ಅನಿಸುತ್ತದೆ. ವೃತ್ತಿ ಸಂಬಂಧಿತ ಅಸೂಯೆಯೋ ಏನೋ, ಲಿಂಗರಾಜ ಕಾಲೇಜಿನಲ್ಲಿ ಅವರ ಸಹೋದ್ಯೋಗಿಯಾಗಿದ್ದ ಕನ್ನಡದ ಕವಿಯೊಬ್ಬರು ನನ್ನೊಡನೆ ಮಾತಾಡುವಾಗ, 'ಏನ್ರೀ ನಿಮ್ಮ ರಾಮಾನುಜನ್ ಅವರಿಗೆ ಕನ್ನಡ ಗ್ರಾಮರ್ರೇ ಗೊತ್ತಿಲ್ಲ..' ಎಂದಾಗ ದಂಗಾಗಿದ್ದೆ.

ಬೆಳಗಾವಿಯಲ್ಲಿ ಕೆ.ಬಿ.ಕುಲಕರ್ಣಿ ಎಂಬ ಚಿತ್ರಕಲಾವಿದರಿದ್ದರು. ಅವರೊಡನೆ ರಾಮಾನುಜನ್ ಸಾಯಂಕಾಲ ಊರ ಹೊರಗೆ ಕುಳಿತು ಹರಟುತ್ತಿದ್ದರು. ರಾಮಾನುಜನ್‌ರಿಗೆ ಮರಾಠಿ ಬಾರದು, ಕುಲಕರ್ಣಿಯವರಿಗೆ ಕನ್ನಡ ಬಾರದು. ಹಾಗಾಗಿ ಮಾತೆಲ್ಲಾ ಇಂಗ್ಲಿಷ್‌ನಲ್ಲಿ. ರಾಮಾನುಜನ್ ಒಮ್ಮೆ ಅಂದರಂತೆ, 'ಕುಲಕರ್ಣಿಯವರೇ, ಈ ಹೆಣ್ಣು ಮಕ್ಕಳು ಜಗಳವಾಡಿದಾಗ, ಆಕಾಶದಲ್ಲಿ ಗುಡುಗಿದಂತೆ ಅನಿಸುತ್ತದಲ್ಲ!'. ಅವರು ಮತ್ತೆ ಹೇಳಿದ್ದು ಏನೆಂದರೆ, 'ನಾನು ಎಂದಾದರೂ ಅಧ್ಯಾತ್ಮದ ಕಡೆಗೆ ತಿರುಗಿದರೆ, ಅದು ರಾಮಕೃಷ್ಣ ಪರಮಹಂಸರದ್ದು ಆಗಿರುತ್ತದೆ'. ರಾಮಕೃಷ್ಣರ salt dol★ ಪ್ರತಿಮೆ ರಾಮಾನುಜನ್‌ರಿಗೆ ಇಷ್ಟವಾಗಿತ್ತು.

ರಾಮಾನುಜನ್ ಭಾರತಕ್ಕೆ ಒಮ್ಮೆ ಬಂದಾಗ ಕುಲಕರ್ಣಿಯವರನ್ನು ಭೇಟಿಯಾಗಲು ಬೆಳಗಾವಿಗೆ ಬಂದಿದ್ದರು. 'ಕುಲಕರ್ಣಿಯವರೇ, ನಾನೀಗ ವಿವಾಹಿತ, ಗೊತ್ತಾ?' ಎಂದರಂತೆ ರಾಮಾನುಜನ್. 'ನಿಮಗೆ ನನ್ನ ಸಹಾನುಭೂತಿಗಳು' ಎಂದರಂತೆ ಕುಲಕರ್ಣಿ. 'ನೀವು ಹೀಗೇ ಹೇಳ್ತೀರ ಅಂತ ಗೊತ್ತಿತ್ತು' ಎಂದರಂತೆ ರಾಮಾನುಜನ್ (ಕುಲಕರ್ಣಿ ಅವಿವಾಹಿತರಾಗಿದ್ದರು). ಸ್ವಲ್ಪ ಸಮಯದ ನಂತರ ರಾಮಾನುಜನ್, ಕುಲಕರ್ಣಿಯವರ ಚಿತ್ರಗಳನ್ನು ವೀಕ್ಷಿಸಿದರು. ವಿದೇಶದಲ್ಲಿರುವ ಆ ಮಿತ್ರನ ಅಭಿಪ್ರಾಯ ತಿಳಿಯಲು ಬಯಸಿದ ಕುಲಕರ್ಣಿಯವರು, 'ನನ್ನ ಚಿತ್ರಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ಕೇಳಿದರು. ಅದಕ್ಕೆ ರಾಮಾನುಜನ್, 'ತುಂಬ ಚೆನ್ನಾಗಿವೆ. ನನಗೆ ಇಷ್ಟವಾಯ್ತು. ಆದರೆ ನಿಮ್ಮ ಚಿತ್ರಗಳಲ್ಲಿ ನೀವೇಕೆ jump ಮಾಡುವುದಿಲ್ಲ?' ಎಂದರಂತೆ. ಈ jump ಏನಿರಬಹುದೆಂದು ಕುಲಕರ್ಣಿ ಆಶ್ಚರ್ಯಪಟ್ಟರು. 'ನಾವು ಕಾವ್ಯದಲ್ಲಿ ನಡೆಯುವುದಿಲ್ಲ, jump ಮಾಡುತ್ತೇವೆ' ಎಂದೆಲ್ಲ ಸ್ವಲ್ಪ ವಿವರಿಸಿದರು ರಾಮಾನುಜನ್. 'ಸರಿ, ಆದರೆ ಚಿತ್ರಕಲೆಯ ಭಾಷೆಯೇ ಬೇರೆ' ಎಂದರು ಕುಲಕರ್ಣಿ. ರಾಮಾನುಜನ್ ಒಪ್ಪಿಕೊಂಡರು. ಆದರೂ ಅವರ ಸೂಚನೆ ಹೊಸದಾಗಿದ್ದು ಕುಲಕರ್ಣಿಯವರನ್ನು ಪ್ರಭಾವಿಸಿತ್ತು. 'ನನಗೊಂದು ಉದಾಹರಣೆ ಕೊಡಿ, ನಿಮ್ಮ ಸೂಚನೆಯಂತೆ ಮಾಡುತ್ತೇನೆ' ಎಂದರು ಕುಲಕರ್ಣಿ. ಇದು ನಡೆದದ್ದು ದೀಪಾವಳಿಯ ಒಂದು ದಿನ. ಬೆಳಗಿನ 10 ಗಂಟೆಯಾದರೂ ಇನ್ನೂ ಚಳಿ. 'ಕುಲಕರ್ಣಿ, ಬಿಸಿಲು ಚಿತ್ರಿಸುವಾಗ ನೀವೇಕೆ ನೀಲಿ (ತಂಪು) ಬಣ್ಣ ಉಪಯೋಗಿಸಬಾರದು?' ಎಂದ ರಾಮಾನುಜನ್, 'ಹೊಸ forms, ವರ್ಣಗಳ ಬಗ್ಗೆ ಚಿಂತಿಸಿ' ಎಂದೂ ಸೂಚಿಸಿದರು. ಅದರಂತೆ ಪ್ರಯತ್ನಿಸಿ ಕುಲಕರ್ಣಿಯವರು ಯಶಸ್ವಿಯೂ ಆದರು. 'ನನಗಿಂತ ಅವರು ಚಿಕ್ಕವರಿದ್ದರೂ, ನನಗೆ ಗುರುವಾದರು' ಎನ್ನುತ್ತ ಮುಗುಳ್ನಕ್ಕರು ಕುಲಕರ್ಣಿ. 'ರಾಮಾನುಜನ್ ಒಬ್ಬ ಮಧುರ, ಸಾದಾ, ನೇರ ಮಾತಿನ ಮನುಷ್ಯ. ಅವರ ನೆನಪುಗಳು ನನಗೆ ತೊಂದರೆ ಮಾಡುವುದಿಲ್ಲ. ಅವರನ್ನು ಮತ್ತೊಮ್ಮೆ ನೋಡಬೇಕು ಎನಿಸುತ್ತದೆ' ಎಂದರು ಕುಲಕರ್ಣಿ.

(ಲೇಖಕರು ನಿವೃತ್ತ ಇಂಗ್ಲಿಷ್ ಅಧ್ಯಾಪಕರು ಮತ್ತು ಅನುವಾದಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 181

ಪಟನಾ: ಬಿಹಾರ ವಿಧಾನಸಭೆಗೆ ವರ್ಷಾಂತ್ಯದಲ್ಲಿ (ಅಕ್ಟೋಬರ್-ನವೆಂಬರ್‌ನಲ್ಲಿ) ಚುನಾವಣೆ ನಡೆಯಲಿರುವ ಹಿನ್ನೆಲೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಲಾಗುತ್ತಿದೆ. ಆಘಾತಕಾರಿ ಸಂಗತಿಯೆಂದರೆ ಬಿಹಾರ ಮತದಾರರ ಪಟ್ಟಿಯಲ್ಲಿ ನೇಪಾಳ, ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್ ಪ್ರಜೆಗಳ ಹೆಸರು ದೊಡ್ಡ ಸಂಖ್ಯೆಯಲ್ಲಿ ಪತ್ತೆಯಾಗಿವೆ.

ಚುನಾವಣಾ ಆಯೋಗದ ಕ್ಷೇತ್ರ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ನೇಪಾಳ, ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶದ ಪ್ರಜೆಗಳ ಹೆಸರು ಮತದಾರರ ಪಟ್ಟಿಗೆ ಸೇರ್ಪಡೆಯಾಗಿರುವ ಆಘಾತಕಾರಿ ಸಂಗತಿ ಹೊರಬಿದ್ದಿದೆ. ಕೆಲವು ಪ್ರದೇಶಗಳಲ್ಲಿಯಂತೂ ಮತದಾರರ ಪಟ್ಟಿಯಲ್ಲಿ ನೇಪಾಳ, ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್ ಪ್ರಜೆಗಳ ಹೆಸರು ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಯಾಗಿದೆ ಎಂದು ಚುನಾವಣಾಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮತದಾರರ ಪಟ್ಟಿ ಸೇರಿರುವ ಬೇರೆ ದೇಶದ ಪ್ರಜೆಗಳ ವಿಚಾರದಲ್ಲಿ ಆ.1ರ ನಂತರ ಸಮಗ್ರ ತನಿಖೆ ನಡೆಸಲಾಗುವುದು. ಸೆ.30ರಂದು ಪ್ರಕಟವಾಗುವ ಮತದಾರರ ಅಂತಿಮ ಪಟ್ಟಿಯಲ್ಲಿ ಅಕ್ರಮ ವಲಸಿಗರ ಹೆಸರು ಸೇರಿರುವುದಿಲ್ಲ ಎಂದು ಚುನಾವಣಾಧಿಕಾರಿ ಹೇಳಿದ್ದಾರೆ.

ಜನ್ಮಸ್ಥಳ ಪರಿಶೀಲನೆ ಮೂಲಕ ಅಕ್ರಮ ವಲಸಿಗ ವಿದೇಶಿಯರನ್ನು ಪತ್ತೆ ಮಾಡಲು ಚುನಾವಣಾ ಆಯೋಗ ದೇಶಾದ್ಯಂತ ವಿಶೇಷ ಅಂತಿಮ ಮತದಾರರ ಪಟ್ಟಿ ಪರಿಷ್ಕರಣೆ ಕೈಗೆತ್ತಿಕೊಳ್ಳಲಿದೆ. ಇದರಿಂದ ಅಕ್ರಮ ವಲಸಿಗರನ್ನು ದೇಶದಿಂದ ಹೊರಹಾಕಲು ಸರಕಾರಕ್ಕೆ ಅನುಕೂಲವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಪಟನಾದಲ್ಲಿ ಚುನಾವಣಾ ಸಿಬ್ಬಂದಿ ಬಿಹಾರ ರಾಜ್ಯದ ಮತದಾರರು ಸಲ್ಲಿಸಿದ ದೃಢೀಕರಣ ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ.

ವಿಶೇಷ ಪರಿಷ್ಕರಣೆ ಪ್ರಕ್ರಿಯೆ

ಬಿಹಾರ ರಾಜ್ಯಾದ್ಯಂತ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಪ್ರಕ್ರಿಯೆ ನಡೆಯುತ್ತಿದ್ದು, ರಾಜ್ಯದ ಮತದಾರರಲ್ಲಿ ಶೇ.80.11ರಷ್ಟು ಮಂದಿ ಮಾತ್ರವೇ ಶನಿವಾರ ಸಂಜೆಯವರೆಗೆ ಮತದಾರ ದೃಢೀಕರಣ ಫಾರಂಗಳನ್ನು ಸಲ್ಲಿಸಿದ್ದಾರೆ. ಜುಲೈ 25ರವರೆಗೂ ಮತದಾರರಿಗೆ ಎನ್ಯುಮರೇಷನ್ ಫಾರಂ (ದೃಢೀಕರಣ ದಾಖಲೆ) ಸಲ್ಲಿಸುವುದಕ್ಕೆ ಅವಕಾಶವಿದೆ ಎಂದು ರಾಜ್ಯ ಚುನಾವಣಾಧಿಕಾರಿ ಸುದ್ದಿಸಂಸ್ಥೆಗೆ ಭಾನುವಾರ ತಿಳಿಸಿದ್ದಾರೆ. ಮತದಾರರಿಂದ ಈವರೆಗೆ ಸಲ್ಲಿಕೆಯಾಗಿ ರುವ ದೃಢೀಕರಣ ದಾಖಲೆಗಳ ಪರಿಶೀಲನೆಯೂ ನಡೆಯುತ್ತಿದೆ. ಸೆ.30ರಂದು ಚುನಾವಣೆ ಆಯೋಗದಿಂದ ಪ್ರಕಟಿಸಲಾಗುವ ಬಿಹಾರ ರಾಜ್ಯದ ಅಂತಿಮ ಮತದಾರರ ಪಟ್ಟಿಯಲ್ಲಿ ಅಕ್ರಮ ವಲಸಿಗರಲ್ಲಿ ಒಬ್ಬರ ಹೆಸರೂ ಇರದಂತೆ ಮಾಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಪಕ್ಷಗಳು ಸುಪ್ರೀಂಗೆ ಅರ್ಜಿ

ಬಿಹಾರ ರಾಜ್ಯದಲ್ಲಿನ ಚುನಾವಣಾ ಆಯೋಗ ಕೈಗೊಂಡಿರುವ 'ಮತದಾರರ ಪಟ್ಟಿಯ ವಿಶೇಷ ಕ್ಷಿಪ್ರ ಪರಿಶೀಲನೆ' ಪ್ರಕ್ರಿಯೆಯನ್ನು ವಿರೋಧಿಸಿ ಕಾಂಗ್ರೆಸ್, ರಾಷ್ಟ್ರೀಯ ಜನತಾ ದಳ, ಸಮಾಜವಾದಿ ಪಕ್ಷ, ಸಿಪಿಐ(ಎಂ) ಸೇರಿದಂತೆ ಇಂಡಿಯ ಒಕ್ಕೂಟದ ಹಲವು ಪ್ರತಿ ಪಕ್ಷಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿವೆ. ರಾಜಕೀಯ ಪಕ್ಷ ಗಳಷ್ಟೇ ಅಲ್ಲದೇ, ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ (ಎಡಿಆರ್) ಎನ್‌ಜಿಒ ಕೂಡಾ ಬಿಹಾರ ಮತದಾರರ ಪಟ್ಟಿ ವಿಶೇಷ ಕ್ಷಿಪ್ರ ಪರಿಶೀಲನೆ ಕ್ರಮ ವಿರೋಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಮತದಾರರ ಪಟ್ಟಿ ವಿಶೇಷ ಕ್ಷಿಪ್ರ ಪರಿಶೀಲನೆ ಪ್ರಕ್ರಿಯೆಗೆ ತಕ್ಷಣವೇ ತಡೆಯಾಜ್ಞೆ ನೀಡುವಂತೆಯೂ ಮನವಿ ಮಾಡಿದ್ದವು. ಆದರೆ, ಕಳೆದ ವಾರ ಈ ಎಲ್ಲಾ ಅರ್ಜಿಗಳನ್ನು ವಿಚಾರಣೆಗೆ ತೆಗೆದುಕೊಂಡ ನ್ಯಾಯಮೂರ್ತಿ ಸುಧಾಂಶು ಧುಲಿಯಾ ಮತ್ತು ನ್ಯಾ.ಜೋಯ್ಮಲ್ಯ ಬಾಗ್ಚಿ ಅವರ ದ್ವಿಸದಸ್ಯ ಪೀಠ, ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಗೆ ತಡೆಯಾಜ್ಞೆ ನೀಡಲು ನಿರಾಕರಿಸಿತು. ಅಲ್ಲದೇ, ಮತದಾರರ ಪಟ್ಟಿ ಪರಿಷ್ಕರಣೆ ಚುನಾವಣಾ ಆಯೋಗದ ಪರಮಾಧಿಕಾರ. ಈಗಿನ ಆಯೋಗದ ಕ್ರಮ ಸಂವಿಧಾನಿಕವಾಗಿಯೇ ಇದೆ ಎಂದು ಅಭಿಪ್ರಾಯಪಟ್ಟಿತು. ಆದರೆ, ಮತದಾರರ ಪಟ್ಟಿಯ ಕ್ಷಿಪ್ರ ಪರಿಶೀಲನೆ ಕೈಗೊಂಡ ಸಮಯದ ಬಗ್ಗೆ ಪೀಠ ಅಸಮಾಧಾನ ವ್ಯಕ್ತಪಡಿಸಿತು. ಬಿಹಾರ ವಿಧಾನಸಭೆ ಪಟನಾದಲ್ಲಿ ಚುನಾವಣಾ ಸಿಬ್ಬಂದಿ ಬಿಹಾರ ರಾಜ್ಯದ ಮತದಾರರು ಸಲ್ಲಿಸಿದ ದೃಢೀಕರಣ ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ. ಡಿ ಚುನಾವಣೆ ಸಮೀಪಿಸಿರುವಾಗ ಮತದಾರರ ಪಟ್ಟಿ ಪರಿಷ್ಕರಣೆ ಮಾಡಬೇಕಿತ್ತೇ? ಎಂದು ಚುನಾವಣಾ ಆಯೋಗವನ್ನು ಪ್ರಶ್ನೆ ಮಾಡಿತು. ಆಯೋಗದ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿತು.

ಬಿಹಾರ ರಾಜ್ಯದಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಪ್ರಕ್ರಿಯೆ ನಡೆದಿದ್ದು, ಸರನ್ ಜಿಲ್ಲೆಯ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಅಮನ್ ಸಮೀರ್ ಅವರು ಬೂತ್ ಮಟ್ಟದ ಅಧಿಕಾರಿಗಳ ಜತೆಗೂಡಿ ಮನೆ ಮನೆ ಪರಿಶೀಲನೆ ನಡೆಸಿದರು.

ಚುನಾವಣೆ ಅಕ್ರಮ: ಕಾಂಗ್ರೆಸ್‌ಗೆ ಶಂಕೆ

2024ರಲ್ಲಿ ನಡೆದ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭಾರಿ ಪ್ರಮಾಣದಲ್ಲಿ ಅಕ್ರಮ ನಡೆಸಿ ಚುನಾವಣೆ ಗೆದ್ದಿದೆ. ಚುನಾವಣೆ ಅಕ್ರಮಕ್ಕಾಗಿ ಆಯೋಗದ ನೆರವನ್ನೂ ಬಿಜೆಪಿ ಪಡೆದುಕೊಂಡಿದೆ ಎಂದು ಕಾಂಗ್ರೆಸ್ ನಾಯಕರಯ ನಿರಂತರ ಆರೋಪ ಮಾಡುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಮಾಡಿದಂತೆಯೇ ಬಿಹಾರ ವಿಧಾನಸಭೆ ಚುನಾವಣೆಯಲ್ಲಿಯೂ ಅಕ್ರಮ ನಡೆಸಲು ಚುನಾವಣಾ ಆಯೋಗದ ವ್ಯವಸ್ಥೆಯನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳಲಿದೆ. ಆ ದಿಸೆಯಲ್ಲಿಯೇ ಮತದಾರರ ಪಟ್ಟಿಯ ವಿಶೇಷ ಕ್ಷಿಪ್ರ ಪರಿಶೀಲನೆ ನಡೆಸಲಾಗುತ್ತಿದೆ. ಕಾಂಗ್ರೆಸ್ ಸೇರಿ ಪ್ರತಿಪಕ್ಷಗಳ ಪರವಾಗಿರುವ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕುವುದೇ ಈಗಿನ ಮತದಾರರ ಪಟ್ಟಿ ಪರಿಷ್ಕರಣೆಯ ಉದ್ದೇಶವಾಗಿದೆ ಎಂದು ಕಾಂಗ್ರೆಸ್‌ನ ನಾಯಕ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸೇರಿ ಆರ್‌ಜೆಡಿಯ ತೇಜಸ್ವಿ ಯಾದವ್, ಸಮಾಜವಾದಿ ಪಕ್ಷ ಅಖಿಲೇಶ್ ಯಾದವ್ ಮತ್ತಿತರರು ಆರೋಪ ಮಾಡುತ್ತಿದ್ದಾರೆ.

5 ವರ್ಷಗಳ ಹಿಂದೆ!

5 ವರ್ಷಗಳ ಹಿಂದೆ ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಯಾಗಿತ್ತು. ಆಗ ರಾಜ್ಯದ ಒಟ್ಟು ಮತದಾರರ ಪಟ್ಟಿಯಿಂದ 2,18,217 ಮತದಾರರನ್ನು ಕೈಬಿಡಲಾಗಿತ್ತು. ನವ ಮತದಾರರಾಗಿ 14,66,829 ಮಂದಿ(ಮೊದಲ ಬಾರಿ ಮತದಾರ ಯುವಜನರು) ಸೇರ್ಪಡೆಯಾಗಿದ್ದರು. ಚುನಾವಣಾ ಆಯೋಗ ಆ ವರ್ಷ ಪ್ರಕಟಿಸಿದ ಪರಿಷ್ಕರಣೆ ನಂತರದ ಅಂತಿಮ ಮತದಾರರ ಪಟ್ಟಿಯಲ್ಲಿ 7.49 ಕೋಟಿ (7,49,65,804) ಮತದಾರರ ಹೆಸರು ಉಳಿದುಕೊಂಡಿತ್ತು.

2026ರಲ್ಲಿ ಐದು ರಾಜ್ಯ ಚುನಾವಣೆ

ಬಿಹಾರದ ಬಳಿಕ ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿಯೂ ವಿಧಾನಸಭಾ ಚುನಾವಣೆ 2026ರಲ್ಲಿ ನಡೆಯಲಿವೆ. ಆ ರಾಜ್ಯಗಳಲ್ಲಿಯೂ ಬಾಂಗ್ಲಾದೇಶ, ನೇಪಾಳ ಮತ್ತು ಮ್ಯಾನ್ಮಾರ್ ಅಕ್ರಮ ವಲಸಿಗರನ್ನು ಪತ್ತೆ ಹಚ್ಚಲು ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಸಬೇಕಾಗುತ್ತದೆ ಎಂದು ಚುನಾವಣಾಧಿಕಾರಿ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಶುಭಾಂಶು ನಾಳೆ ಭೂಮಿಗೆ ವಾಪಸ್

ದೆಹಲಿ: ಆಕ್ಸಿಯಮ್ 4 ಬಾಹ್ಯಕಾಶ ಯಾನದಲ್ಲಿನ ಎಲ್ಲಾ ಪ್ರಯೋಗಗಳು, ಪರೀಕ್ಷೆಗಳು ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಭಾರತ ಪ್ರತಿನಿಧಿ ಶುಭಾಂಶು ಶುಕ್ಲಾ ಮಂಗಳವಾರ ಮಧ್ಯಾಹ್ನ 2.25ರ ವೇಳೆಗೆ ಬಾಹ್ಯಕಾಶದಿಂದ ಭೂಮಿಗೆ ಮರಳಲಿದ್ದಾರೆ.

ಶುಭಾಂಶು ಶುಕ್ಲಾ ಸೇರಿ 4 ಗಗನಯಾತ್ರಿಗಳ ತಂಡ ಸೋಮವಾರ ಮಧ್ಯಾಹ್ನ 2.25ಕ್ಕೆ ಗಗನ ನೌಕೆಯ ಡ್ರ್ಯಾಗನ್ ಕ್ಯಾಪ್ಸೂಲ್‌ನೊಳಕ್ಕೆ ಸೇರಿಕೊಳ್ಳಲಿದ್ದಾರೆ. ಆ ಬಳಿಕ ಸಂಜೆ 4.35ರ ವೇಳೆಗೆ ಡ್ರ್ಯಾಗನ್ ಕ್ಯಾಪ್ಸೂಲ್ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ(ಐಎಸ್‌ಎಸ್)ದಿಂದ ಅನ್ ಡಾಕಿಂಗ್ ಆಗುವ (ಬೇರ್ಪಡುವ) ಪ್ರಕ್ರಿಯೆ ಆರಂಭವಾಗಲಿದೆ. ನಂತರ ಬಾಹ್ಯಾಕಾಶ ಮತ್ತು ಆಕಾಶದಲ್ಲಿ ಗಿರಕಿ ಹೊಡೆಯುತ್ತಾ 420 ಕಿಮೀಗಳಷ್ಟು ದೂರವನ್ನು 22 ಗಂಟೆಗಳಲ್ಲಿ ಕ್ರಮಿಸಿ ಮಂಗಳವಾರ ಮಧ್ಯಾಹ್ನ 2.25ರ ವೇಳೆಗೆ ನಾಲ್ವರೂ ಗಗನಯಾತ್ರಿಗಳು ಭೂಮಿಗೆ ಮರಳಲಿದ್ದಾರೆ. ಡ್ರ್ಯಾಗನ್ ಕ್ಯಾಪ್ಸೂಲ್ ಕ್ಯಾಲಿಫೋರ್ನಿಯ ಕಡಲಲ್ಲಿ ಬಂದಿಳಿಯಲಿದೆ.

ರಸ್ತೆಬದಿ ನಿದ್ರಿಸಿದ್ದವರ ಮೇಲೆ ಹರಿದ ಕಾರು

ದೆಹಲಿ: ದೆಹಲಿಯ ವಸಂತ್ ವಿಹಾರ್‌ನಲ್ಲಿ ತಡರಾತ್ರಿ ಮದ್ಯದ ಅಮಲಿನಲ್ಲಿ ಆಡಿ ಕಾರು ಚಲಾಯಿಸುತ್ತಿದ್ದ ದೆಹಲಿ ನಿವಾಸಿಯೊಬ್ಬ ಪಾದ ಚಾರಿ ಮಾರ್ಗದಲ್ಲಿ ಮಲಗಿದ್ದವರ ಮೇಲೆ ಕಾರು ಹರಿಸಿದ ಪರಿಣಾಮ ಐವರು ಗಾಯಗೊಂಡಿದ್ದಾರೆ. ರಾಜಸ್ಥಾನದ ಮಹಿಳೆ, ಪತಿ ಮತ್ತು ಮಗಳು ಹಾಗೂ ಮತ್ತೊಂದು ಜೋಡಿ ಗಾಯಗೊಂಡವರು. ಮದ್ಯದ ಅಮಲಿನಲ್ಲಿ ಅತಿವೇಗ ಮತ್ತು ನಿರ್ಲಕ್ಷ್ಯದಿಂದ ಕಾರು ಚಲಾಯಿಸಿ ಐವರನ್ನು ಗಂಭೀರವಾಗಿ ಗಾಯಗೊಳಿಸಿದ ಆಡಿ ಕಾರು ಚಾಲಕ ದ್ವಾರಕಾ ನಿವಾಸಿ ಉತ್ಸವ್ ಶೇಖರ್ (40) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಶೇಖರ್, ಜುಲೈ 10ರ ನಸುಕಿನ 1.45ರಲ್ಲಿ ನೋಯ್ಡಾದಿಂದ ದ್ವಾರಕಾ ಪ್ರದೇಶದಲ್ಲಿನ ಮನೆಗೆ ಕಾರು ಚಲಾಯಿಸಿಕೊಂಡು ಹೋಗುವಾಗ ದುರ್ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಶೇಖರ್ ಕಾರು ಚಾಲನೆ ವೇಳೆ ಮದ್ಯಪಾನ ಮಾಡಿದ್ದ ಎಂಬುದು ವೈದ್ಯಕೀಯ ವರದಿಯಲ್ಲಿ ದೃಢಪಟ್ಟಿದೆ.

ಫೀಸ್ ವಾಪಸ್ ಕೇಳಿದ್ದಕ್ಕೆ ಥಳಿಸಿ ಕೊಂದ ಪ್ರಿನ್ಸಿಪಾಲ್

ಮುಂಬೈ: ಮಹಾರಾಷ್ಟ್ರದ ಪರ್ಭಾನಿ ಜಿಲ್ಲೆಯಲ್ಲಿ ಮಗಳ ಸ್ಕೂಲ್ ಫೀಸ್ ಮರು ಪಾವತಿ ಮಾಡುವಂತೆ ಆಗ್ರಹಿಸಿದ ರೈತರೊಬ್ಬರನ್ನು ಶಾಲೆಯ ಆಡಳಿತ ಮಂಡಳಿ ಮುಖ್ಯಸ್ಥ ಹಾಗೂ ಆತನ ಪತ್ನಿ ಹಿಗ್ಗಾಮುಗ್ಗಾ ಥಳಿಸಿ ಕೊಂದಿದ್ದಾರೆ. ಜಗನ್ನಾಥ್ ಹೆಂಗ್ಡೆ (46) ಮೃತ ರೈತ. ಪೂರ್ಣದ ಝೀರೋ ಫಾಟಾ ಪ್ರದೇಶದಲ್ಲಿರುವ ವಸತಿ ಶಾಲೆಯಲ್ಲಿ ರೈತನ ಮಗಳು ವ್ಯಾಸಂಗ ಮಾಡುತ್ತಿದ್ದಳು. ಕಾರಣಾಂತರಗಳಿಂದ ಮಗಳನ್ನು ಬೇರೆ ಶಾಲೆಗೆ ಸೇರಿಸಬೇಕಾಗಿ ಬಂದಿದ್ದರಿಂದ ಜಗನ್ನಾಥ್ ಮಗಳ ಶಾಲಾ ಶುಲ್ಕ ವಾಪಸ್ ಪಡೆಯಲು ಮತ್ತು ವರ್ಗಾವಣೆ ಪ್ರಮಾಣಪತ್ರ ಕೇಳಲು ಹೋಗಿದ್ದರು. ಆದರೆ ಶಾಲೆಯ ಆಡಳಿತ ಮಂಡಳಿ ಮುಖ್ಯಸ್ಥ ಹಾಗೂ ಆತನ ಪತ್ನಿ ಜಗನ್ನಾಥ್ ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿದ್ದರು. ತೀವ್ರ ಹಲ್ಲೆಯಿಂದ ಜಗನ್ನಾಥ್ ಸ್ಥಳದಲ್ಲೇ ಸಾವನ್ನಪ್ಪಿದರು. ಈ ಸಂಬಂಧ ಶಾಲಾ ಆಡಳಿತ ಮಂಡಳಿ ಮುಖ್ಯಸ್ಥ ಮತ್ತು ರಾಜಕೀಯ ಪಕ್ಷವೊಂದರ ಸದಸ್ಯೆಯಾದ ಆತನ ಪತ್ನಿಯನ್ನು ಬಂಧಿಸಿದ ಪೂರ್ಣ ಠಾಣೆ ಪೊಲೀಸರು ಕೊಲೆ ಪ್ರಕರಣ ದಾಖಲಿಸಿದ್ದಾರೆ.

ಐಐಎಂ ಅತ್ಯಾಚಾರ: 'ಎಸ್‌ಐಟಿ' ರಚನೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ಕೋಲ್ಕತದಲ್ಲಿನ ಪ್ರತಿಷ್ಠಿತ ಬಿಜಿನೆಸ್ ಸ್ಕೂಲ್ ಆಗಿರುವ 'ಐಐಎಂ-ಕೆ'ನ ವಿದ್ಯಾರ್ಥಿ ನಿಲಯದಲ್ಲಿ ಮನೋವಿಜ್ಞಾನ ಆಪ್ತ ಸಮಾಲೋಚಕಿ ಮೇಲೆ 2ನೇ ವರ್ಷದ ವಿದ್ಯಾರ್ಥಿ ಅತ್ಯಾಚಾರ ನಡೆಸಿದ ಆರೋಪದ ಪ್ರಕರಣದ ತನಿಖೆಗೆ ಪಶ್ಚಿಮ ಬಂಗಾಳ ಪೊಲೀಸ್ ಇಲಾಖೆ 'ವಿಶೇಷ ತನಿಖಾ ತಂಡ'ವನ್ನು ಭಾನುವಾರ ರಚಿಸಿದೆ. 9 ಮಂದಿ ನುರಿತ ತನಿಖಾಧಿಕಾರಿಗಳಿರುವ ತಂಡದ ನೇತೃತ್ವವನ್ನು ಕೋಲ್ಕತ್ತ ನೈಋತ್ಯ ಭಾಗದ ಅಸಿಸ್ಟೆಂಟ್ ಪೊಲೀಸ್ ಕಮಿಷನರ್‌ಗೆ ವಹಿಸಲಾಗಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರ ತಂಡ ಕೃತ್ಯ ನಡೆದ ಹಾಸ್ಟೆಲ್‌ನ ಕೊಠಡಿಗೆ ತೆರಳಿ ಹಲವು ಸಾಕ್ಷ್ಯಗಳನ್ನು, ಲಘುಪಾನೀಯ, ಪಿಜ್ಜಾದ ಮಾದರಿಗಳನ್ನು ಕಲೆಹಾಕಿ ಪ್ರಯೋಗಾಲಯಕ್ಕೆ ಕೊಂಡೊಯ್ದಿದೆ. ಸಿಸಿಟಿವಿ ದೃಶ್ಯಾವಳಿಗಳನ್ನು ಎಸ್‌ಐಟಿ ಸಂಗ್ರಹಿಸಿದೆ. ಮನೋವಿಜ್ಞಾನ ಸಮಾಲೋಚಕಿಗೆ ಮಾದಕದ್ರವ್ಯ ಬೆರೆಸಿದ ಪಾನೀಯ ನೀಡಿ ಪ್ರಜ್ಞೆ ತಪ್ಪಿಸಿ ಅತ್ಯಾಚಾರ ನಡೆಸಿದ ಆರೋಪದಡಿ ಕರ್ನಾಟಕ ಮೂಲದ ಯುವಕ ಮಹಾವೀರ ತೋಪಣ್ಣವರ್ ಅಲಿಯಾಸ್ ಪರಮಾನಂದ ಜೈನ್ ಎಂಬವನನ್ನು ಈಗಾಗಲೇ ಬಂಧಿಸಿ ಜು.19ರವರೆಗೂ ಕಸ್ಟಡಿಗೆ ಕೊಡಲಾಗಿದೆ.

{ **ವಿಜಯ್** } ನಟ, ಟಿವಿಕೆ ಪಕ್ಷ ಸಂಸ್ಥಾಪಕ

ದೇಗುಲ ಭದ್ರತಾ ಸಿಬ್ಬಂದಿ ಅಜಿತ್ ಕುಮಾರ್ ಲಾಕಪ್‌ಡೆತ್ ತನಿಖೆ ಸಿಬಿಐಗೆ ವರ್ಗಾಯಿಸಿದ್ದು ಸರಿಯಲ್ಲ. ಬಿಜೆಪಿ ಸರಕಾರದ ಹಿಂದೆ ಡಿಎಂಕೆ ಸರಕಾರ ಆಶ್ರಯ ಪಡೆದಿದೆ. ಸಿಎಂ ಎಂ.ಕೆ.ಸ್ಟಾಲಿನ್ 4 ವರ್ಷದ ಆಡಳಿತದಲ್ಲಿ ಸರಣಿ ಲಾಕಪ್ ಡೆತ್ ಸಂಭವಿಸಿ 24 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಮಿ. ಸಿಎಂ, ಆ 24 ಕುಟುಂಬಗಳ 'ಕ್ಷಮೆ' ಕೇಳಿದ್ದೀರಾ? ಎಲ್ಲರಿಗೂ ಪರಿಹಾರ ನೀಡಿದ್ದೀರಾ?

ಕ್ಯಾಲಿಫೋರ್ನಿಯ: 'ಬಿಕೆಐ' ಬಟಾಲಾ ಸೆರೆ

ಕ್ಯಾಲಿಫೋರ್ನಿಯ: ಪಾಕಿಸ್ತಾನದ ಗುಪ್ತಚರ ಸಂಸ್ಥೆ 'ಐಎಸ್‌ಐ' ಜತೆ ಸಂಪರ್ಕ ಹೊಂದಿರುವ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ (ಬಿಕೆಐ) ಸಂಘಟನೆ ಜತೆ ನಂಟಿರುವ, ಭಾರತದ ಮೋಸ್ಟ್ ವಾಂಟೆಡ್ ಪವಿತ್ತರ್ ಸಿಂಗ್ ಬಟಾಲಾನನ್ನು ಅಮೆರಿಕದ ಫೆಡರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್(ಎಫ್‌ಬಿಐ) ಕ್ಯಾಲಿಫೋರ್ನಿಯದಲ್ಲಿ ಬಂಧಿಸಿದೆ. ಬಟಾಲಾ ಜತೆಗೆ ಏಳು ಮಂದಿಯನ್ನೂ ಬಂಧಿಸಲಾಗಿದೆ.

ಪವಿತ್ತರ್ ಸಿಂಗ್ ಬಟಾಲಾ

ತಲೆಮರೆಸಿಕೊಂಡಿದ್ದ ಭಾರತದ ಮೋಸ್ಟ್ ವಾಂಟೆಡ್ ಬಂಧಿಸಿದ ಎಫ್‌ಬಿಐ

ಅಪಹರಣ, ಸಾಕ್ಷಿ ಬೆದರಿಕೆ, ಬಂದೂಕಿಂದ ಹಲ್ಲೆ, ಭಯೋತ್ಪಾದನೆ ಆರೋಪ

ದಿಲ್‌ಪ್ರೀತ್ ಸಿಂಗ್, ಅರ್ಶ್‌ಪ್ರೀತ್ ಸಿಂಗ್, ಅಮೃತ್ಪಾಲ್ ಸಿಂಗ್, ವಿಶಾಲ್, ಗುರ್ತಾಜ್ ಸಿಂಗ್, ಮನ್‌ಪ್ರೀತ್ ರಾಂಧವಾ ಮತ್ತು ಸರಬ್ಜಿತ್ ಸಿಂಗ್ ಬಂಧನಕ್ಕೊಳಗಾದ ಇತರರು. 'ಬಿಕೆಐ' ಸದಸ್ಯರ ಬಂಧನ ಕಾರ್ಯಾಚರಣೆ ವೇಳೆ ಭಾರೀ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳು ವಶವಾಗಿವೆ. 5 ಹ್ಯಾಂಡ್‌ಗನ್‌ಗಳು, ಒಂದು ರೈಫಲ್, ನೂರಾರು ಸುತ್ತು ಗುಂಡುಗಳು, ಮ್ಯಾಗಜಿನ್‌ಗಳು ಮತ್ತು 15,000 ಡಾಲರ್‌ಗೂ ಹೆಚ್ಚಿನ ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಫ್‌ಬಿಐ ಮೂಲಗಳು ತಿಳಿಸಿವೆ.

ಭಯೋತ್ಪಾದನೆ, ಅಪರಾಧಿಕ ಸಂಚು, ವ್ಯಕ್ತಿಗಳ ಅಪಹರಿಸಿ ಸೆರೆಯಲ್ಲಿಡುವುದು, ಚಿತ್ರಹಿಂಸೆ, ಸಾಕ್ಷಿಗಳಿಗೆ ಬೆದರಿಕೆ, ಬಂದೂಕಿನಿಂದ ಹಲ್ಲೆ ಸೇರಿದಂತೆ ಹಲವು ಅಪರಾಧ ಕೃತ್ಯಗಳನ್ನು ನಡೆಸಿದ ಆರೋಪಗಳಡಿ 8 ಜನರನ್ನು ಬಂಧಿಸಿ ಸ್ಯಾನ್‌ಜೋಕ್ವಿನ್ ಕೌಂಟಿ ಜೈಲಿನಲ್ಲಿರಿಸಲಾಗಿದೆ. ಭಾರತದಲ್ಲಿನ ನಡೆದ ಹಲವು ಅಪರಾಧ ಕೃತ್ಯಗಳಲ್ಲಿ ಬೇಕಾಗಿರುವ ಬಿಕೆ ಐ ಸದಸ್ಯ ಬಟಾಲಾನನ್ನು ಭಾರತಕ್ಕೆ ಹಸ್ತಾಂತರಿಸುವಂತೆ ಕೋರಲಾಗಿದೆ. ಈ ಸಂಬಂಧ ಭಾರತದ ತನಿಖಾ ಸಂಸ್ಥೆಗಳು ಎಫ್‌ಬಿಐ ಸೇರಿದಂತೆ ಅಮೆರಿಕದ ವಿವಿಧ ತನಿಖಾ ಸಂಸ್ಥೆಗಳ ಅಧಿಕಾರಿಗಳ ಜತೆ ಸಂಪರ್ಕದಲ್ಲಿದ್ದಾರೆ ಎಂದು ವರದಿಯಾಗಿದೆ.

ಇಂಟರ್‌ಪೋಲ್ ರೆಡ್ ಕಾರ್ನರ್ ನೋಟಿಸ್

ಭಾರತದ 'ರಾಷ್ಟ್ರೀಯ ತನಿಖಾ ಸಂಸ್ಥೆ' (ಎನ್‌ಐಎ) ಜೂನ್‌ನಲ್ಲಿ ಸಲ್ಲಿಸಿದ ಆರೋಪಪಟ್ಟಿಯಲ್ಲಿ ಪವಿತ್ತರ್ ಸಿಂಗ್ ಬಟಾಲಾ ಹೆಸರಿದೆ. ಬಟಾಲಾ ವಿರುದ್ಧ ಈ ಮೊದಲೇ ಇಂಟರ್‌ಪೋಲ್ ರೆಡ್ ಕಾರ್ನರ್ ನೋಟಿಸ್ ಹೊರಡಿಸಿತ್ತು. ಪಂಜಾಬ್ ಮೂಲದ ದರೋಡೆಕೋರರಿಗೆ ಮತ್ತು ಬಟಾಲಾ ಗ್ಯಾಂಗ್‌ಗೆ ಬಂದೂಕು ಪೂರೈಸಿದ ಆರೋಪ ಜತೀಂದರ್ ಜೋತಿ ಮೇಲಿದೆ. ಬಿಕೆಐ ಸದಸ್ಯ, ಭಯೋತ್ಪಾದಕ ಲಖ್ಬೀರ್ ಲಾಂಡಾ ಮತ್ತು ಜತೀಂದರ್ ಜೋತಿ ಮತ್ತು ಪವಿತ್ತರ್ ಸಿಂಗ್ ಬಟಾಲಾ ಹೆಸರನ್ನು ದೋಷಾರೋಪ ಪಟ್ಟಿಯಲ್ಲಿ ಸೇರಿಸಲಾಗಿದೆ.

ಲೈಂಗಿಕ ಕಿರುಕುಳ: ಬೆಂಕಿ ಹಚ್ಚಿಕೊಂಡ ವಿದ್ಯಾರ್ಥಿನಿ

ಭುವನೇಶ್ವರ: ಒಡಿಶಾದ ಬಾಲಸೋರ್‌ನ ಫಕೀರ್ ಮೋಹನ್ ಸ್ವಾಯತ್ತ ಕಾಲೇಜಿನಲ್ಲಿ ಬಿಇಡಿ ವಿಭಾಗದ ಮುಖ್ಯಸ್ಥ (ಎಚ್‌ಒಡಿ) ಲೈಂಗಿಕ ಸುಖಕ್ಕೆ ಸಹಕರಿಸುವಂತೆ ನಿರಂತರ ಲೈಂಗಿಕ ಕಿರುಕುಳ ನೀಡಿದ್ದರಿಂದ ನೊಂದಿದ್ದ ವಿದ್ಯಾರ್ಥಿನಿಯೊಬ್ಬಳು ಕಾಲೇಜು ಆವರಣದಲ್ಲೇ ಶನಿವಾರ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾಳೆ.

ಲೈಂಗಿಕ ಸಂಪರ್ಕಕ್ಕೆ ಒಪ್ಪದಿದ್ದರೆ ಶೈಕ್ಷಣಿಕ ಭವಿಷ್ಯ ಹಾಳುಮಾಡುವುದಾಗಿ ಎಚ್‌ಒಡಿ ಬೆದರಿಕೆ ಹಾಕಿದ್ದ. ಈ ಬಗ್ಗೆ ಕಾಲೇಜು ಆಡಳಿತ ಮಂಡಳಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ ಎಂದು ಹತಾಶೆಗೊಳಗಾದ ವಿದ್ಯಾರ್ಥಿನಿ ಪ್ರಾಂಶುಪಾಲರ ಕೊಠಡಿ ಮುಂದೆಯೇ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾಳೆ.

ವಿದ್ಯಾರ್ಥಿನಿಗೆ ಶೇ.95ರಷ್ಟು ಸುಟ್ಟ ಗಾಯಗಳಾಗಿವೆ. ಆಕೆಯನ್ನು ರಕ್ಷಿಸಲು ಯತ್ನಿಸಿದ ವಿದ್ಯಾರ್ಥಿನಿಗೂ ಬೆಂಕಿ ತಗಲಿ, ಆಕೆಯ ದೇಹದ ಶೇ.70ರಷ್ಟು ಭಾಗಕ್ಕೆ ಸುಟ್ಟ ಗಾಯಗಳಾಗಿವೆ. ಇಬ್ಬರನ್ನೂ ಭುವನೇಶ್ವರದ 'ಏಮ್ಸ್' ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಲೈಂಗಿಕ ಕಿರುಕುಳ, ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಿಸಿದ ಒಡಿಶಾ ಪೊಲೀಸರು, ಆರೋಪಿ ಎಚ್‌ಒಡಿ ಸಮೀರ್ ಕುಮಾರ್ ಸಾಹೋ ಹಾಗೂ ಪ್ರಾಂಶುಪಾಲ ದೀಲಿಪ್ ಕುಮಾರ್ ಘೋಷ್‌ನನ್ನು ಬಂಧಿಸಿದ್ದಾರೆ. ಇದರ ಬೆನ್ನಲ್ಲೇ ಪ್ರಾಂಶುಪಾಲನನ್ನು ಉನ್ನತ ಶಿಕ್ಷಣ ಇಲಾಖೆ ಅಮಾನತುಗೊಳಿಸಿದೆ.

ಇಬ್ಬರ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳುವುದಾಗಿ ರಾಜ್ಯದ ಉನ್ನತ ಶಿಕ್ಷಣ ಸಚಿವ ಸೂರ್ಯಬಂಶಿ ಸೂರಜ್ ಹೇಳಿದ್ದಾರೆ.

ವಿದ್ಯಾರ್ಥಿನಿ ಸಮೀರ್ ಕುಮಾರ್ ವಿರುದ್ಧ ಜು.1ರಂದು ಕಾಲೇಜಿನ ಆಂತರಿಕ ದೂರು ಸಮಿತಿಗೆ ದೂರು ನೀಡಿದ್ದಳು. ವಾರದಲ್ಲಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ್ದ ಸಮಿತಿ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಸಮಿತಿ ನಿಷ್ಕ್ರಿಯತೆ ಖಂಡಿಸಿ ಕೆಲ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ವಿದ್ಯಾರ್ಥಿನಿಗೆ ನ್ಯಾಯ ಕೊಡಿಸುವಂತೆ ಆಗ್ರಹಿಸಿದ್ದರು.

ಪಾಕ್ ಅಧ್ಯಕ್ಷ ಹುದ್ದೆಯತ್ತ ಮುನೀರ್ ವಾರೆನೋಟ?

ಇಸ್ಲಾಮಾಬಾದ್: ಪಾಕಿಸ್ತಾನದ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿಯನ್ನು ಪದಚ್ಯುತಗೊಳಿಸಿ ತಾವು ಆ ಹುದ್ದೆಗೇರುವುದಕ್ಕೆ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಹುನ್ನಾರ ನಡೆಸಿದ್ದಾರೆ ಎಂಬ ಸಂದೇಶಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಜರ್ದಾರಿ ಪದಚ್ಯುತಿಗೆ ಅಸೀಮ್ ಸಂಚು: ಜಾಲತಾಣ ಚರ್ಚೆ

ಇತ್ತೀಚೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರಿಂದ ಆಹ್ವಾನಿತರಾಗಿ ಶ್ವೇತ ಭವನದಲ್ಲಿ ವಿಶೇಷ ಔತಣ ಕೂಟದ ಗೌರವ ಪಡೆದು ಪಾಕ್‌ಗೆ ಮರಳಿದ ಬಳಿಕ ಈ ಚರ್ಚೆಗಳು ಜಾಲತಾಣದಲ್ಲಿ ಚಾಲ್ತಿಯಲ್ಲಿವೆ.

ಆದರೆ, ಈ ಸಂದೇಶವನ್ನು ಪ್ರಧಾನಿ ಶೆಹಬಾಜ್ ಶರೀಫ್ ಬಲವಾಗಿ ನಿರಾಕರಿಸಿದಾರೆ. ಇವೆಲ್ಲಾ ವದಂತಿಗಳಷ್ಟೆ. ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್‌ಗೆ ಅಧ್ಯಕ್ಷ ಹುದ್ದೆಯತ್ತ ಆಸಕ್ತಿ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಅಧ್ಯಕ್ಷ ಜರ್ದಾರಿ, ಪ್ರಧಾನಿ ಶರೀಫ್ ಮತ್ತು ಸೇನಾ ಮುಖ್ಯಸ್ಥ ಅಸೀಮ್‌ರನ್ನು ಗುರಿಯಾಗಿಸಿ ಅಪಪ್ರಚಾರ ಮಾಡುತ್ತಿರುವವರು ಯಾರು ಎಂಬುದು ತಿಳಿದಿದೆ. ಅಧ್ಯಕ್ಷರ ರಾಜೀನಾಮೆ ಕೇಳುವ ಅಥವಾ ಅಸೀಮ್ ಅಧ್ಯಕ್ಷಸ್ಥಾನದತ್ತ ಆಕಾಂಕ್ಷಿಯಾಗಿರುವ ಬಗ್ಗೆ ಚರ್ಚೆ ನಡೆದಿಲ್ಲ ಎಂದು ಗೃಹ ಸಚಿವ ಮೋನಿಶ್ ನಖ್ವಿ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ನಕಲಿ ರಸಗೊಬ್ಬರ: ಕಠಿಣ ಕ್ರಮಕ್ಕೆ ಕೇಂದ್ರ ಸೂಚನೆ

ದೆಹಲಿ: ಕಡಿಮೆ ಗುಣಮಟ್ಟದ ರಸಗೊಬ್ಬರಗಳ ವಿರುದ್ಧ ಕಠಿಣ ಕ್ರಮವನ್ನು ತಕ್ಷಣವೇ ಕೈಗೊಳ್ಳುವಂತೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದ್ದಾರೆ.



ರೈತರ ಆದಾಯದಲ್ಲಿ ಸ್ಥಿರತೆಗಾಗಿ ಸರಿಯಾದ ಸಮಯದಲ್ಲಿ ಗುಣಮಟ್ಟದ ರಸಗೊಬ್ಬರಗಳನ್ನು ಕೈಗೆಟುಕುವ ಬೆಲೆಯಲ್ಲಿ ಒದಗಿಸಬೇಕಾಗಿದೆ. ಸೂಕ್ತ ಸ್ಥಳಗಳಲ್ಲಿ, ರಸಗೊಬ್ಬರಗಳ ಸಮರ್ಪಕ ಲಭ್ಯತೆ ಖಚಿತಪಡಿಸುವುದು ರಾಜ್ಯಗಳ ಜವಾಬ್ದಾರಿ. ಕಾಳಸಂತೆ, ಹೆಚ್ಚುವರಿ ದರ ವಸೂಲಿ, ಸಬ್ಸಿಡಿ ದುರುಪಯೋಗ ಮೊದಲಾದ ಚಟುವಟಿಕೆಗಳನ್ನು ಕಟ್ಟುನಿಟ್ಟಾಗಿ ನಿವಾರಿಸ ಬೇಕು. ಅಂಥ ಚಟುವಟಿಕೆಗಳನ್ನು ನಡೆಸುವ ವರ ವಿರುದ್ಧ ತ್ವರಿತವಾಗಿ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಸಚಿವ ಚೌಹಾಣ್ ನಿರ್ದೇಶನ ನೀಡಿದ್ದಾರೆ.

ಮಾದರಿ ಪರೀಕ್ಷೆ ಮೂಲಕ ನಕಲಿ ಮತ್ತು ಕಳಪೆ ರಸಗೊಬ್ಬರಗಳನ್ನು ಮಾರುಕಟ್ಟೆಯಿಂದ ಹೊರಹಾಕಬೇಕು. ಸಾಂಪ್ರದಾಯಿಕ ರಸಗೊಬ್ಬರಗಳ ಜತೆ ನ್ಯಾನೊ-ರಸಗೊಬ್ಬರ ಅಥವಾ ಜೈವಿಕ-ಉತ್ತೇಜಕ ಉತ್ಪನ್ನಗಳನ್ನು ಬಲವಂತವಾಗಿ ಟ್ಯಾಗ್ ಮಾಡುವುದನ್ನು ತಕ್ಷಣ ನಿಲ್ಲಿಸಬೇಕು. ನಕಲಿ ರಸಗೊಬ್ಬರ ತಯಾರಿಕೆ, ಮಾರಾಟಗಾರರ ಪರವಾನಗಿ ರದ್ದು ಮತ್ತು ಎಫ್‌ಐಆರ್ ದಾಖಲು ಸೇರಿದಂತೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಶಿಕ್ಷೆ ಖಚಿತಪಡಿಸಬೇಕು ಎಂದಿದ್ದಾರೆ.

ಸಂಸತ್ ಕಲಾಪ: ಕಾರ್ಯತಂತ್ರ ಚರ್ಚೆಗೆ ನಾಳೆ ಕಾಂಗ್ರೆಸ್ ಸಭೆ

ದೆಹಲಿ: ಇದೇ ಜು.21ರಂದು ಆರಂಭಗೊಳ್ಳಲಿರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಪಕ್ಷದ ಕಾರ್ಯತಂತ್ರದ ಕುರಿತು ಚರ್ಚಿಸಿ ಅಂತಿಮಗೊಳಿಸಲು ಕಾಂಗ್ರೆಸ್ ಸಂಸದರು ಮತ್ತು ಪಕ್ಷದ ಹಿರಿಯ ನಾಯಕರ ಸಭೆಯನ್ನು ಸಂಸದೀಯ ಪಕ್ಷದ ನಾಯಕಿ ಸೋನಿಯಾ ಗಾಂಧಿ ಮಂಗಳವಾರ ಹಮ್ಮಿಕೊಂಡಿದ್ದಾರೆ.

ಸೋನಿಯಾ ಗಾಂಧಿ ಅವರ ನಂ. 10, ಜನಪಥ್ ರಸ್ತೆಯ ನಿವಾಸದಲ್ಲಿ ಮಂಗಳವಾರ ಬೆಳಗ್ಗೆ ಸಭೆ ನಡೆಯಲಿದ್ದು, ಸೋನಿಯಾ ಅವರು ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಸಂಸದೆ ಪ್ರಿಯಾಂಕಾ ಗಾಂಧಿ ಸೇರಿದಂತೆ ಸಂಸದರು, ಹಲವು ಪ್ರಮುಖ ನಾಯಕರು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಪಕ್ಷದ ಮೂಲಗಳು ಭಾನುವಾರ ತಿಳಿಸಿವೆ. ಅಧಿವೇಶನದಲ್ಲಿ ಹಲವಾರು ವಿಷಯಗಳ ಕುರಿತು ಎನ್‌ಡಿಎ ಸರಕಾರ ಮತ್ತು ಇಂಡಿ ಒಕ್ಕೂಟದ ಪ್ರತಿಪಕ್ಷಗಳ ನಡುವೆ ಸಂಘರ್ಷ ನಡೆಯುವ ನಿರೀಕ್ಷೆಯಿದೆ. ಮುಖ್ಯವಾಗಿ ಬಿಹಾರ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ, ಪಹಲ್ಗಾಮ್ ದಾಳಿ ಬಳಿಕ ನಡೆದ ಆಪರೇಷನ್ ಸಿಂದೂರ ಸೇನಾ ಕಾರ್ಯಾಚರಣೆ, ನಂತರ ವಿವಿಧ ದೇಶಗಳಿಗೆ ಸರ್ವಪಕ್ಷ ನಿಯೋಗ ಕಳುಹಿಸಿ ಕೊಟ್ಟಿದ್ದು, ನೆರೆಯ ದೇಶಗಳ ಜತೆಗಿನ ರಾಜತಾಂತ್ರಿಕ ಸಂಪರ್ಕ ಮೊದಲಾದ ವಿಷಯಗಳ ಬಗ್ಗೆ ಚರ್ಚೆ ನಡೆಸಬೇಕೆಂದು ಕಾಂಗ್ರೆಸ್ ಒತ್ತಾಯಿಸುತ್ತಿದೆ.

ಜು.21ರಿಂದ ಆ.21ರವರೆಗೆ

ಅಧಿವೇಶನ ಜು.21ರಂದು ಪ್ರಾರಂಭವಾಗಿ ಆ.21ರವರೆಗೆ ನಡೆಯಲಿದೆ ಎಂದು ಕೇಂದ್ರ ಸರಕಾರದ ಸಂಸದೀಯ ವ್ಯವಹಾರಗಳ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ. ವಾಡಿಕೆಯಂತೆ ಅಧಿವೇಶನದ ಕಲಾಪ ಆ.12ರಂದೇ ಕೊನೆಗೊಳ್ಳಬೇಕಿತ್ತು. ಆದರೆ, ಈ ಬಾರಿ ಒಂದು ವಾರ ಹೆಚ್ಚುವರಿ ಕಲಾಪ ನಡೆಸಲು ನಿರ್ಧರಿಸಲಾಗಿದೆ. ಪರಮಾಣು ಇಂಧನ ಕ್ಷೇತ್ರದಲ್ಲಿ ಖಾಸಗಿ ವಲಯದ ಪ್ರವೇಶವನ್ನು ಸುಗಮಗೊಳಿಸುವ ಕಾನೂನು ಸೇರಿದಂತೆ ಪ್ರಮುಖ ಶಾಸನಗಳನ್ನು ತರುವ ಸರ್ಕಾರದ ಯೋಜನೆಗಳ ಮಧ್ಯೆ ಅಧಿವೇಶನವನ್ನು ಒಂದು ವಾರ ವಿಸ್ತರಿಸಲಾಗಿದೆ.

ಕೋಟಾ ಶ್ರೀನಿವಾಸ ರಾವ್ ತೆರೆಮರೆಗೆ

ಪದ್ಮಶ್ರೀ, ನಂದಿ ಪ್ರಶಸ್ತಿ ಪುರಸ್ಕೃತ ಕಲಾವಿದ: ಖಳ ನಟನಾಗಿ ಜನಪ್ರಿಯ

ಹೈದರಾಬಾದ್: ತೆಲುಗು, ಕನ್ನಡ, ಮಲಯಾಳಂ, ತಮಿಳು, ಹಿಂದಿ ಸೇರಿದಂತೆ ಹಲವಾರು ಭಾಷೆಗಳಲ್ಲಿನ 750ಕ್ಕೂ ಅಧಿಕ ಚಲನಚಿತ್ರಗಳಲ್ಲಿ ನಟಿಸಿದ್ದ ಹಿರಿಯ ಕಲಾವಿದ ಕೋಟಾ ಶ್ರೀನಿವಾಸ ರಾವ್(83) ಅನಾರೋಗ್ಯದ ಕಾರಣ ಹೈದರಾಬಾದ್ ನಗರದ ಜ್ಯುಬಿಲಿ ಹಿಲ್ಸ್ ಪ್ರದೇಶದಲ್ಲಿನ ಫಿಲಂನಗರ್‌ನಲ್ಲಿನ ಸ್ವಗೃಹದಲ್ಲಿ ಭಾನುವಾರ ಬೆಳಗ್ಗೆ ಕೊನೆಯುಸಿರೆಳೆದರು.

ಎರಡು ದಿನಗಳ ಹಿಂದೆಯಷ್ಟೇ (ಜುಲೈ 10) ಕೋಟಾ ಅವರು ಜನ್ಮದಿನ ಆಚರಿಸಿಕೊಂಡಿದ್ದರು. ಅವರಿಗೆ 2015ರಲ್ಲಿ ಪದ್ಮಶ್ರೀ ಮತ್ತು ಆಂಧ್ರಪ್ರದೇಶದ ಪ್ರತಿಷ್ಠಿತ ನಂದಿ ಪ್ರಶಸ್ತಿಗಳು ಸಂದಿವೆ.

ಅವಿಭಜಿತ ಆಂಧ್ರಪ್ರದೇಶದ ಕೃಷ್ಣ ಜಿಲ್ಲೆಯ ಕಂಕಿಪದು ಪ್ರದೇಶದಲ್ಲಿ 1942ರ ಜುಲೈ 10ರಂದು ಜನಿಸಿದ ಕೋಟಾ ಶ್ರೀನಿವಾಸ ರಾವ್, ರಂಗಭೂಮಿಯಲ್ಲಿ ಮೊದಲಿಗೆ ಬಣ್ಣ ಹಚ್ಚಿದ್ದರು. ನಂತರದಲ್ಲಿ 1978ರಲ್ಲಿ ಮೊದಲಿಗೆ 'ಪ್ರಣಾಮ್ ಖರೀಧು' ತೆಲುಗು ಸಿನಿಮಾದಲ್ಲಿ ನಟಿಸುವ ಮೂಲಕ ಚಲನಚಿತ್ರ ರಂಗಕ್ಕೆ ಪದಾರ್ಪಣೆ ಮಾಡಿದರು.

ಶ್ರೇಷ್ಠ ನಟನೆಯ ಮೂಲಕ ಜನರ ಅಭಿಮಾನ ಗಳಿಸಿದ್ದ ಕೋಟಾ, ಖಳನಾಯಕನ ಪಾತ್ರಗಳಲ್ಲಿಯೂ ಗಮನ ಸೆಳೆದಿದ್ದರು. ಹಾಸ್ಯನಟನೆ, ಪೋಷಕ ಪಾತ್ರಧಾರಿ, ವೈವಿಧ್ಯಮಯ ಪಾತ್ರಗಳಲ್ಲಿ ಅದ್ಭುತ ನಟನಾ ಕೌಶಲ ಪ್ರದರ್ಶಿಸಿದ್ದರು.

ಆಹಾ ನಾ ಪೆಲ್ಲಂಟ, ಪ್ರತಿಘಟನಾ, ಕೈದಿ ನಂಬರ್ 786, ಶಿವ, ಯಮಲೀಲಾ, ಸನ್ ಆಫ್ ಸತ್ಯಮೂರ್ತಿ ಮೊದಲಾದವು ಕೋಟಾ ಶ್ರೀನಿವಾಸ ರಾವ್ ನಟನೆಯ ಸಿನಿಮಾಗಳು. ರಾವ್ ಅವರ ನಟನೆಯ ಕಟ್ಟಕಡೆಯ ಸಿನಿಮಾ 'ಹರಿ ಹರ ವೀರ ಮಲ್ಲು-ಭಾಗ 1' ಇನ್ನಷ್ಟೇ ಬಿಡುಗಡೆಗೊಳ್ಳಬೇಕಿದೆ.

ಪತ್ನಿ ರುಕ್ಮಿಣಿ ರಾವ್, ಇಬ್ಬರು ಪುತ್ರಿಯರು ಮತ್ತು ಒಬ್ಬ ಪುತ್ರ ಅವರನ್ನೊಳಗೊಂಡ ಕುಟುಂಬ ರಾವ್ ಅವರದ್ದು. ಆದರೆ, 2010ರಲ್ಲಿ ಪುತ್ರ ಕೋಟಾ ವೆಂಕಟ ಆಂಜನೇಯ ಪ್ರಸಾದ್ ರಸ್ತೆ ಅಪಘಾತದಲ್ಲಿ ಸಾವಿಗೀಡಾದರು.

ಬಿಜೆಪಿ ಮಾಜಿ ಶಾಸಕ

ಕೋಟಾ ಶ್ರೀನಿವಾಸ ರಾವ್ ರಾಜಕೀಯದಲ್ಲಿಯೂ ಕಾಣಿಸಿಕೊಂಡಿದ್ದರು. ಬಿಜೆಪಿ ಅಭ್ಯರ್ಥಿಯಾಗಿ ವಿಜಯವಾಡ ಪೂರ್ವ ವಿಧಾನಸಭೆ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿ 1999-2004ರ ಅವಧಿಯಲ್ಲಿ ಶಾಸಕರಾಗಿದ್ದರು. ತೆಲುಗು ಚಿತ್ರರಂಗದ ಕಲಾವಿದರ ಸಮೂಹ, ಆಂಧ್ರಪ್ರದೇಶ ಮತ್ತು ತೆಲಂಗಾಣದ ರಾಜಕೀಯ ನಾಯಕರು ಹಿರಿಯ ನಟನ ನಿರ್ಗಮನಕ್ಕೆ ಕಂಬನಿ ಮಿಡಿದಿದ್ದಾರೆ.

ಕೆಬಿಜಿ ನೆನಪು

ಪತ್ರಕರ್ತ ಕೆ.ಬಿ. ಗಣಪತಿ ಮೈಸೂರು ಭಾಗದಲ್ಲಿ ಪತ್ರಿಕೋದ್ಯಮ, ಪತ್ರಿಕೋದ್ಯೋಗಕ್ಕೆ ಬಲ, ಛಲ ತುಂಬಿದವರು. ಇಲ್ಲಿನ ಪತ್ರಕರ್ತರ ಪಾಲಿಗೆ ಹಿರಿ ತಲೆಮಾರಿನ ಕೊಂಡಿಯಾಗಿದ್ದವರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷರೂ ಆಗಿದ್ದವರು. ಅವರ ಅಂಕಣ ಬರಹ ಮತ್ತು ಪುಸ್ತಕಗಳಲ್ಲಿ ಮೈಸೂರಿನ ಇತಿಹಾಸ ಅಡಗಿತ್ತಲ್ಲದೆ, ಅಭಿವೃದ್ಧಿಯ ಚಿಂತನೆಗಳಿದ್ದವು. ಕೊನೆಯ ಉಸಿರಿನ ತನಕವೂ ಪತ್ರಕರ್ತರಾಗಿ ಉಳಿದ ಅವರು ಸುಂದರ ಮೈಸೂರಿನ ಅಳಿವು-ಉಳಿವಿನ ಪರಿಕಲ್ಪನೆಯ ರಾಯಭಾರಿಯಂತೆ ಬಾಳಿದರು.

ಮೈಸೂರು ಮಾಧ್ಯಮ ಕ್ಷೇತ್ರದ ಸ್ಟಾರ್ ಅಸ್ತಂಗತ

ಲೋಕೇಶ್ ಬಾಬು

ಮೈಸೂರು ಮತ್ತು ಅದರ ಸುತ್ತಮುತ್ತಲಿನ ಜಿಲ್ಲೆಯ ಜನತೆಗೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರು' ದಿನಪತ್ರಿಕೆಗಳು ಚಿರಪರಿಚಿತ. ಹಾಗೆಯೇ ಇದರ ಸಂಪಾದಕ ಕೆ.ಬಿ. ಗಣಪತಿ ಅವರ ಹೆಸರು ಕೂಡ. ಕಳೆದ ಐದು ದಶಕಗಳಿಂದ ಈ ಪತ್ರಿಕೆಗಳು ಇಲ್ಲಿನ ಜನತೆಯ ಬದುಕಿನ ಭಾಗವಾಗಿವೆ. ಸಂಸ್ಥಾಪಕ ಸಂಪಾದಕರಾಗಿ, ಮಾಲೀಕರಾಗಿ ಇವೆರಡೂ ಪತ್ರಿಕೆಗಳನ್ನು ಆರಂಭಿಸಿ, ಬೆಳೆಸಿ ಜನಮಾನಸದಲ್ಲಿ ಉಳಿಯುವಂತೆ ಮಾಡಿದ ಕೀರ್ತಿ ಕೆ.ಬಿ. ಗಣಪತಿ (ಕೆ.ಬಿ.ಜಿ) ಅವರಿಗೆ ಸಲ್ಲುತ್ತದೆ.

ಭಾನುವಾರ ಬೆಳಿಗ್ಗೆ ಇಹಲೋಕ ತ್ಯಜಿಸಿದ ಮೂಲತಃ ಕೊಡಗು ಜಿಲ್ಲೆಯ ಕಲ್ಯಾಟಂಡ ಬಿ. ಗಣಪತಿ (86) ಹುಟ್ಟಿದ್ದು 1940ನೇ ಇಸವಿ ಜನವರಿ 6ನೇ ತಾರೀಕು. ಕೆ.ಎ. ಬೋಪಯ್ಯ ಹಂದ್ ಮತ್ತು ಕೆ.ಬಿ. ಮುತ್ತವ್ವ (ಬೇಬಿ) ದಂಪತಿಗೆ ಜನಿಸಿದ ಕೆ.ಬಿ. ಗಣಪತಿ ಅವರು ನಾಲ್ವರು ಒಡಹುಟ್ಟಿದವರಲ್ಲಿ ಎರಡನೆಯವರು. ಅವರ ತಂದೆ ಕೊಡವ ಕುಲದ ಕಲ್ಯಾತಂಡ ಕುಟುಂಬಕ್ಕೆ ಸೇರಿದ ಶಾಲಾ ಶಿಕ್ಷಕರಾಗಿದ್ದರು.

ಬಿ.ಎ, ಬಿ.ಎಲ್ ಉತ್ತೀರ್ಣರಾದ ಬಳಿಕ 1961ರಿಂದ 1965ರ ತನಕ ಬೆಂಗಳೂರಿನಲ್ಲಿ ವಕೀಲರಾಗಿ ಕಾನೂನು ಅಭ್ಯಾಸ ಮಾಡಿದರು. ಆದರೆ ಅವರ ಒಲವು, ತುಡಿತ ಪತ್ರಿಕೋದ್ಯಮದತ್ತಲೇ ಇತ್ತು. ವಕೀಲಿ ವೃತ್ತಿ ಬಿಟ್ಟು ಮುಂಬಯಿಗೆ ತೆರಳಿ ಭಾರತೀಯ ವಿದ್ಯಾಭವನದಲ್ಲಿ ಪತ್ರಿಕೋದ್ಯಮ ಡಿಪ್ಲೊಮಾ ಪಡೆದ ನಂತರ ಅವರು ಸೇರಿದ್ದು 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯನ್ನು. ಪತ್ರಿಕೋದ್ಯಮದ ದಿಗ್ಗಜ ಟಿ.ಜೆ.ಎಸ್. ಜಾರ್ಜ್ ಆಗ ಈ ಪತ್ರಿಕೆಯ ಸಹಾಯಕ ಸಂಪಾದಕರಾಗಿದ್ದರು. 1970ರವರೆಗೆ ಫ್ರೀ ಪ್ರೆಸ್ ಜರ್ನಲ್ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಪತ್ರಕರ್ತರಾಗಿ ದುಡಿದ ಗಣಪತಿ ನಂತರ 1970ರಲ್ಲಿ ಸನ್‌ಬೀಮ್ ಅಡ್ವರ್ಟೈಸಿಂಗ್ ಪುಣೆ ಎಂಬ ತಮ್ಮ ಜಾಹೀರಾತು ಸಂಸ್ಥೆಯನ್ನು ಸ್ಥಾಪಿಸಿದರು.

ಮೈಸೂರಿನ ಸ್ಟಾರ್, ಮಿತ್ರ

ಗಣಪತಿ ಅವರ ಪತ್ನಿ ದೇವಮ್ಮ ಮೈಸೂರಿನಲ್ಲಿ ಸರಕಾರಿ ಕಾಲೇಜಿನ ಉಪನ್ಯಾಸಕಿಯಾಗಿದ್ದರು.ಅವರ ಕುಟುಂಬಸ್ಥರು ಮೈಸೂರಿನಲ್ಲಿ ವಾಸಿಸುತ್ತಿದ್ದರು. ಇದೇ ಕಾರಣಕ್ಕೆ ಮೈಸೂರಿಗೆ ಸ್ಥಳಾಂತರಗೊಂಡರು. ಕನ್ನಡ ನೆಲದಲ್ಲಿಯೇ ಸಂಸ್ಥೆ ಹುಟ್ಟು ಹಾಕಬೇಕೆಂಬ ಹಂಬಲದಿಂದ ಪುಣೆಯಿಂದ ಮೈಸೂರಿಗೆ ಮರಳಿ ಪತ್ರಿಕೆ ಆರಂಭಿಸುವ ದಿಟ್ಟ ನಿರ್ಧಾರ ಕೈಗೊಂಡರು. 1978ರಲ್ಲಿ ಅವರು ದಿವಂಗತ ಸಿ.ಪಿ. ಚಿನ್ನಪ್ಪ ಅವರ ಜೊತೆ ಸೇರಿ ಇಂಗ್ಲಿಷ್‌ನಲ್ಲಿ 'ಸ್ಟಾರ್ ಆಫ್ ಮೈಸೂರು' ಮತ್ತು 1980ರಲ್ಲಿ ಕನ್ನಡದಲ್ಲಿ 'ಮೈಸೂರು ಮಿತ್ರ' ಆರಂಭಿಸುವ ನಿರ್ಧಾರ ಕೈಗೊಂಡರು. ಬಳಿಕ ಎರಡೂ ಪತ್ರಿಕೆಗಳ ಸಂಪಾದಕ ಮತ್ತು ಪ್ರಕಾಶಕರಾಗಿ ಮಾಧ್ಯಮ ಕ್ಷೇತ್ರದಲ್ಲಿ ಅಳಿಸಲಾಗದ ಛಾಪನ್ನೊತ್ತಿದರು.

ಕೆಬಿಜಿ ಅವರು ನಡೆದು ಬಂದ ಹಾದಿ ಸುಲಭದಲ್ಲಾಗಿರಲಿಲ್ಲ. ಆರಂಭದಲ್ಲಿ ಹಲವು ಸವಾಲು, ಕಷ್ಟ-ನಷ್ಟ ಅನುಭವಿಸಿ, ಅದನ್ನು ಮೆಟ್ಟಿ ನಿಂತು ಸ್ಥಳೀಯ ಪತ್ರಿಕೆಯ ಮೂಲಕ ಪ್ರಭಾವಿ ಓದುಗರ ವಲಯವನ್ನು ಬಹುವಾಗಿ ವಿಸ್ತರಿಸಬಹುದು ಎಂಬುದನ್ನು ಅವರು ತೋರಿಸಿಕೊಟ್ಟರು. ವಿಶೇಷವೆಂದರೆ 'ಮೈಸೂರು ಮಿತ್ರ'ದ ಜೊತೆಗೇ ಇಂಗ್ಲಿಷಿನ ಅದರಲ್ಲೂ ಸಂಜೆ ಓದುಗರನ್ನು ಆಶ್ರಯಿಸಿ ಇಂಗ್ಲಿಷ್ ದೈನಿಕವನ್ನು ಇಡೀ ಭಾರತೀಯ ಪತ್ರಿಕೋದ್ಯಮವೇ ನಿಬ್ಬೆರಗಾಗುವಂತೆ ಯಶಸ್ವಿಯಾಗಿ ರೂಪಿಸಿದ್ದು ಗಣಪತಿಯವರ ಅದ್ವಿತೀಯ ಸಾಧನೆ.

ಹುಟ್ಟಿದ್ದು ಕೊಡಗಿನಲ್ಲೇ ಆದರೂ, ತಮ್ಮ ತಾಯ್ನೆಲದಷ್ಟೇ ಮೈಸೂರನ್ನೂ ಅಪಾರವಾಗಿ ಪ್ರೀತಿಸಿ, ಇಲ್ಲಿಯೇ ಬದುಕು ಕಂಡುಕೊಂಡ ಗಣಪತಿ ಅವರು, ಮೈಸೂರಿನ ಅಭಿವೃದ್ಧಿ, ಮೈಸೂರು ಪರಂಪರೆ ಉಳಿಸುವ ಬಗ್ಗೆ ಒಬ್ಬ ಹೋರಾಟಗಾರನಂತೆ ಬೆಂಬಲ ನೀಡಿದರು. ತಮ್ಮ ಅಂಕಣಗಳ ಮೂಲಕ ಸದಾ ಕಾಳಜಿ ವ್ಯಕ್ತಪಡಿಸುತ್ತಿದ್ದರು. ಸಮಾನ ಮನಸ್ಕರೊಡಗೂಡಿ ಕ್ರಿಯಾಶೀಲ ಕಾರ್ಯಕ್ರಮಕ್ಕೆ ನಾಂದಿ ಹಾಡಿದ್ದರು. ಕೆ.ಬಿ.ಜಿ ಅವರ ಪುಸ್ತಕ ಹಾಗೂ ಬರಹಗಳಲ್ಲಿ ಮೈಸೂರು ಇತಿಹಾಸ ಅಡಗಿತ್ತಲ್ಲದೆ, ಅಭಿವೃದ್ಧಿಯ ಚಿಂತನೆಗಳಿದ್ದವು. ಸುಂದರ ಮೈಸೂರಿನ ಅಳಿವು-ಉಳಿವಿನ ಪರಿಕಲ್ಪನೆಯ ರಾಯಭಾರಿಯಂತೆ ತಮ್ಮ ನಿಲುವು ಹೊಂದಿದ್ದರು.

ಜನಪ್ರಿಯ ಅಂಕಣಕಾರ

'ಸ್ಟಾರ್ ಆಫ್ ಮೈಸೂರ್ 'ನಲ್ಲಿ ಅವರ ಅಂಕಣ 'ಅಬ್ರಕದಬ್ರ' ಹಲವು ತೀರಾ ಇತ್ತೀಚಿನವರೆಗೂ ಪ್ರಕಟವಾಗುತ್ತಿತ್ತು. 'ಹೋಕಸ್-ಫೋಕಸ್' ಎಂಬ ಇನ್ನೊಂದು ಅಂಕಣವನ್ನೂ ಬರೆಯುತ್ತಿದ್ದರು. ಇದು ಪತ್ರಿಕೆಯನ್ನು ಜನಪ್ರಿಯಗೊಳಿಸಲು ಸಹಾಯ ಮಾಡಿತು. ಈ ಅಂಕಣಗಳು ಮಾಹಿತಿ ಪೂರ್ಣ ಮಾತ್ರವಲ್ಲ ಜ್ಞಾನ ಮತ್ತು ತಿಳಿವಳಿಕೆ ನೀಡುವಂತಿದ್ದವು. ಸುಮಾರು 44 ವರ್ಷಗಳ ಕಾಲ ತಮ್ಮ ಅಂಕಣ ಬರೆಯುವುದನ್ನು ಮುಂದುವರೆಸಿದ್ದರು.

ಮೈಸೂರು ಮತ್ತು ಕರ್ನಾಟಕದ ಯುವ ಪತ್ರಕರ್ತರನ್ನು ಪೋಷಿಸುವಲ್ಲಿ ಮತ್ತು ಮಾರ್ಗದರ್ಶನ ನೀಡುವಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದಾರೆ. ಜತೆಗೆ ಮೈಸೂರಿನ ನಾನಾ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ದುಡಿದಿದ್ದಾರೆ. ಮೈಸೂರು ಕೇಂದ್ರ ಭಾರತೀಯ ವಿದ್ಯಾಭವನದ ಉಪಾಧ್ಯಕ್ಷರಾಗಿ, 1993 ಮತ್ತು 1995ರ ನಡುವೆ ಕರ್ನಾಟಕ ಪತ್ರಿಕಾ ಅಕಾಡೆಮಿ ಸದಸ್ಯರಾಗಿ, ಕಾವೇರಿ ಕಾಲೇಜಿನ ಉಪಾಧ್ಯಕ್ಷರಾಗಿ, ಮೈಸೂರಿನ ಕೊಡವ ಸಮಾಜ ಮಾಜಿ ಉಪಾಧ್ಯಕ್ಷರಾಗಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದಾರೆ. ತಮ್ಮ ಸಂಸ್ಥೆಯ ಮೂಲಕ ಹಲವು ಸಂಘ ಸಂಸ್ಥೆಗಳ, ನೊಂದವರ ನೆರವಿಗೆ ನಿಂತಿದ್ದಾರೆ. ಹಲವು ವಿದೇಶ ಪ್ರವಾಸಗಳ ಮೂಲಕವೂ ಅಪಾರ ಜ್ಞಾನಸಂಪತ್ತನ್ನು ಪಡೆದಿರುವ ಅವರು, ಆಗ್ನೇಯ ಏಷ್ಯಾ, ಅಮೆರಿಕ, ಇಸ್ರೇಲ್, ಈಜಿಪ್ಟ್, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾಗಳಿಗೆ ಭೇಟಿ ನೀಡಿದ್ದಾರೆ. ಈ ಕುರಿತು ಕೃತಿಯನ್ನೂ ಬರೆದಿದ್ದಾರೆ.

ಪತ್ರಕರ್ತರ ಕಾರ್ಖಾನೆ

ಕೆಬಿಜಿ ಅವರ ಗರಡಿಯಲ್ಲಿ ಪಳಗಿದ ಅನೇಕ ಪ್ರತಿಭಾವಂತ ಪತ್ರಕರ್ತರು ಇಂದು ರಾಜ್ಯ-ದೇಶದ ಮುಂಚೂಣಿ ಮಾಧ್ಯಮಗಳಲ್ಲಿ ಗುರುತಿಸಿಕೊಂಡಿದ್ದಾರೆ. ಯಾರಿಗೂ ಅಹಿತವನ್ನು ಬಯಸದ ಕೆ.ಬಿ.ಜಿಯವರದ್ದು ಮೇರು ವ್ಯಕ್ತಿತ್ವ . ಅವರೊಂದಿಗೆ ಹೆಗಲು ಕೊಟ್ಟವರನ್ನು ಅವರು ಗೌರವಿಸುವ ರೀತಿ, ಆಧರಿಸುವ ರೀತಿ ಉದ್ಯೋಗದಾತರಿಗೆ ಮಾದರಿ. ಉದ್ಯಮದಲ್ಲಿ ಕುಟುಂಬದ ವಾತಾವರಣ ಸೃಷ್ಟಿಸಿದ ಅವರು ಸಂಪಾದಕೀಯ, ತಾಂತ್ರಿಕ ವರ್ಗ ಮತ್ತು ಇತರ ಸಿಬ್ಬಂದಿಗಳನ್ನು ನಡೆಸಿಕೊಳ್ಳುವ ರೀತಿ ಅನುಕರಣೀಯವಾಗಿತ್ತು. ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈ. ಲಿಮಿಟೆಡ್‌ನಡಿ ಸುಮಾರು 120 ಉದ್ಯೋಗಿಗಳು ದುಡಿಯುತ್ತಿದ್ದಾರೆ. 300ಕ್ಕೂ ಹೆಚ್ಚು ಜನರಿಗೆ ಅರೆಕಾಲಿಕ ಉದ್ಯೋಗ ದೊರೆತಿದೆ. ಪತ್ರಿಕೋದ್ಯಮದ ಮೇಲಿನ ಉತ್ಸಾಹದಿಂದ, ಗಣಪತಿ ತಮ್ಮ ಎರಡು ಪತ್ರಿಕೆಗಳನ್ನು ಮೈಸೂರಿನ ಪತ್ರಿಕೋದ್ಯಮ ಶಾಲೆಗಳಿಗಿಂತ ಹೆಚ್ಚು ಪತ್ರಕರ್ತರನ್ನು ಉತ್ಪಾದಿಸುವ ಪತ್ರಿಕೋದ್ಯಮ ಶಾಲೆಯನ್ನಾಗಿ ಪರಿವರ್ತಿಸಿದರು. ಇಂದು ಇವೆರಡೂ ಪತ್ರಿಕೆಗಳ ಹಳೆಯ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ರಾಷ್ಟ್ರೀಯ ಮಾಧ್ಯಮ ಸಂಸ್ಥೆಗಳಲ್ಲಿ ಹಿರಿಯ ಹುದ್ದೆಗಳಲ್ಲಿದ್ದಾರೆ.

ದಿವಂಗತ ಗಿರೀಶ್ ನಿಕಮ್ (ರಾಜ್ಯಸಭಾ ಟಿವಿ), ದಿವಂಗತ ನಿರಂಜನ್ ನಿಕಮ್ (ಡೆಕ್ಕನ್ ಹೆರಾಲ್ಡ್), ಕೃಷ್ಣ ಪ್ರಸಾದ್ (ಔಟ್‌ಲುಕ್ ನಿಯತಕಾಲಿಕೆಯ ಮಾಜಿ ಸಂಪಾದಕ, ಈಗ ದಿ ಹಿಂದೂ ಪತ್ರಿಕೆ), ಚೇತನ್ ಕೃಷ್ಣಸ್ವಾಮಿ (ಹಿಂದೆ ದಿ ವೀಕ್ ನಿಯತಕಾಲಿಕೆಯಲ್ಲಿ ಮತ್ತು ಈಗ ಅಮೆಜಾನ್‌ನ ಸಾರ್ವಜನಿಕ ನೀತಿ ಮುಖ್ಯಸ್ಥ), ಎಚ್.ಆರ್. ರಂಗನಾಥ್ (ಕನ್ನಡ ಪ್ರಭದ ಮಾಜಿ ಸಂಪಾದಕ ಮತ್ತು ಈಗ ಪಬ್ಲಿಕ್ ಟಿವಿಯ ಮುಖ್ಯ ಸಂಪಾದಕ) ಇವರಲ್ಲಿ ಪ್ರಮುಖರು. ಯಾದವಗಿರಿಯಲ್ಲಿರುವ ಪ್ರಸಿದ್ಧ ಕಾದಂಬರಿಕಾರ ಆರ್.ಕೆ. ನಾರಾಯಣ್ ಅವರ ಮನೆಯನ್ನು ವಸ್ತುಸಂಗ್ರಹಾಲಯವನ್ನಾಗಿ ಪರಿವರ್ತಿಸುವಲ್ಲಿ ಗಣಪತಿ ಅವರ ಪಾತ್ರ ದೊಡ್ಡದು.

ನನ್ನೂರಿನ ಹಿರಿಯ ಪತ್ರಕರ್ತ ಮಿತ್ರರಾದ ಕೆ.ಬಿ.ಗಣಪತಿ ಅವರ ನಿಧನದಿಂದ ದುಃಖಿತನಾಗಿದ್ದೇನೆ. ಅವರು ವಸ್ತುನಿಷ್ಠ ಹಾಗೂ ವೃತ್ತಿಪರ ಬರಹಗಳಿಗೆ ಹೆಸರುವಾಸಿ. ಸ್ಟಾರ್ ಆಫ್ ಮೈಸೂರು ಮತ್ತು ಮೈಸೂರು ಮಿತ್ರ ಪತ್ರಿಕೆಯ ಮೂಲಕ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅಪಾರ ಓದುಗ ಬಳಗ ಸೃಷ್ಟಿಸಿದ ಗಣಪತಿಯವರು ಪತ್ರಿಕೋದ್ಯಮದಲ್ಲಿ ಮೂಡಿಸಿರುವ ಹೆಜ್ಜೆಗುರುತುಗಳು ಯುವ ಪತ್ರಕರ್ತರಿಗೆ ಮಾದರಿ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಪತ್ರಿಕಾರಂಗದ ದಿಗ್ಗಜರೆನಿಸಿದ ಬಿ.ಕೆ.ಗಣಪತಿ ಅವರು ಸ್ಟಾರ್ ಆಫ್ ಮೈಸೂರು ಮತ್ತು ಮೈಸೂರು ಮಿತ್ರ ಪತ್ರಿಕೆಗಳ ಮೂಲಕ ಪತ್ರಿಕಾರಂಗದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಪತ್ರಕರ್ತರಾಗಿ ಅವರ ಬದುಕು ಮತ್ತು ಸಾಧನೆ ಮುಂದಿನ ಪೀಳಿಗೆಗೆ ಮಾದರಿಯಾಗಲಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಕುಟುಂಬ ವರ್ಗಕ್ಕೆ ದುಃಖ ಸಹಿಸುವ ಶಕ್ತಿಯನ್ನು ದೇವರು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

-ವಿಶ್ವೇಶ್ವರ ಭಟ್, ಪ್ರಧಾನ ಸಂಪಾದಕ, ವಿಶ್ವವಾಣಿ

ಹಿರಿಯ ಪತ್ರಕರ್ತ ಕೆ.ಬಿ. ಗಣಪತಿ ಅವರ ನಿಧನದ ಸುದ್ದಿ ತಿಳಿದು ದುಃಖಿತನಾಗಿದ್ದೇನೆ. ಅಪಾರ ಪ್ರಾಪಂಚಿಕ ಜ್ಞಾನವನ್ನು ಹೊಂದಿದ್ದ ಅವರ ಲೇಖನಿಯಿಂದ ಹೊರಹೊಮ್ಮಿದ ಪ್ರತಿಯೊಂದು ಅಕ್ಷರಗಳು ಕೂಡಾ ಸಮಾಜದ ಮೇಲೆ ಗಾಢವಾದ ಪರಿಣಾಮ ಬೀರು ವಂಥ ಶಕ್ತಿಯನ್ನು ಹೊಂದಿದ್ದವು. ಅಗಲಿದ ಆತ್ಮಕ್ಕೆ ಚಿರಶಾಂತಿ ಸಿಗಲಿ. ಅವರ ಕುಟುಂಬದವರು, ಸಹೋದ್ಯೋಗಿಗಳು, ಹಿತೈಷಿಗಳಿಗೆ ಈ ನೋವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ.

-ಡಿ.ಕೆ.ಶಿವಕುಮಾರ್, ಡಿಸಿಎಂ

ಗೌರವ-ಪ್ರಶಸ್ತಿಗಳು

- ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ (2001)
- ಪತ್ರಿಕೋದ್ಯಮಕ್ಕಾಗಿ ಎಚ್.ಕೆ. ವೀರಣ್ಣಗೌಡ ಪ್ರಶಸ್ತಿ (2005)
- ಕೆಯುಡಬ್ಲ್ಯೂಜೆ ನ ಪಿ.ಆರ್. ರಾಮಯ್ಯ ಪ್ರಶಸ್ತಿ (2005)
- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2008)
- ಮೊಹರೆ ಹನಮಂತರಾಯ ಪ್ರಶಸ್ತಿ (2013)
- ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಜೀವಮಾನ ಸಾಧನೆ ಪ್ರಶಸ್ತಿ (2023)
- ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್

ಕೆಬಿಜಿ ಕೃತಿಗಳು

- ಕನ್ನಡದಲ್ಲಿ ಒಂದು ಕಾದಂಬರಿ ಆದರ್ಶವಾದಿ (1992), ಇದನ್ನು ಮೈಸೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ. ಡಿ. ಜವರೇಗೌಡ ಪ್ರಕಟಿಸಿದ್ದಾರೆ.
- ಇಂಗ್ಲಿಷ್‌ನಲ್ಲಿ ಪ್ರವಾಸ ಕಥನ-ಅಮೆರಿಕಾ ಆನ್ ಏರಿಯಾ ಆಫ್ ಲೈಟ್ (1993)
- ಕೊಡಗಿನ ಬಗ್ಗೆ ಇಂಗ್ಲಿಷ್‌ನಲ್ಲಿ ಬರೆದ ಕಾದಂಬರಿ-ದಿ ಕ್ರಾಸ್ ದಿ ಕೂರ್ಗ್ಸ್ (1994)
- ಕೊಡಗಿನ ಮೇಲೆ ಶಿಲುಬೆಯ ನೆರಳು-ದಿ ಕ್ರಾಸ್ ದಿ ಕೂರ್ಗ್ಸ್ (2005) ಪುಸ್ತಕದ ಕನ್ನಡ ಅನುವಾದ.
- 'ಸ್ಟಾರ್ ಆಫ್ ಮೈಸೂರು'ನಲ್ಲಿ (2003) ಅವರ ಆಯ್ದ ಅಂಕಣಗಳ ಸಂಗ್ರಹ ಅಬ್ರಕದಬ್ರಾ.
- 'ಮೈಸೂರು ಮಿತ್ರ'ದಲ್ಲಿ (2005) ಅವರ ಆಯ್ದ ಅಂಕಣಗಳ ಸಂಗ್ರಹ ಛೂ ಮಂತ್ರ.
- ಬರಾಕ್ ಒಬಾಮಾ ಅವರ ಕುರಿತಾದ ಗಾಂಧಿಯವರ ಪತ್ರ ಒಬಾಮಾ (2009) ಎಂಬ ಪುಸ್ತಕ.
- 'ಸ್ವೋರ್ಡ್ ಆಫ್ ಶಿವಾಜಿ' ಇಂಗ್ಲಿಷ್ ಅನುವಾದ ಕೃತಿ (2021).
- ಕನ್ನಡದಲ್ಲಿ 'ಶಿವಾಜಿಯ ಖಡ್ಗ' ಕೃತಿ (2021)

ಕೆಬಿಜಿ ಎಂಬ ಜಾದುಗಾರ !

ತಿದ್ದಿ ಬಾಚಿದ ದಟ್ಟ ತಲೆಗೂದಲು, ಟ್ರಿಮ್ ಮಾಡಿದ ಮೀಸೆ, ದಿನನಿತ್ಯ ಸವರಿದ ದಾಡಿ. ದಪ್ಪ ಗಾಜಿನ ಚಷ್ಮಾದ ಒಳಗೆ ತೇಲುವ ಕಣ್ಣು. ಕೊರಳಿಗೆ ಟೈ, ಸೂಟು - ಬೂಟು. ಖಡಕ್ ಸೇನಾಧಿಕಾರಿಯ ನಡಿಗೆ. ಗಟ್ಟಿದೇಹ, ಒಟ್ಟಾರೆ ವೀರ ಕೊಡವನೊಬ್ಬನ ಗತ್ತು - ಗೈರತ್ತು.

90ರ ದಶಕದಲ್ಲಿ ಪತ್ರಿಕೋದ್ಯಮಕ್ಕೆ ನಾನು ಅಂಬೆಗಾಲಿಟ್ಟಾಗ, ನನ್ನೆದುರಿಗೆ ಕಂಡ ಕೆಬಿಜಿ (ಕೆ. ಬಿ . ಗಣಪತಿ) ಅವರ ವ್ಯಕ್ತಿ ಚಿತ್ರಣ ಇದು.

ಭಾನುವಾರ ಬೆಳಿಗ್ಗೆ ಕೆಬಿಜಿ ಅವರ ನಿಧನ ವಾರ್ತೆ ಕಿವಿಗೆ ಬಿದ್ದೊಡನೆಯೇ ಮನಸ್ಸು ಮುದುಡಿ, ಕಣ್ಣು ಮಂಜಾಯಿತು. ಕಳೆದ ಕೆಲವು ದಿನಗಳ ಹಿಂದಷ್ಟೇ, ಸಂಪಾದಕರಾದ ವಿಶ್ವೇಶ್ವರ ಭಟ್ಟರು, 'ಒಮ್ಮೆ ಮೈಸೂರಿಗೆ ಹೋಗಿ ಗಣಪತಿಯವರನ್ನು ಭೇಟಿ ಮಾಡಿ ಬರೋಣ' ಎಂದು ಅಭಿಲಾಷೆ ವ್ಯಕ್ತಪಡಿಸಿದ್ದರು. ಅದೂ ಹೋಗಲಿ, ನಿನ್ನೆ ಅಂದರೆ ಶನಿವಾರ ನನ್ನ ಮತ್ತು ಭಟ್ಟರ ನಡುವೆ ನಡೆದ ಹಗ್ಗ ಜಗ್ಗಾಟ ಹೇಳಲೇಬೇಕು.

ವಾರಕ್ಕೊಮ್ಮೆ ಪತ್ರಿಕೆಗೆ ಬರೆಯಲೇಬೇಕು ಎಂದು ಅಭಿಮಾನದ ಕಟ್ಟಪ್ಪಣೆ ವಿಧಿಸಿದ್ದರು ಭಟ್ಟರು. ನಾನು ಇಲ್ಲಸಲ್ಲದ ನೆಪ ಹೇಳಿ ಹಿಂದೆ ಏಮಾರಿಸಿದಂತೆ ಜಾರಿಕೊಳ್ಳಲು ಪ್ರಯತ್ನಿಸಿದೆ. ಆದರೆ ಅದಾಗಲೇ ಅವರು, ಇನ್ನು ಮುಂದೆ ವಾರ ವಾರ 'ನಂಜನಗೂಡು ಮೋಹನ್ ಬರೆಯಲಿದ್ದಾರೆ' ಎಂದು ಪ್ರೋಮೊ ಸಿದ್ದಪಡಿಸಿ ನಮ್ಮವೇ ಗ್ರೂಪ್ ಗಳಲ್ಲಿ ಹರಿಬಿಟ್ಟಾಗಿತ್ತು . ಆದರೆ, ನನ್ನ ಬಹುದಿನಗಳ ಬರವಣಿಗೆಯ ವಿಘ್ನಕ್ಕೆ ಉಪಶಮನ ಎಂಬಂತೆ ನನ್ನ ಪತ್ರಿಕೋದ್ಯಮದ ಗುರುವಿಗೆ, ಗುರು ನಮನ ಸಲ್ಲಿಸುವ ಇಂತಹ ನೋವಿನ ಸನ್ನಿವೇಶ ನಿರೀಕ್ಷಿಸಿರಲಿಲ್ಲ.

ಎಪ್ಪತ್ತರ ದಶಕದಲ್ಲಿ ಮೈಸೂರು ಪತ್ರಿಕೋದ್ಯಮಕ್ಕೆ 'ಸ್ಟಾರ್'ಎಂಟ್ರಿ ಕೊಟ್ಟ ಕೆಬಿಜಿ ಅವರದ್ದು ಕಳೆದ ಸುಮಾರು ಐದು ದಶಕಗಳಲ್ಲಿ ವಿಶಿಷ್ಟ ಹೆಜ್ಜೆ. ಜಾಹೀರಾತನ್ನು ಧಿಕ್ಕರಿಸಿ ಮಡಿವಂತಿಕೆಯ ಪತ್ರಿಕೋದ್ಯಮದ ಬಿರುಗಾಳಿಯ ನಡುವೆ, ಜಾಹೀರಾತೇ ಪತ್ರಿಕೆಯ ಬೆನ್ನೆಲುಬು ಎಂಬ ಸಿದ್ಧಾಂತವನ್ನು ಭದ್ರಗೊಳಿಸಿ 'ಸ್ಟಾರ್ ಆಫ್ ಮೈಸೂರು 'ಎಂಬ ಸಂಜೆ ಇಂಗ್ಲಿಷ್ ದಿನಪತ್ರಿಕೆಯನ್ನು ಮನೆ ಮಾತಾಗಿಸಿ ಜಾಗತಿಕ ಮಟ್ಟದಲ್ಲೂ ಕ್ರೆಡಿಬಿಲಿಟಿ ತಂದುಕೊಟ್ಟವರು ಕೆಬಿಜಿ.

ಯಾವುದೇ ಗಿಮಿಕ್ಕಿಲ್ಲದ, ಶುದ್ಧ ವ್ಯಾವಹಾರಿಕ ಪ್ರಜ್ಞೆಯ ಪತ್ರಕರ್ತ ಕೆಬಿಜಿ. ತಮ್ಮ 'Abrakadabra' ಮತ್ತು ಛೂ ಮಂತ್ರ' ಜನಪ್ರಿಯ ಅಂಕಣದಲ್ಲಿ ತಮ್ಮ ಹರಿತವಾದ ಬರವಣಿಗೆಯ ಮೂಲಕ ಮ್ಯಾಜಿಕ್ ಮಾಡಿದ ಜಾದುಗಾರ, ಅಜಾತ ಶತ್ರು. ನಿಸ್ಸಂದೇಹವಾಗಿ ಅವರೊಬ್ಬ 'ಜಂಟಲ್ ಮ್ಯಾನ್ ಟು ದಿ ಕೋರ್'.

ಅಂದಿನ ಕಪ್ಪು ಬಿಳುಪಿನ 'ಸ್ಟಾರ್ ಆಫ್ ಮೈಸೂರು' ಮತ್ತು 'ಮೈಸೂರು ಮಿತ್ರ' ಪತ್ರಿಕೆ ನ ಭೂತೋ. ..ಎಂಬಂತೆ ಪತ್ರಿಕೋದ್ಯಮದಲ್ಲಿ ಬೇರುಬಿಟ್ಟಿದ್ದು ಈಗ ಇತಿಹಾಸ. ತಾವು ಕಂಡದ್ದನ್ನು, ಓದಿದ್ದನ್ನು ಒಬ್ಬ ಪತ್ರಕರ್ತನ ಚೌಕಟ್ಟಿನಲ್ಲೇ ಅಳೆಯುತ್ತಿದ್ದ ಕೆಬಿಜಿ ಅವರ ಬರವಣಿಗೆಯಲ್ಲಿ ಅಧಿಕಪ್ರಸಂಗತನವಾಗಲಿ, ಆತ್ಮಪ್ರಶಂಸೆಯಾಗಲಿ, ಸಣ್ಣತನವಾಗಲಿ, ಆಟಾಟೋಪವಾಗಲಿ, ಇಲ್ಲವೇ ಮತ್ತೊಬ್ಬರನ್ನು ಹಣಿಯುವ ಗುರಾಣಿಯಾಗಿ ಬಳಸಿಕೊಂಡ ನಿದರ್ಶನ ಕಾಣಬರಲೇ ಇಲ್ಲ. ಹಾಗಾಗಿಯೇ ಮೈಸೂರು ಪತ್ರಿಕೋದ್ಯಮವನ್ನು ಸರಿ ಸುಮಾರು ಅರ್ಧ ಶತಮಾನಗಳಷ್ಟು ಕಾಲ ಆಳಿ ಅಸ್ತಂಗತರಾದರು.

ಗಾಂಭಿರ್ಯ ನಡೆ-ನುಡಿಯ ಕೆಬಿಜಿ, ಕೊನೆಯ ವರೆಗೂ ತಮ್ಮಿಷ್ಟದಂತೆಯೇ ಬರೆದರು. ಮುಂದೆ

ನಂಜನಗೂಡು ಮೋಹನ್
ವಿಶ್ವವಾಣಿ ಸಂಪಾದಕೀಯ ಸಲಹೆಗಾರ

ಬಂದರೆ ಹಾಯಬೇಡ; ಹಿಂದೆ ಬಂದರೆ ಒದೆಯ ಬೇಡ ಎಂಬ ಸಿದ್ಧಾಂತ ಅವರದ್ದು. ನಾವು ನೋಡಿರದ ಓದಿನಿಂದಷ್ಟೇ ಅರಿತಿರುವ ಖುಷ್ವಂತ್ ಸಿಂಗ್, ಎಂ.ಜೆ.ಅಕ್ಬರ್ ಮುಂತಾದ ಹಿರಿಯ ಪತ್ರಕರ್ತರ ಬಗ್ಗೆ ಅವರನ್ನು ಹತ್ತಿರದಿಂದ ಕಂಡಿರುವ ರವಿ ಬೆಳೆಗೆರೆ ಮತ್ತು ವಿಶ್ವೇಶ್ವರ ಭಟ್ ಅವರುಗಳು ಮನತುಂಬಿ ಮಾತನಾಡುವಾಗಲೆಲ್ಲ ನನ್ನ ಕಣ್ಣ ಮುಂದೆ ಕೆಬಿಜಿ ಅವರ ವ್ಯಕ್ತಿತ್ವ ಹಾದು ಹೋಗಿದೆ . ಕೆಬಿಜಿ ಅವರೂ ಸಹ ಇವರಂತೆಯೇ ರೀತಿ-ರಿವಾಜು, ಯಶಸ್ಸು, ಹಣ, ಜೀವನ ಪ್ರೇಮದೊಂದಿಗೆ ಕೀರ್ತಿಯ ಪರಾಕಾಷ್ಠೆಯನ್ನು ತಮ್ಮ ಕೊನೆಯ ದಿನಗಳವರೆಗೂ ಕಾಪಾಡಿಕೊಂಡು ಬಂದ ನಮ್ಮ ನಡುವಿನ ಅಪರೂಪದ ಪತ್ರಕರ್ತ. ಅವರ ಶಿಸ್ತು, ಬಿಸಿನೆಸ್ ಮೈಂಡ್, ಪ್ರತಿಭೆ, ಅಗಾಧ ಓದು ಇವೆಲ್ಲವೂ ಸೇರಿ ಕೆಬಿಜಿ ಅವರಿಗೆ ಯಶಸ್ಸನ್ನು ತಂದುಕೊಟ್ಟಿತು. ಪತ್ರಿಕೆ ಪ್ರಾರಂಭಿಸಿದಂದಿನಿಂದ ಕಣ್ಣು ಮುಚ್ಚುವವರೆಗೂ ಕೆಬಿಜಿ, ಓರ್ವ ಓದುಗ ಮತ್ತು ನಿರಂತರ ಬರೆಯುವ ಸಂಪಾದಕನಾಗಿ ಕ್ರಿಯಾ ಶೀಲತೆಯನ್ನು ಕಾಪಾಡಿಕೊಂಡು ಬಂದದ್ದು ವಿಸ್ಮಯ.

ಪತ್ರಿಕೆಗೆ ಯಾವುದೇ ಇಸಂ ಗಳ ಹೊರೆ ಹೊರಿಸದೆ, ಲೆಫ್ಟ್ ಇಲ್ಲವೇ ರೈಟ್ ಎಂಬ ಜಂಜಾಟಕ್ಕೆ ಸಿಲುಕಿಸದೆ ಸಾಮಾನ್ಯ ನಾಗರಿಕನ ದನಿಯನ್ನಾಗಿ ರೂಪಿಸಿ ಇಂದಿನವರೆಗೂ ಅದನ್ನು ಕಾಪಾಡಿಕೊಂಡು ಬಂದದ್ದು ಗಣಪತಿಯವರ ಅಚಲ ನಿಲುವು ಮೆಚ್ಚುವಂಥದ್ದು. ಮೈಸೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವರದಿ, ಚಿತ್ರಗಳು 'ಮೈಸೂರು ಮಿತ್ರ' 'ಸ್ಟಾರ್ ಆಫ್ ಮೈಸೂರ್'ನಲ್ಲಿ ಬಂದರಷ್ಟೇ ಅವುಗಳಿಗೆ ಮಹತ್ವ ಎನ್ನುವ ಮಟ್ಟಿಗೆ ಪತ್ರಿಕೆ ಮೈಸೂರಿನಲ್ಲಿ ಬೆಳೆದು ನಿಂತಿದೆ. ಕೆಬಿಜಿ ಅವರನ್ನು ಮೆಚ್ಚುವವರು, ಅವರ ಪತ್ರಿ ಕೋದ್ಯಮ ಶೈಲಿಯ ಬಗ್ಗೆ ಮೂಗು ಮುರಿಯು ವವರು ಇಂದಿಗೂ ಇದ್ದಾರೆ. ಆದರೆ ಅವರ ಸಂಪಾದಕತ್ವದ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಯ ಬುಡವನ್ನು ಕಿಂಚಿತ್ತೂ ಅಲುಗಾಡಿಸಲು ಈವರೆಗೆ ಯಾರಿಗೂ ಸಾಧ್ಯ ವಾಗಲಿಲ್ಲ. ರಾಜ್ಯಮಟ್ಟದ ದೊಡ್ಡ ದೊಡ್ಡ ಇಂಗ್ಲಿಷ್ ಪತ್ರಿಕೆಗಳಿಗೂ ಜಾಹೀರಾತು ಪೈಪೋಟಿ ನೀಡಿ ಮೆರೆ ಯುತ್ತಲೇ ಬಂದಿದೆ ಸ್ಟಾರ್ ಆಫ್ ಮೈಸೂರ್. ಯಾರ್‍ಯಾರದ್ದೋ , ಎಂತೆಂಥದ್ದೋ ಪ್ರಯತ್ನಗಳು ಕೈಗೂಡಲೇ ಇಲ್ಲ. ಇಂದಿಗೂ 'ಸ್ಟಾರ್ ಆಫ್ ಮೈಸೂರ್', 'ಸ್ಟಾರ್ ಆಫ್ ಮೈಸೂರ್ 'ಆಗೇ ಉಳಿದಿದೆ.

ಕೆಬಿಜಿ ಅವರ ಗರಡಿಯಲ್ಲಿ ಪಳಗಿದ ಅನೇಕರು ಇಂದು ಸೆಲೆಬ್ರಿಟಿಗಳಾಗಿ ವಿವಿಧ ಕ್ಷೇತ್ರಗಳಲ್ಲಿ ಬೆಳಗುತ್ತಿದ್ದಾರೆ. ಅಮೆಜಾನ್ ಸಂಸ್ಥೆಯಲ್ಲಿ ಉನ್ನತ ಹುದ್ದೆಯಲ್ಲಿರುವ ಚೇತನ್ ಕೃಷ್ಣಸ್ವಾಮಿ, ಪಬ್ಲಿಕ್ ಟಿವಿಯ ಹೆಚ್.ಆರ್. ರಂಗನಾಥ್, ಪ್ರಜಾವಾಣಿಯಲ್ಲಿ ಕೆಲಸ ಮಾಡಿದ ಎಂ.ನಾಗರಾಜ್ ಮತ್ತು ನಂಜುಂಡೇಗೌಡ, ಹಿರಿಯ ಐ ಎ ಎಸ್ ಅಧಿಕಾರಿ ಎಂ.ಆರ್.ರವಿ, ಹಿರಿಯ ಪತ್ರಕರ್ತರಾದ ಗಿರೀಶ್ ನಿಕ್ಕಂ, ಕೃಷ್ಣವಟ್ಟಂ ಮುಂತಾದವರೆಲ್ಲರೂ ಇಲ್ಲಿ ಸಾಮು ಮಾಡಿದವರೇ. ಅಷ್ಟೇ ಏಕೆ ಆಂದೋಲನ ಪತ್ರಿಕೆಯ ರಾಜಶೇಖರ ಕೋಟಿ ಅವರೂ ಆರಂಭದ ಹಲವು ತಿಂಗಳು ಕೆಬಿಜಿ ಅವರ ಬಳಿ ಪತ್ರಿಕೋದ್ಯಮದ ಪಾಠ ಒಪ್ಪಿಸಿದವರೇ.

ನಾನು 'ಮೈಸೂರು ಮಿತ್ರ' ಸೇರುವ ಹೊತ್ತಿಗೆ ಪತ್ರಿಕೆಗೆ ಹದಿನೈದರ ತಾರುಣ್ಯ. ಆಗ ಎಂ. ಆರ್ . ಶಿವಣ್ಣ ಸುದ್ದಿ ಸಂಪಾದಕರು. ಆರ್‌ಎಸ್‌ಎಸ್‌ನ ಸಾಮರಸ್ಯ ವಾದಿರಾಜ, ಅನಂತ ಚಿನಿವಾರ, ಟಿ. ಗುರುರಾಜ್ ಮುಂತಾದವರೆಲ್ಲ ನನ್ನ ಸಹೋದ್ಯೋಗಿಗಳು. ಕೆಬಿಜಿ ಸಿಬ್ಬಂದಿಗಳನ್ನು ಪ್ರೀತಿಯಿಂದ ಕಾಣುತ್ತಿದ್ದರು. ಅರ್ಹತೆಗೆ ತಕ್ಕ ಸಂಬಳ, ವರ್ಷಕ್ಕೊಮ್ಮೆ ಬೋನಸ್ ಸಿಗುತಿತ್ತು. ಯಾವುದೇ ರಾಜ್ಯಮಟ್ಟದ ಪತ್ರಿಕೆಗಳಿಗಿಂತಲೂ ಕಡಿಮೆ ಇಲ್ಲದಂತೆ ಪತ್ರಿಕೆಯ ಗುಣಮಟ್ಟ ಮತ್ತು ಆಡಳಿತ ವ್ಯವಸ್ಥೆ ಗಟ್ಟಿಯಾಗಿತ್ತು.

ಬೆಳಗ್ಗೆ 8.15ಕ್ಕೆ ಕಚೇರಿಗೆ ಬರುತ್ತಿದ್ದ ಸಂಪಾದಕ ಗಣಪತಿಯವರು ಮಧ್ಯಾಹ್ನ 'ಸ್ಟಾರ್ ಆಫ್ ಮೈಸೂರ್'ನ್ನು ಪ್ರಿಂಟ್ ಗೆ ಕಳಿಸಿ, ನಂತರ 3ಕ್ಕೆ 'ಮೈಸೂರುಮಿತ್ರ' ಪತ್ರಿಕೆಯ ಸಂಪಾದಕೀಯ ಸಿಬ್ಬಂದಿಗಳೊಂದಿಗೆ ಸಭೆ ನಡೆಸಿ ಮನೆಗೆ ತೆರಳುತ್ತಿದ್ದರು. ಸಣ್ಣಪುಟ್ಟ ಒಳ ರಾಜಕೀಯಗಳ ನಡುವೆಯೂ ಪತ್ರಿಕಾಲಯ ಒಂದು ಮನೆಯಂತಿತ್ತು. ಸಾಧನೆಗಳ ಮೂರ್ತಿವೆತ್ತಂತಿದ್ದ ಕೆಬಿಜಿ ಅವರ ನೆನಪು ಅಮರ. ಅದರಲ್ಲೂ ಅವರ ಕೈ ಅನ್ನ ಉಂಡಿರುವ ನನ್ನಂತಹ ನೂರಾರು ಮಂದಿಗೆ ಅವರು ಪ್ರಾತಃಸ್ಮರಣೀಯರು. ಅವರ ಎಂಬತ್ತೆದು ವರ್ಷಗಳ ಸಾಧನೆಯ ಸಾರ್ಥಕ ಬದುಕು ಸರ್ವ ಮಾನ್ಯ. ಪತ್ರಿಕೋದ್ಯಮವನ್ನೇ ಕೊನೆಯವರೆವಿಗೂ ಉಸಿರಾಡಿದ ಕೆಬಿಜಿ ಶ್ರೇಷ್ಠ ಪತ್ರಕರ್ತರಲ್ಲೊಬ್ಬರು.

ಪತ್ರಿಕೋದ್ಯಮವೇ ಉಸಿರು

ಮೈಸೂರು ಮಿತ್ರ ಹಾಗೂ ಆಂದೋಲನ ಭಿನ್ನ ಚಿಂತನೆಯ ಪತ್ರಿಕೋದ್ಯಮ ಶಾಲೆಗಳು. ಆದರೆ ಆಶಯ ಮಾತ್ರ ಸಮಾಜ ಸುಧಾರಣೆಯೇ ಆಗಿತ್ತು. ಚಿಂತನೆ ಬೇರೆಯಾಗಿದ್ದರೂ ಪತ್ರಕರ್ತ ಮೂಲ ಆಶಯ ಬಿಡಬಾರದು ಎಂಬುದು ಕೆಬಿಜಿ ನಿಲುವು

ಅದು ವಿಜಯ ಕರ್ನಾಟಕದಲ್ಲಿ ಕೆಲಸ ಮಾಡುತ್ತಿದ್ದ ಸಮಯ. ವಿಜಯ ಕರ್ನಾಟಕದ ಭಾಗವಾಗಿದ್ದ ಎಂಎಂಸಿಎಲ್ ಸಂಸ್ಥೆ ಸಿಇಒ ಸಂಪಾದಕೀಯ ವಿಭಾಗದ ಹಿರಿಯರ ಸಭೆ ನಡೆಸಿದ್ದರು. ಸ್ಟಾರ್ ಆಫ್ ಮೈಸೂರು ಪತ್ರಿಕೆ ಮುಂದಿಟ್ಟು ಮೈಸೂರು ಭಾಗದವರು ಈ ಪತ್ರಿಕೆಯನ್ನು ಯಾಕೆ ಇಷ್ಟಪಟ್ಟು ಓದುತ್ತಾರೆ. ಇದರ ಯಶಸ್ಸಿನ ಹಿಂದಿರುವ ಗುಟ್ಟೇನು ಎನ್ನುವ ಪ್ರಶ್ನೆ ಕೇಳಿದ್ದರು. ಸಂಜೆ ಹೊತ್ತಿಗೆ ಟ್ಯಾಬ್ಲಾಯ್ಡ್ ಶೈಲಿಯ ಪತ್ರಿಕೆ ಮೈಸೂರು ಭಾಗ ಮಾತ್ರವಲ್ಲ. ಕರ್ನಾಟಕದಲ್ಲಿ ಇರುವುದು ಒಂದೇ. ಸಂಜೆಗೆ ಜನರ ಚೆಂದದ ಗೆಳೆಯನೂ ಹೌದು. ಬಹು ತೇಕ ಮೈಸೂರು ಭಾಗದವರಿಗೆ ಬೇಕಾದ ಸುದ್ದಿ ಅಲ್ಲಿ ಸಿಗುತ್ತದೆ. ವೈವಿಧ್ಯಮಯ ಮಾಹಿತಿಯೂ ಸಿಗುತ್ತದೆ. ಅಂಕಣಗಳು ಇವೆ. ಖುದ್ದು ಸಂಪಾದಕರೇ ಅಂಕಣ ಬರೆಯುತ್ತಾರೆ. ತಕ್ಷಣದ, ಸಮಕಾಲೀನ ಬೆಳವಣಿಗೆಗಳಿಗೆ ಸ್ಪಂದಿಸುತ್ತಾರೆ. ಸುದ್ದಿಯ ಜತೆಗೆ ಜಾಹೀರಾತು ಈ ಪತ್ರಿಕೆ ಓದುಗರ ಆಕರ್ಷಣೆ. ಮೈಸೂರು ಮಿತ್ರ ಎಂಬ ಬೆಳಗಿನ ಪತ್ರಿಕೆಯೂ ಇದರ ಬಲ ಎನ್ನುವ ಬಗೆ ಬಗೆಯ ಉತ್ತರಗಳು ಬಂದಿದ್ದವು.

ಇದರ ಹಿಂದೆ ಇದ್ದ ಶಕ್ತಿಯೇ ಕೆ. ಬಿ. ಗಣಪತಿ ಎಂಬ ದಿಟ್ಟ ಪತ್ರಕರ್ತ. ಕರ್ನಾಟಕ ಮಾತ್ರವಲ್ಲದೇ ಇಡೀ ಏಷ್ಯಾದಲ್ಲಿಯೇ ಹೆಚ್ಚಿನ

ಪ್ರಸರಣ, ವೈವಿಧ್ಯಮಯ ಸುದ್ದಿ, ಬಹು ಮುದ್ರಣದೊಂದಿಗೆ ಪ್ರಕಟಗೊಳ್ಳುವ ಪ್ರಾದೇಶಿಕ ಪತ್ರಿಕೆಗಳು ಮೈಸೂರು ಮಿತ್ರ, ಸ್ಟಾರ್ ಆಫ್ ಮೈಸೂರು(ಆಂಗ್ಲ), ಆಂದೋ ಲನ ಮಾತ್ರ ಎನ್ನುವುದು ಹಿರಿಮೆ. ಮೈಸೂರು ಮಿತ್ರ ಕಟ್ಟಿ ಬೆಳೆಸಿದ ಛಾತಿ ಗಣಪತಿ ಅವರದ್ದು. ಕೊಡಗಿನ ಮೂಲದ, ಸ್ಥಿತಿವಂತ ಕುಟುಂಬದ ಗಣಪತಿ ಅವರು ಪದವಿ ಮುಗಿಸಿ ಸೇನೆಗೆ ತೆರಳಿದ್ದರೆ ದೊಡ್ಡ ಹುದ್ದೆಯಲ್ಲಿ ಇರೋರು. ಅವರನ್ನು ಸೆಳೆದದ್ದು ಪತ್ರಿಕೋದ್ಯಮ. ಇಂಡಿಯನ್ ಎಕ್ಸ್‌ಪ್ರೆಸ್ ಮೂಲಕ ವೃತ್ತಿ ಜೀವನ ಆರಂಭಿಸಿ ಅನಂತರ ಮೈಸೂರಿಗೆ ಬಂದು ಸ್ಟಾರ್ ಆಫ್ ಮೈಸೂರು, ಮೈಸೂರು ಮಿತ್ರ ಆರಂಭಿಸಿದವರು ಗಣಪತಿ. ಬರೀ ಕೊಡಗಿಗೆ

ಕುಂದೂರು ಉಮೇಶಭಟ್ಟ ಮೈಸೂರು
ಹಿರಿಯ ಪತ್ರಕರ್ತ

ತಮ್ಮನ್ನು ಸೀಮಿತ ಮಾಡಿಕೊಳ್ಳದೇ ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ, ರಾಮನಗರ ಭಾಗಕ್ಕೂ ವಿಸ್ತರಿಸಿದವರು. ವರ್ಷಗಳು ಕಳೆಯುವ ಹೊತ್ತಿಗೆ ಹೆಮ್ಮರವಾಗಿಯೇ ಗಣಪತಿ ಅವರ ಜೋಡಿ ಪತ್ರಿಕೆ ಬೆಳೆದಿದ್ದವು.

1999ರಲ್ಲಿ ಆಂದೋಲನ ಪತ್ರಿಕೆ ಮೂಲಕ ಮೈಸೂರಿನಲ್ಲಿ ನನ್ನ ಪತ್ರಿಕಾ ವೃತ್ತಿ ಗಟ್ಟಿಗೊಂಡಾಗ ನಮ್ಮ ಕಚೇರಿಯಲ್ಲಿ ಮಾತ್ರವಲ್ಲ ಸಹೋದ್ಯೋಗಿಗಳು ಕೂಡ, 'ಇಂದಿನ ಮೈಸೂರು ಮಿತ್ರ ಪತ್ರಿಕೆ ಓದಿದರಾ' ಎಂದು ಕೇಳೋರು. ಗಣಪತಿ ಅವರು ಅಲ್ಲಿನ ಸಂಪಾದಕರು. ಅಲ್ಲಿ ಎಂ.ಆರ್. ಶಿವಣ್ಣ, ಟಿ.ಗುರುರಾಜ್, ವಿಶ್ವನಾಥ್, ಗೋವಿಂದೇಗೌಡ, ಗುರುಸ್ವಾಮಿ, ಎನ್.ಎಂ.ಮಹದೇವ್, ಎ.ಸಿ. ಪ್ರಭಾಕರ್ ಸಹಿತ ಹಲವು ಹಿರಿಯ ಪತ್ರಕರ್ತರಿದ್ದರು. ಇಲ್ಲಿ ಕೆಲಸ ಮಾಡಿದ ಹೋದ ಹಲವರು

ನಾಡಿನ ಪ್ರಮುಖ ಪತ್ರಿಕೆಯಲ್ಲಿ ಪತ್ರಕರ್ತರಾಗಿದ್ದರು. ಅವರ ಕುರಿತೂ ತಿಳಿಸೋರು.

ಹಾಗೆ ನೋಡಿದರೆ ಆಂದೋಲನ ಮತ್ತು ಮೈಸೂರು ಮಿತ್ರ ಭಿನ್ನ ಚಿಂತನೆಯ ಪತ್ರಿಕೆಗಳು. ಆಂದೋಲನ ಎಡ ಚಿಂತನೆ ಜತೆಗೆ ಸಮಾಜವಾದಿ, ಪ್ರಗತಿಪರ ಮಾರ್ಗದಲ್ಲಿದ್ದರೆ, ಮಿತ್ರ ಸಂಪೂರ್ಣ ಬಲ ಚಿಂತನೆಯ, ರಾಷ್ಟ್ರೀಯವಾದ ಬೆಂಬಲಿಸುವ ಪತ್ರಿಕೆ. ಅಂಥ ಲೇಖಕರು ಇಲ್ಲಿ ಬರೆಯೋರು. ಆದರೆ ಸುದ್ದಿ ವಿಚಾರದಲ್ಲಿ ಇದು ಕಾಣಿಸುತ್ತಿರಲಿಲ್ಲ. ಗಣಪತಿ ಅವರು ಅಪ್ಪಟ ಪತ್ರಕರ್ತರೇ ಆಗಿದ್ದರು. ಜನರ ದನಿಯಾಗಿ ಕೆಲಸ ಮಾಡಬೇಕು. ಸಮಾಜದಲ್ಲಿನ ಸಮಸ್ಯೆಗಳಿಗೆ ಬೆಳಕು ಚೆಲ್ಲಬೇಕು ಅನ್ನೋರು. ಅದನ್ನು ತಮ್ಮ ವರದಿಗಳ ಮೂಲಕವೂ ವ್ಯಕ್ತಪಡಿಸೋರು. ಈ ಕಾರಣದಿಂದಲೇ ಮೈಸೂರು ಮಿತ್ರ, ಆಂದೋಲನ ಗಟ್ಟಿಯಾಗಿ ಬೆಳೆದವು. ಒಬ್ಬ ಪತ್ರಕರ್ತ ಹೇಗಿರಬೇಕು. ಅವನ ಸುದ್ದಿ ಗ್ರಹಿಕೆ, ಸಮಾಜಪರತೆ ಹೇಗಿರಬೇಕು ಎಂದು ಗಣಪತಿ ಅವರು ತಮ್ಮ ಭಾಷಣದಲ್ಲಿ ಹೇಳೋರು. ಅವರು ಸದಾ ಲವಲವಿಕೆ ಇರೋ ಪತ್ರಕರ್ತ. ಮುಕ್ತವಾಗಿ ಮಾತನಾಡೋರು. ಕಚೇರಿಯಲ್ಲೇ ಇರಲಿ. ಕಾರ್ಯಕ್ರಮಗಳಲ್ಲೇ ಆಗಲಿ ಹಾಗೆಯೇ ಇದ್ದು ಅಭಿಪ್ರಾಯ ಹೇಳೋರು. ವಯಸ್ಸಾದರೂ ಅವರಲ್ಲಿದ್ದ ಪತ್ರಕರ್ತನಿಗೆ ವಯಸ್ಸಾಗಿರಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಕೆಲಸ ಕಡಿಮೆಯಾಗಿದ್ದರೂ ಪತ್ರಕರ್ತನ ಕಾಯಕ ನಿಂತಿರಲಿಲ್ಲ. ಓದೋರು. ಬರೆಯೋರು. ಮೈಸೂರು ಪತ್ರ ಕರ್ತರ ಸಂಘಕ್ಕೆ ಆಂದೋಲನದ ಸಂಪಾದಕ ರಾಗಿದ್ದ ರಾಜಶೇಖರ ಕೋಟಿ ಅವರು ಕಾಯ ಕಲ್ಪ ನೀಡಲು ಮುಂದಾಗಿ ತಂಡ ಕಟ್ಟಿದಾಗ ಗಣಪತಿ ಅವರು ಉಪಾಧ್ಯಕ್ಷರಾಗಿದ್ದರು. ಸಕ್ರಿಯವಾಗಿದ್ದು ಸಂಘದ ಘನತೆ ಹೆಚ್ಚಿಸಿದರು. ಮೈಸೂರು ಭಾಗದ ಪತ್ರಿಕೋದ್ಯಮದ ಹಿರಿ ತಲೆಮಾರಿನ ಕೊನೆಯ ಕೊಂಡಿ ಗಣಪತಿ ಅವರು. ಅವರ ಬರಹ, ಅಂಕಣಗಳಿಂದ ಮೈಸೂರು ಭಾಗದ ಪ್ರಗತಿಯೂ ಆಗಿದೆ. ನಿಜಾರ್ಥದಲ್ಲೂ ಮೈಸೂರು ಸ್ಟಾರ್ ಆಗಿದ್ದ ಅವರಿಗೆ ವಯಸ್ಸಾಗಿ ದ್ದರೂ ಮಾನಸಿಕವಾಗಿ ಅವರಲ್ಲೊಬ್ಬ ಪತ್ರ ಕರ್ತ ಸದಾ ಜಾಗೃತ ಆಗಿರುತ್ತಿದ್ದ. ಕೊನೆಯ ಉಸಿರು ಇರುವ ವರೆಗೂ ಪತ್ರಕರ್ತರಾಗಿದ್ದು ಅವರ ಹಿರಿಮೆ. ಪತ್ರಿಕೋದ್ಯಮದ ಹೆಮ್ಮರ ಉರುಳಿದೆ. ಆ ಮರ ನೆರಳು ಕೊಟ್ಟು ಸಮಾಜಕ್ಕೆ ನೀಡಿದ ಕೊಡುಗೆ ಅಜರಾಮರ. ಹೋಗಿ ಬನ್ನಿ ಸರ್, ನಮಸ್ಕಾರಗಳು...

THIS IS A PUBLIC ANNOUNCEMENT FOR INFORMATION PURPOSES ONLY. THIS IS NOT A FINAL SCHEME OFFER DOCUMENT ANNOUNCEMENT AND DOES NOT CONSTITUTE AN INVITATION OF ISSUE TO ACQUIRE, PURCHASE OR SUBSCRIBE TO UNITS OR SECURITIES

NOT FOR RELEASE, PUBLICATION OR DISTRIBUTION, DIRECTLY OR INDIRECTLY OUTSIDE INDIA.

INITIAL PUBLIC OFFER OF PROPSHARE TITANIA IN RELIANCE UPON REGULATION 26R OF THE SECURITIES AND EXCHANGE BOARD OF INDIA (REAL ESTATE INVESTMENT TRUSTS) REGULATIONS, 2014, AS AMENDED (THE "REIT REGULATIONS")

PROPERTY SHARE
INVESTMENT TRUST

(Please scan this QR Code to view Key Information of the Trust and Key Information of the Scheme)

PROPSHARE TITANIA

PropShare Titania has been set up on February 21, 2025 as the second scheme of Property Share Investment Trust registered in the Republic of India as contributory, determinate and irrevocable trust on June 27, 2024, at Bangalore, Karnataka, India under the provisions of Indian Trusts Act, 1882 and as a small and medium real estate investment trust on August 5, 2024, under Regulation 26L (1) of the Securities and Exchange Board of India (Real Estate Investment Trusts) Regulations, 2014, as amended, having registration number IN/SM-REIT/24-25/0001

Principal Place of Business: 16th Floor, SKAV Seethalakshmi, 21/22, Kasturba Road, Bangalore 560 001, India; **Tel:** +91 80 3100 3902; **Fax:** NA; **Compliance Officer:** Prashant Kataria; **E-mail:** compliance.officer@propertyshare.in; **Website:** www.psreit.in

TRUSTEE	INVESTMENT MANAGER
AXIS TRUSTEE	PROPERTY SHARE
Axis Trustee Services Limited	PropShare Investment Manager Private Limited

Initial public offering of up to [•] Titania Units (as defined herein) for cash at a price of ₹ [•] per Titania Unit aggregating up to ₹ 4,730 million (the **"Issue"**)

Institutional Investor Portion: Not more than 75% of the Net Issue | **Non-Institutional Investor Portion:** Not less than 25% of the Net Issue

Price Band: ₹10.0 Lakhs to ₹10.6 Lakhs per Titania Unit
Bids can be made for a minimum of 1 Titania Unit and in multiples of 1 Titania Unit thereafter by Bidders.

THE TITANIA UNITS WILL GET LISTED ON THE BSE. BSE SHALL BE THE DESIGNATED STOCK EXCHANGE

RISK TO INVESTORS

1. While we have executed the definitive agreements with respect to the Formation Transactions, the closing of these is subject to fulfilment of certain conditions. Therefore, our ability to consummate these transactions will impact the ability of the Investment Manager to complete this Issue.
2. The outstanding tax litigations of Titania SPV involve a substantial disputed amount of ₹ 710.11 million which could potentially have adverse effect on our business, financial condition, results of operations and cash flows.
3. Our business, revenues and profitability are dependent on the performance of the commercial real estate market in India. Fluctuations in the general economic, market and other conditions may affect the commercial real estate market in India, specifically in Thane, MMR region, and in turn, our ability to lease the SM REIT Asset to tenants on favourable terms.
4. A significant portion of our revenues is derived from a limited number of large lessees and from a single sub-market. Any conditions that impact these lessees, or submarkets may adversely affect our business, revenue from operations and financial condition.
5. Our actual results may be materially different from the Projections included in this Key Information of the Scheme. Accordingly, investors should not place undue reliance on or base their investment decision solely on this information.
6. The Valuation Report obtained for Project Titania is only indicative in nature as it is based on various assumptions and may not be indicative of the true value of Project Titania.
7. A significant portion of our revenues is derived from a limited number of large tenants in the banking, financial services and insurance, Healthcare and Lifesciences and technology sectors. Any conditions that impact these tenants or the respective sectors or cities in which they operate may adversely affect our business, results and financial condition.
8. This Key Information of the Scheme contains information from the JLL Report, the Technical Due Diligence Report and the Valuation Report which the Investment Manager has commissioned on our behalf.
9. A portion of the Issue proceeds are going to be utilised to redeem the Optionally Convertible Debentures, which are not in existence as on the date of filing of the Key Information of the Scheme.
10. Tenant leases across our SM REIT Asset are subject to the risk of non-renewal, non-replacement, default, early termination, regulatory or legal proceedings or changes in applicable laws or regulations, thereby impacting leasing and other income. Further, vacant properties could be difficult to lease, which could adversely affect our revenues.

BASIS FOR ISSUE PRICE

The Issue Price will be determined by the Investment Manager, in consultation with the Lead Manager, on the basis of assessment of market demand for the Titania Units offered through the Book Building Process and on the basis of quantitative and qualitative factors as described below.

Bidders are requested to also refer to ***"Risk Factors"***, and ***"Our Business and Property"*** from page 41 to 54 and from 23 to 36 of the Key Information of the Scheme respectively, to make an informed investment decision.

The Price Band is ₹10,00,000 to ₹10,60,000.

Based on the evaluation of the qualitative and quantitative factors listed below, the equity value at the floor price, the cap price and the Issue Price is as follows:

Particulars	At Floor Price	At Cap Price	At Issue Price
Titania Unit Value	[●]	[●]	[●]
Number of Titania Units Issued	[●]	[●]	[●]

Qualitative Factors

We believe that some of the qualitative factors which form the basis for computing the Issue Price are as follows:

For further details, see ***"Our Business and Property"*** from page 23 to 36 of the Key Information of the Scheme.

Quantitative Factors

We believe that some of the quantitative factors which may form the basis for computing the Issue Price are as follows:

- G Corp Tech Park has been certified with ESG certifications, including LEED Platinum (O&M), WELL Health and Safety rating and BEE 5 Star certification. As per JLL Report, Sustainability has become a top priority for businesses worldwide, with particular emphasis on achieving net zero carbon (NZC) commitments. We believe these certifications demonstrate the property's adherence to recognized sustainability standards.
- Sound business model with embedded rental growth, stable cash flows and mark-to-market opportunity. All the leave and license agreements entered by the Titania SPV in respect of Project Titania provide for a license fee escalation of 5% annually. Further, the WALE of Project Titania is 3.2 years as of March 31, 2025.
- 100% occupancy by a diversified underlying tenant portfolio comprising of Fortune 500 companies, multinational companies and blue-chip tenants including Aditya Birla Capital and Concentrix. As per the JLL Report, G Corp Tech Park has seen very stabilised occupancy since 2016 with a similar tenant base for the past decade or so. Nearly all existing tenants have continued to renew while Aditya Birla Capital and Concentrix have even grown within the same tech park, exhibiting tenant stickiness for this quality.
- Low vacancy and projected 5-year rent CAGR of 5.6% from CY2024 in Thane, MMR for Grade A+ commercial assets. (Source: JLL Report). As per the JLL Report, Thane, MMR has evolved from an industrial town to a thriving satellite city that offers better planned developments, robust social infrastructure and a rapidly growing residential market.
- ~300 meters from the metro station providing access to Kasarvadavali station on the upcoming metro line 4 connecting Wadala, to Gaimukh, Thane, MMR. (Source: JLL Report). According to the JLL Report, Thane, MMR is also undergoing a significant number of infrastructure upgrades such as 4 metro lines, coming up in Thane, MMR which will further improve the connectivity of our asset.
- Experienced investment and asset management team with oversight and strong corporate governance through an experienced Board and marquee investors. The Investment Manager (PropShare Investment Manager Private Limited) has an experienced team comprising of 45 members as on March 31, 2025. The 11-member senior investing team comes with a cumulative experience of 63 years in commercial real estate in India.

1. ***Valuation provided by the Valuer***

   The Valuer has followed the income approach, wherein the value of the Project Titania has been assessed through the discounted cash flow method (basis term plus reversion) is likely to reveal the market value estimate of the Project Titania. The assumptions based on which the value of the Project Titania has been arrived at, have been disclosed in the section entitled ***"Valuation Report"*** on Annexure 3 of the Key Information of the Scheme.

2. ***Projections***

   The Investment Manager has provided the projected revenue from operations, EBITDA cash flow from operating activities NOI and NDCF of the Property Share Investment Trust for the Fiscals 2026, 2027, 2028 and 2029. For details of the Projections and notes thereto, see ***"Projections"*** on Annexure 2 of the Key Information of the Scheme.

3. ***Price/ Net Asset Value per Titania Unit ratio in relation to Issue Price:***

Particulars	Amount (in ₹)	Price/ Net Asset Value per Unit		
		At Floor Price	At Cap Price	At Issue Price
Net Asset Value per Titania Unit as of March 31, 2025[1]	NA[2]	[●]	[●]	[●]

(1) Net assets in accordance with the projections have been used in the analysis. For further details, refer to Projections of the Prtoperty Share Investment Trust on Annexure 2.

(2) The number of Titania Units that PropShare Titania will issue to the Titania Unitholders is not presently ascertainable. Therefore, NAV per unit can not be determined and disclosed at this stage of the Key Information of the Scheme.

4. ***Comparison with Industry Peers***

   As on date of this Key Information of the Scheme there are no other listed schemes under the small and medium real estate investment trusts in India except PropShare Platina (first scheme under Property Share Investment Trust). Accordingly, comparison with other scheme of small and medium real estate investment trust is not included.

BID/ISSUE PROGRAM	
	BID/ISSUE OPENS ON: MONDAY, JULY 21, 2025
	BID/ISSUE CLOSES ON: FRIDAY, JULY 25, 2025

ASBA* Simple, Safe, Smart way of Application!!!

*Applications Supported by Blocked Amount ("**ASBA**") is a better way of applying to offers by simply blocking the fund in the bank account.
Mandatory in public issues. No cheque will be accepted.

Continued on next page...

...continued from previous page.

In case the Price Band is revised, the Bid/Issue Period will be extended by a minimum period of one Working Day. In case of force majeure, banking strike or similar circumstances, the Bid/Issue Period will be extended for a minimum period of three Working Days, subject to the total Bid/Issue Period not exceeding 30 working days, provided that there shall not be more than two revisions to the Price Band during the Bid/Issue Period. The revised Price Band and Bid/ Issue Period will be widely disseminated by notification to the SCSBs and Stock Exchange, and also by indicating the change on the websites of the Property Share Investment Trust, the Investment Manager and the Lead Manager and at the terminals of the Members of the Syndicate. In accordance with the REIT Regulations and the SEBI Guidelines, the Price Band cannot be revised more than two times and differential price shall not be offered to any investor.

This Net Issue is being made through the Book Building Process, wherein not more than 75% of the Net Issue shall be available for allocation to Institutional Investors on a proportionate basis and minimum 25% of the Net Issue shall be available for allocation to Non Institutional Investors on proportionate basis in accordance with the REIT Regulations and the SEBI Guidelines. In case of undersubscription in any category, the unsubscribed portion in any category may be Allotted to Bidders in the other category at the discretion of our Investment Manager, in consultation with the Lead Manager and the Designated Stock Exchange. All Bidders are required to utilise the Application Supported by Blocked Amount (**"ASBA"**) process by providing details of their respective ASBA accounts and in which case the corresponding Bid Amounts will be blocked by the SCSBS as applicable to participate in the Issue. For details, see ***"Issue Information"*** from page 176 to 193 of the Key Information of the Scheme.

Bidders should note that on the basis of Bidders' PAN, DP ID, and Client ID provided by them in the Bid cum Application Form and as entered into the electronic bidding system of the Stock Exchange by the SCSBs, as the case may be, the Registrar will obtain from the Depository the demographic details including the Bidders' address, occupation and bank account details, including the nine-digit magnetic ink character recognition ("MICR") code as appearing on the cheque leaf ("Demographic Details"), from the Depository. The Demographic Details will be used for giving refunds and allocation advice (including through physical refund warrants, direct credit, NACH, NEFT and RTGS) to the Bidders. Hence, Bidders are advised to immediately update their bank account details, PAN and Demographic Details as appearing on the records of the Depository Participant and ensure that they are true and correct. Failure to do so could result in delays in dispatch/credit of refunds to Bidders at the Bidders sole risk and none of the Lead Manager, the Registrar, the Banker to the Issue, the SCSBs, the Investment Manager or the Trustee will have any responsibility or undertake any liability for this. Accordingly, Bidders should carefully fill in their depository account details in the Bid cum Application Form.

By signing the Bid cum Application Form, the Bidder is deemed to have authorized the Depositories to provide to the Registrar, on request, the required Demographic Details as available in their records.

Bids with no corresponding record available with the Depositories matching the three parameters (namely, Bidders PAN (in case of joint Bids, PAN of first Bidder), the DP ID, and Client ID), are liable to be rejected.

Listing: Our Titania Units are proposed to be listed on BSE Limited (the **"Stock Exchange"**). The PropShare Titania (acting through the Property Share Investment Trust) has received in-principle approval from the Stock Exchange for listing of our Titania Units pursuant to letter dated May 20, 2025. BSE Limited is the Designated Stock Exchange for the Issue.

SEBI Disclaimer: It is to be distinctly understood that submission of the Key Information of the Scheme to SEBI should not in any way be deemed or construed that the same has been cleared or approved by SEBI. SEBI does not take any responsibility either for the financial soundness of any scheme or the project for which the issue is proposed to be made or for the correctness of the statements made or opinions expressed in the Draft Key Information of the Scheme, Key Information of the Scheme and Final Key Information of the Scheme.

BSE Disclaimer: It is to be distinctly understood that the permission given by BSE Limited should not in any way be deemed or construed that the Key Information of the Scheme has been cleared or approved by BSE Limited nor does it certify the correctness or completeness of any of the contents of the Key Information of the Scheme. The investors are advised to refer to the Key Information of the Scheme for the full text of the Disclaimer clause of the BSE.

General Risks: Investments in Titania Units involve a degree of risk and investors should not invest any funds in the Issue unless they can afford to take the risk of losing their entire investment. For taking an investment decision, investors must rely on their own examination of the Property Share Investment Trust and the Issue. Prospective Investors are advised to read ***"Risk Factors"*** from page 41 to 54 of the Key Information of the Scheme before making an investment decision relating to the Issue. Each prospective investor is advised to consult its own advisors in respect of the consequences of an investment in the Titania Units being issued pursuant to the Key Information of the Scheme. This Key Information of the Scheme has been prepared by the Investment Manager solely for providing information in connection with the Issue. The Securities and Exchange Board of India (**"SEBI"**) and the Stock Exchange assume no responsibility for or guarantee the correctness or accuracy of any statements made, opinions expressed, or reports contained herein. Admission of the Titania Units to be issued pursuant to the Issue for trading on the Stock Exchange should not be taken as an indication of the merits of the Property Share Investment Trust or of the Titania Units. A copy of this Key Information of the Scheme has been delivered to SEBI and the Stock Exchange.

BOOK RUNNING LEAD MANAGER	REGISTRAR TO THE ISSUE	COMPLIANCE OFFICER
kotak® Investment Banking **Kotak Mahindra Capital Company Limited** 1st Floor, 27 BKC, Plot No. 27 G Block, Bandra Kurla Complex Bandra (East), Mumbai 400 051, Maharashtra, India **Tel:** +91 22 4336 0000; **E-mail:** propsharetitania.ipo@kotak.com; **Investor grievance e-mail:** kmccredressal@kotak.com, **Website:** https://investmentbank.kotak.com **Contact Person:** Ganesh Rane; **SEBI Registration No.:** INM000008704	KFINTECH EXPERIENCE TRANSFORMATION **Kfin Technologies Limited** Selenium Tower-B, Plot 31 & 32, Gachibowli, Financial District, Nanakramguda, Serilingampally, Hyderabad – 500 032, Telangana, India **Tel:** +91 40 6716 2222; **E-mail:** propshare.ipo@kfintech.com; **Investor grievance e-mail:** einward.ris@kfintech.com; **Website:** www.kfintech.com **Contact Person:** M Murali Krishna; **SEBI Registration No.:** INR000000221	**Prashant Kataria** 16th Floor, SKAV Seethalakshmi, 21/22, Kasturba Road; Bangalore, 560 001, Karnataka India **Email:** prashant.kataria@propertyshare.in **Fax:** NA; **Tel:** +91 80 3100 3902 Investors may contact the Company Secretary and Compliance Officer, BRLM or the Registrar to the Issue in case of any pre-Issue or post-Issue related grievances including non-receipt of letters of Allotment, non-credit of Allotted Titania Units in the respective beneficiary account, non-receipt of refund orders or non-receipt of funds by electronic mode, etc.

AVAILABILITY OF THE KEY INFORMATION OF THE SCHEME: Investors are advised to refer to the Key Information of the Scheme and the Risk Factors section on page 41 to 54 of the Key Information of the Scheme, contained therein before applying in the Offer. The Scheme Offer Document is available on the website of SEBI at www.sebi.gov.in, BSE at www.bseindia.com and at the website of the Book Running Lead Manager, i.e. Kotak Mahindra Capital Company Limited at https://investmentbank.kotak.com.

AVAILABILITY OF BID CUM APPLICATION FORMS: Bid-cum-Application Forms can be obtained from the Principal place of business of **Propshare Titania**, Tel: +91 80 3100 3902; Fax: NA, at the office of the BRLM: Kotak Mahindra Capital Company Limited, Tel: +91 22 4336 0000; **Syndicate Member:** Kotak Securities Limited, Tel: +91 22 6218 5410 and at the select locations of the SCSBs, Registered Brokers, RTAs and CDPs participating in the Issue. Bid-cum-Application Forms will also be available on the website of the BSE and the Designated Branches of SCSBs, the list of which is available at website of the BSE and SEBI.

APPLICATIONS SUPPORTED BY BLOCKED AMOUNT (ASBA): Investors have to apply through the ASBA process. For details on the ASBA process, please refer to the details given in the ASBA Form and the Abridged Key Information of the Scheme and also please refer to the section entitled ***"Issue Information"*** beginning on page 176 of the Key Information of the Scheme. ASBA Forms can also be downloaded from the website of the BSE. ASBA form can be obtained from the list of banks that is available on the website of SEBI at www.sebi.gov.in. ASBA Forms can be obtained from Members of the Syndicate, Registered Brokers from list provided on the website of the BSE at http://www.bseindia.com/Markets/PublicIssues/brokercentres_new.aspx?expandable=3, respectively, RTAS and CDPs from the list provided on the websites of Stock Exchange at http://www.bseindia.com/Static/Markets/PublicIssues/RtaDp.aspx?expandable=6.

SUB-SYNDICATE MEMBER: Almondz Global Securities Ltd; Amrapali Capital & Finance Services Ltd.; Anand Rathi Share & Stock Brokers Ltd.; Asit C. Mehta Investment Interrmediates Ltd; Axis Capital Limited; Centrum Broking Limited; Dalal & Broacha Stock Broking Private Limited; Finwizard Technology Pvt Limited; HDFC Securities Limited; ICICI Securities Limited; IDBI Capital Markets & Securities Limited; IIFL Securities Ltd; JM Financial Services Limited; Jobanputra Fiscal Services Private Limited; Kantilal Chhaganlal Sec Pvt Ltd; KJMC Capital Market Services Limited; LKP Securities Limited; Motilal Oswal Securities Limited; Nuvama Wealth and Investment Limited (Edelweiss Broking Limited); Prabhudas Lilladher Pvt Ltd; Pravin Ratilal Share & Stock Brokers Limited; RR Equity Brokers Private Limited; SBIcap Securities Limited; Sharekhan Ltd; SMC Global Securities Ltd; YES Securities (India) Limited.

Escrow Collection Bank, Public Offer Bank and Refund Bank: Kotak Mahindra Bank Limited

All capitalized terms used herein and not specifically defined shall have the same meaning as ascribed to them in the Key Information of the Scheme.

For **PROPSHARE TITANIA**
On behalf of the Board of Directors
Sd/-
Prashant Kataria
Compliance Officer

Place: Bangalore
Date: July 11, 2025

PROPSHARE TITANIA, acting through its Investment Manager, is proposing, subject to receipt of requisite approvals, market conditions and other considerations, to make an initial offer of its Titania Units representing an undivided beneficial interest in Propshare Titania, and has filed the Key Information of the Trust dated July 11, 2025 and Key Information of the Scheme dated July 11, 2025 with SEBI and the BSE. The Key Information of the Scheme and Key Information of the Trust are available on the website of SEBI at www.sebi.gov.in, BSE at www.bseindia.com as well as on the website of the Book Running Lead Manager i.e. BRLM: Kotak Mahindra Capital Company Limited at https://investmentbank.kotak.com. Potential investors should note that investment in the Titania Units involves a degree of risk, and for details relating to the same, should refer to the section ***"Risk Factors"*** of the Key Information of the Scheme. These materials are not for publication or distribution, directly or indirectly, in or into the United States. These materials are not an offer for the sale of the Titania Units or other securities in the United States or elsewhere. The Titania Units referred to herein have not been and will not be registered under the U.S. Securities Act of 1933, as amended and may not be offered or sold within the United States, except pursuant to an exemption from registration. No public offering of the Titania Units or other securities is being made in the United States.

CONCEPT

ಸಮಾಚಾರ ಸಣ್ಣದಲ್ಲ

ಕೆ.ಬಿ.ಗಣಪತಿ ನಿಧನಕ್ಕೆ ಗಣ್ಯರ ಸಂತಾಪ

ರಾಷ್ಟ್ರೀಯ ಸ್ವಯಂಸೇವಕ ಸಂಘದೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದ ಕೆ.ಬಿ. ಗಣಪತಿಯವರು ಮಂಥನ ವೈಚಾರಿಕ ವೇದಿಕೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಅವರ ಆತ್ಮಕ್ಕೆ ಸದ್ಗತಿ ದೊರಕಲಿ ಹಾಗೂ ಬಂಧುಬಳಗಕ್ಕೆ ಅವರ ಅಗಲಿಕೆಯ ದುಃಖವನ್ನು ತುಂಬು ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ದತ್ತಾತ್ರೇಯ ಹೊಸಬಾಳೆ, ಕಾರ್ಯದರ್ಶಿ
ರಾಷ್ಟ್ರೀಯ ಸ್ವಯಂಸೇವಕ ಸಂಘ



ಹಿರಿಯ ಪತ್ರಕರ್ತರಾದ ಕೆ.ಬಿ.ಗಣಪತಿ ಅವರ ನಿಧನಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ. ಘನತೆಯಿಂದ ಪತ್ರಿಕೋದ್ಯಮ ನಡೆಸಿದ ಗಣಪತಿ ಅವರ ನಿಧನದಿಂದ ಸುದ್ದಿಮನೆಯ ಹಿರಿಯ ಕೊಂಡಿಯೊಂದು ಕಳಚಿದಂತಾಗಿದೆ. ಗಣಪತಿ ಅವರ ಆತ್ಮಕ್ಕೆ ಶಾಂತಿ ಸಿಗಲಿ, ದುಃಖ ಭರಿಸುವ ಶಕ್ತಿಯನ್ನು ದೇವರು ಕರುಣಿಸಲಿ.

ಶಿವಾನಂದ ತಗಡೂರು, ರಾಜ್ಯಾಧ್ಯಕ್ಷ, ಕೆಯುಡಬ್ಲ್ಯೂಜೆ

ಚಿಂತನಾ ಕಾರ್ಯಾಗಾರ

ಬೆಂಗಳೂರು: ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಮತ್ತು ನಾವೀನ್ಯತೆಯಲ್ಲಿ ಪ್ರವರ್ತಕ ವಿನ್ಯಾಸಚಿಂತನೆಯ ಪ್ರಸ್ತುತತೆ ಕುರಿತಂತೆ (ಜಿಡಿಟಿಎ) ಜಾಗತಿಕ ವಿನ್ಯಾಸ ಚಿಂತನಾ ಒಕ್ಕೂಟದ ಭಾರತ ಅಧ್ಯಾಯನ ಉದ್ಘಾಟಿಸಲಾ ಯಿತು. ಶಿಕ್ಷಣ, ಉದ್ಯಮ ಮತ್ತು ಸಾಮಾಜಿಕ ನಾವೀನ್ಯತೆಯಲ್ಲಿ ನ್ಯಾಸಚಿಂತನೆಯು ಬೆಳೆಯುತ್ತಿರುವ ಪ್ರಸ್ತುತತೆ ಯನ್ನುಅನ್ವೇಷಿಸಲು ಶೈಕ್ಷಣಿಕ, ಉದ್ಯಮ ಮತ್ತು ಜಾಗತಿಕ ಸಂಸ್ಥೆಗಳ ಒಟ್ಟಾರೆ ಜಾಗತಿಕ ಮತ್ತು ರಾಷ್ಟ್ರೀಯ ಪಾಲುದಾರರ ಸಹಯೋಗದಲ್ಲಿ ಮಾನವ ಕೇಂದ್ರಿತ, ಅಂತರ್ ಶಿಸ್ತೀಯ ಕಲಿಕೆ, ನಾಯಕತ್ವ ಮತ್ತು ಪರಿಹಾರ ವನ್ನು ಕಂಡುಕೊಳ್ಳಲು ಈ ವಿಚಾರಗೋಷ್ಠಿ ಒಂದು ಮಹತ್ವದ ವೇದಿಕೆಯಾಯಿತು. ಗ್ಲೋಬಲ್ ಡಿಸೈನ್ ಥಿಂಕಿಂಗ್ ಅಲೈಯನ್ಸ್(ಜಿಡಿಟಿಎ) ಅಧ್ಯಕ್ಷ ಮತ್ತುಜರ್ಮ ನಿಯ ಎಚ್‌ಪಿಐ ಸ್ಕೂಲ್ ಆಫ್ ಡಿಸೈನ್ ಥಿಂಕಿಂಗ್ ನ ನಿರ್ದೇಶಕ ಪ್ರೊ.ಉಲೀನ್‌ಬರ್ಗ್ ಅವರು ಮಾತನಾಡಿ, ಇಂದಿನ ಯುಗದಲ್ಲಿ ಜಾಗತಿಕ ವಿನ್ಯಾಸ ಚಿಂತನೆಯು ಮಹತ್ವದ್ದಾಗಿದ್ದು, ನಮ್ಮ ದೈನಂದಿನ ಜೀವನದಲ್ಲಿ ತಂತ್ರಜ್ಞಾನವನ್ನು ಹೆಚ್ಚು ಚಿಂತನಶೀಲವಾಗಿ ಮತ್ತು ಜವಾಬ್ದಾರಿಯುತವಾಗಿ ಸಂಯೋಜಿಸಲು ಸಹಕಾರಿಯಾ ಗಿದೆ ಎಂದು ಹೇಳಿದರು. ಸಿಎಂಆರ್ ವಿಶ್ವದ್ಯಾಲಯದ ಡಾ.ತ್ರಿಸ್ತಾರಾಮಮೂರ್ತಿ ಮಾತನಾಡಿ, ಜಾಗತಿಕ ವಿನ್ಯಾಸ ಚಿಂತನಾ ವಿಚಾರಗೋಷ್ಠಿ ಆಯೋಜಿಸುವ ಮೂಲಕ ನಾವು ಸಿಎಂಆರ್ ವಿಶ್ವವಿದ್ಯಾಲಯ ಜಿಡಿಟಿಎಯ ಭಾಗವಾಗಿದ್ದೆ ಹೆಮ್ಮೆ. ಶಿಕ್ಷಣ ಮತ್ತು ನಾವಿನ್ಯತೆಯನ್ನು ಪೋಷಿಸುವಲ್ಲಿ ಜಿಡಿಟಿಎ ದೇಶ ಮಾತ್ರವಲ್ಲ ಜಾಗತಿಕ ಶಿಕ್ಷಣವನ್ನು ಪರಿವರ್ತಿಸುವ ಸಾಮರ್ಥ್ಯ ಇರುವ ಒಂದು ಉಪಕ್ರಮವಾಗಿದೆ ಎಂದರು.

ಅಕ್ರಮ ವಲಸಿಗರನ್ನು ವಾಪಸ್ ಕಳುಹಿಸುವಂತೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಆಗ್ರಹ

ಅಕ್ರಮ ವಲಸಿಗರ ವಿಚಾರದಲ್ಲಿ ರಾಜಕೀಯ ಬೇಡ

ವಿಶ್ವವಾಣಿ ಸುದ್ದಿಮನೆ ಮಹದೇವಪುರ

ಅಕ್ರಮ ಬಾಂಗ್ಲಾ ನೆಲಸಿಗರ ವಾಪಸ್ ಕಳುಹಿಸುವುದರಲ್ಲಿ ರಾಜಕೀಯ ಬೇಡ, ಇಂತಹವರಿಗೆ ಅವಕಾಶ ಕೊಟ್ಟರೆ ಕರ್ನಾಟಕವೂ ಪಶ್ಚಿಮ ಬಂಗಾಳದಂತೆ ಆಗುತ್ತದೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ರಾಮಗೊಂಡನಹಳ್ಳಿ ಸರಕಾರಿ ಶಾಲಾ ಮೈದಾನದಲ್ಲಿ ನಡೆದ ಅಕ್ರಮವಾಗಿ ನೆಲೆಸುತ್ತಿರುವ ಬಾಂಗ್ಲಾದೇಶದ ವಲಸಿಗರನ್ನು ಗುರುತಿಸಿ, ಮರಳಿ ಅವರ ದೇಶಕ್ಕೆ ಕಳುಹಿಸುವ ಜನ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಕ್ರಮ ಬಾಂಗ್ಲಾದೇಶಿಗರಿಗೆ ಆಶ್ರಯ ನೀಡಿದವರಿಂದ ಇಂದು ಅಸುರಕ್ಷತೆಗೆ ಕಾರಣವಾಗಿದೆ. ಅವರಿಗೆ ನೆಲೆಯನ್ನು ಕೊಟ್ಟವರು, ಉದ್ಯೋಗ ನೀಡಿದವರು ದಯವಿಟ್ಟು ಅವರನ್ನು ಬಿಡಿಸಿ ನಮ್ಮ ಭಾರತೀಯರಿಗೆ, ಕನ್ನಡಿಗರಿಗೆ, ಉತ್ತರ ಕರ್ನಾಟಕದ ಜನರಿಗೆ ಕೊಡಿ. ರಾಜ್ಯ ಸರಕಾರ ಮತ್ತು ಪೊಲೀಸ್ ಅಧಿಕಾರಿಗಳು ಈ ಅಕ್ರಮ ಬಾಂಗ್ಲಾದೇಶಿಗಳನ್ನು ಪತ್ತೆ ಹಚ್ಚಿ ಮತ್ತೆ ಅವರ ದೇಶಕ್ಕೆ ಕಳುಹಿಸಬೇಕು. ಕೆಲ ಅಕ್ರಮ ವಲಸಿಗರು ನಕಲಿ ಆಧಾರ್ ಕಾರ್ಡ್ ಹೊಂದಿದ್ದಾರೆ. ಅವರಿಗೆ ನಕಲಿ ಆಧಾರ್ ಕಾರ್ಡ್ ಮಾಡುವ ಏಜೆಂಟ್‌ಗಳು ಕೇವಲ ಪಶ್ಚಿಮ ಬಂಗಾಳ ಮಾತ್ರವಲ್ಲ ನಮ್ಮ ರಾಜ್ಯದಲ್ಲೂ ಇದ್ದಾರೆ. ಅಂತಹವರನ್ನು ಪತ್ತೆ ಹಚ್ಚಿ ಬಂಧಿಸಬೇಕು ಎಂದು ಆಗ್ರಹಿಸಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಅಕ್ರಮ ವಲಸಿಗರ ವಿರುದ್ಧ ಜನ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ, ಕೇಂದ್ರ ಮಾಜಿ ಸಚಿವ ಡಾ.ಜಿ.ಎಂ.ಸಿದ್ದೇಶ್ವರ, ಶಾಸಕರಾದ ಮಂಜುಳಾ ಅರವಿಂದ ಲಿಂಬಾವಳಿ, ರಮೇಶ್ ಜಾರಕಿಹೊಳಿ, ಹರೀಶ್, ಮಾಜಿ ಸಚಿವ ಕುಮಾರ್ ಬಂಗಾರಪ್ಪ, ಮಾಜಿ ಸಂಸದ ಬಿ.ವಿ.ನಾಯ್ಕ್ ಮತ್ತಿತರರಿದ್ದರು.

ಲಿಂಬಾವಳಿ ಅವರಿಂದ ರಾಜಕೀಯೇತರ ಹೋರಾಟ

ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಬಾಂಗ್ಲಾದೇಶ ನಿವಾಸಿಗಳನ್ನು ಗುರುತಿಸಿ ಹೊರಹಾಕುವ ಕಾರ್ಯ ತ್ವರಿತವಾಗಿ ಮಾಡಬೇಕಿದೆ. ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ನೇತೃತ್ವದಲ್ಲಿ ವಕ್ಫ್ ಬೋರ್ಡ್ ವಿರುದ್ಧ ಹೋರಾಟ ,ವಾಲ್ಮೀಕಿ ಕಲ್ಯಾಣ ಹಣ ದುರುಪಯೋಗ ಸೇರಿದಂತೆ ಹಲವು ಜನಪರ ಹೋರಾಟ ಮಾಡಿದ್ದು, ಅರವಿಂದ ಲಿಂಬಾವಳಿ ಅವರು ರಾಜಕೀಯೇತರ ಹೋರಾಟ ಮಾಡುತ್ತಾರೆ ಇದರಿಂದ ನಮ್ಮ ದೇಶದ ಹಲವು ಸಮಸ್ಯೆಗಳಿಗೆ ಮುಕ್ತಿ ದೊರೆಯುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಕ್ರಮ ಬಾಂಗ್ಲಾದೇಶಿ ವಲಸಿಗರ ವರದಿ ಸಲ್ಲಿಸಲಾಯಿತು. ಕೇಂದ್ರದ ಮಾಜಿ ಸಚಿವ ಡಾ.ಜಿ.ಎಂ.ಸಿದ್ದೇಶ್ವರ, ಶಾಸಕರಾದ ಮಂಜುಳಾ ಅರವಿಂದ ಲಿಂಬಾವಳಿ, ರಮೇಶ್ ಜಾರಕಿಹೊಳಿ, ಹರೀಶ್, ಮಾಜಿ ಸಚಿವ ಕುಮಾರ್ ಬಂಗಾರಪ್ಪ, ಮಾಜಿ ಸಂಸದ ಬಿ.ವಿ.ನಾಯ್ಕ್, ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ, ನಗರ ಮಂಡಲದ ಅಧ್ಯಕ್ಷ ಎನ್.ಆರ್.ಶ್ರೀಧರ್ ರೆಡ್ಡಿ, ಗ್ರಾಮಾಂತರ ಮಂಡಲದ ಅಧ್ಯಕ್ಷ ಎಚ್.ಎಸ್.ಪಿಳ್ಳಪ್ಪ, ರಾಜ್ಯ ಪರಿಷತ್ ಸದಸ್ಯ ಎಲ್.ರಾಜೇಶ್, ಬೆಂಗಳೂರು ಕೇಂದ್ರ ಪ್ರ.ಕಾರ್ಯದರ್ಶಿ ಮಹೇಂದ್ರ ಮೋದಿ ಉಪಸ್ಥಿತರಿದ್ದರು.

ಒಂದು ತಿಂಗಳ ವೇತನದಲ್ಲಿ ಎಚ್‌ಎಸ್‌ವಿ ಹೆಸರಿನಲ್ಲಿ ದತ್ತಿನಿಧಿ ಸ್ಥಾಪನೆ : ದಿನೇಶ್ ಗೂಳಿಗೌಡ

ಎಚ್‌ಎಸ್‌ವಿ ಕನ್ನಡ ಸಾಹಿತ್ಯ ಕ್ಷೇತ್ರದ ಜೀವನದಿ

ಬೆಂಗಳೂರು: ಕವಿ ಡಾ.ಎಚ್.ಎಸ್. ವೆಂಕಟೇಶಮೂರ್ತಿ ಅವರು ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಹೆಸರು ಸಾಹಿತ್ಯ ಲೋಕದಲ್ಲಿ ಸ್ಥಿರಸ್ಥಾಯಿಯಾಗಿ ಉಳಿಯಬೇಕು ಎಂಬ ಉದ್ದೇಶದಿಂದ ರಾಜ್ಯ ಸರಕಾರ ನನಗೆ ನೀಡುವ ಒಂದು ತಿಂಗಳ ವೇತನದ ಹಣದಲ್ಲಿ ಎಚ್‌ಎಸ್‌ವಿ ಹೆಸರಿನಲ್ಲಿ ದತ್ತಿನಿಧಿ ಸ್ಥಾಪಿಸಲಾಗುವುದು ಎಂದು ಶಾಸಕ ದಿನೇಶ್ ಗೂಳಿಗೌಡ ಹೇಳಿದರು.

ಉಲ್ಲಾಳು ಉಪಕಾರ್ ಕ್ಲಬ್ ಹೌಸ್‌ನ ಸಭಾಂಗಣದಲ್ಲಿ ಸವಿಗಾನಲಹರಿ ಸುಗಮ ಸಂಗೀತ ಶಾಲೆ ವತಿಯಿಂದ ಆಯೋಜಿಸಿದ್ದ, ಎಚ್‌ಎಸ್‌ವಿ ಗೀತ ನಮನ ಮತ್ತು ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ನಮ್ಮನ್ನು ಅಗಲಿದ ಕವಿ ಡಾ.ಎಚ್.ಎಸ್.ವೆಂಕಟೇಶಮೂರ್ತಿ ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡುವುದರ ಜತೆಗೆ ಸಾಹಿತ್ಯ ಕ್ಷೇತ್ರವನ್ನು ಆಧುನೀಕರಣಗೊಳಿಸಿದವರು. ಅವರು ಸಾಹಿತ್ಯ ಕ್ಷೇತ್ರದ ಜೀವನದಿ, ಅವರ ಲೇಖನಿಯಿಂದ ಮೂಡಿಬಂದ ಗೀತೆಗಳ ಮೂಲಕ ಈ ಜೀವನದಿ ಎಂದು ಬತ್ತುವುದಿಲ್ಲ, ಕವಿ, ನಾಟಕಕಾರ, ಕಾದಂಬರಿಕಾರ, ವಿಮರ್ಶಕ, ಮಕ್ಕಳ ಸಾಹಿತಿ, ಮತ್ತು ಚಿತ್ರಗೀತೆ ರಚನೆಕಾರರಾಗಿ ಬಹುಮುಖ ಪ್ರತಿಭೆ ಹೊಂದಿದವರು. ಕಾವ್ಯವನ್ನೇ ಜೀವಿಸುತ್ತಿದ್ದ ಎಚ್‌ಎಸ್‌ವಿ ಅವರು, ಹಾಡುಗಳಲ್ಲಿ ಸದಾ ಜೀವಂತ. ಭೌತಿಕವಾಗಿ ಇಲ್ಲದಿದ್ದರೂ ಸಾಹಿತ್ಯದ ಮೂಲಕ, ಗೀತೆಗಳ ಮೂಲಕ ಕನ್ನಡಿಗರ ಮನಸಿನಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮಂಗಳಾರವಿ, ರಾಘವೇಂದ್ರ ಬೀಜಾಡಿ, ವರ್ಷ ಸುರೇಶ್, ವೆಂಕಟೇಶಮೂರ್ತಿ ಶಿರೂರ, ರವಿಕೃಷ್ಣ ಮೂರ್ತಿ, ತನ್ವಿ.ಡಿ.ಗೌಡ ಮತ್ತು ಸವಿಗಾನಲ ಹರಿ ಸುಗಮ ಸಂಗೀತ ಶಾಲೆಯ ವಿದ್ಯಾರ್ಥಿಗಳು ಡಾ.ಹೆಚ್.ಎಸ್.ವೆಂಕಟೇಶ ಮೂರ್ತಿ ಅವರ ವಿರಚಿತ ಗೀತೆಗಳ ಗಾಯನ ಪ್ರಸ್ತುತಪಡಿಸಿದರು. ಎಚ್‌ಎಸ್‌ವಿ ಅವರ ಹಿರಿಯ ಪುತ್ರ ಎಚ್.ವಿ.ಸಂಜಯ, ಸವಿಗಾನ ಲಹರಿ ಸುಗಮ ಸಂಗೀತ ಶಾಲೆ ಅಧ್ಯಕ್ಷ ಟಿ. ರಾಜಾರಾಮ್ ಉಪಸ್ಥಿತರಿದ್ದರು.

ಸವಿಗಾನಲಹರಿ ಸುಗಮ ಸಂಗೀತ ಶಾಲೆ ಆಯೋಜಿಸಿದ್ದ ಎಚ್‌ಎಸ್‌ವಿ ಗೀತ ನಮನ ಮತ್ತು ನುಡಿ ನಮನ ಕಾರ್ಯಕ್ರಮದಲ್ಲಿ ಶಾಸಕ ದಿನೇಶ್ ಗೂಳಿಗೌಡ ಅವರನ್ನು ಸನ್ಮಾನಿಸಲಾಯಿತು. ಎಚ್‌ಎಸ್‌ವಿ ಅವರ ಹಿರಿಯ ಪುತ್ರ ಎಚ್.ವಿ.ಸಂಜಯ, ಸಂಗೀತ ಶಾಲೆ ಅಧ್ಯಕ್ಷ ಟಿ.ರಾಜಾರಾಮ್ ಇದ್ದರು.

ಎಚ್‌ಎಸ್‌ವಿ ಅವರ ಸಾಹಿತ್ಯದಲ್ಲಿ ಜಾನಪದ ಮೆರಗಿದೆ, ಹಳ್ಳಿಯ ಸೊಗಡಿದೆ. ನಗುಮುಖದ ಈ ಕವಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡದ ತೇರನ್ನು ಕೂಡ ಎಳೆದಿದ್ದಾರೆ. ಎಚ್‌ಎಸ್‌ವಿ ಕನ್ನಡ ನಾಡಿನ ಅಸಾಧಾರಣ ಪ್ರತಿಭೆ. ಅವರ ಹೆಸರಿನಲ್ಲಿ ಪ್ರತಿ ವರ್ಷ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಯುವ ಸಾಹಿತಿಗಳು, ಗಾಯಕರು ಹಾಗೂ ಕಲಾವಿದರನ್ನು ಪ್ರೋತ್ಸಾಹಿಸಲು ಅವರ ಹೆಸರಿನಲ್ಲಿ ದತ್ತಿನಿಧಿ ಸ್ಥಾಪಿಸಲಾಗುವುದು.

–ದಿನೇಶ್ ಗೂಳಿಗೌಡ, ಶಾಸಕ

ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಮಹಾಲಿಂಗೇಗೌಡ ಮುದ್ದನಘಟ್ಟ ಅಭಿಮತ

ಹೊರಗುತ್ತಿಗೆ ನೌಕರರ ಕ್ಷೇಮಾಭಿವೃದ್ಧಿಯೇ ಸಂಘದ ಗುರಿ

ಬೆಂಗಳೂರು: ಸರಕಾರಿ ಇಲಾಖೆಗಳಲ್ಲಿ ಹೊರಗುತ್ತಿಗೆ ಮುಖಾಂತರ ಕೆಲಸ ನಿರ್ವಹಿಸುತ್ತಿರುವ ನೌಕರರ ಹಿತರಕ್ಷಣೆ ಮತ್ತು ಕಾನೂನು ಬದ್ಧ ಬೇಡಿಕೆಗಳ ಈಡೇರಿಕೆಯೇ ಕರ್ನಾಟಕ ಸರಕಾರಿ ಹೊರಗುತ್ತಿಗೆ ನೌಕರರ ಸಂಘದ ಪ್ರಮುಖ ಗುರಿ ಎಂದು ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಮಹಾಲಿಂಗೇಗೌಡ ಮುದ್ದನಘಟ್ಟ ಹೇಳಿದರು.

ಕರ್ನಾಟಕ ಸರಕಾರಿ ಹೊರಗುತ್ತಿಗೆ ನೌಕರರ ಸಂಘದ ವತಿಯಿಂದ ಏರ್ಪಡಿಸಿದ ಜಿಲ್ಲಾ ಅಧ್ಯಕ್ಷರುಗಳ ಜಾಗೃತ ಕಾರ್ಯಾಗಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸರಕಾರಿ ಇಲಾಖೆಗಳಲ್ಲಿ ಹೊರಗುತ್ತಿಗೆ ಮುಖಾಂತರ ಕೆಲಸ ನಿರ್ವಹಿಸುತ್ತಿರುವ ನೌಕರರ ಹಿತರಕ್ಷಣೆ ಮತ್ತು ಕಾನೂನು ಬದ್ಧ ಬೇಡಿಕೆಗಳ ಈಡೇರಿಕೆಗಾಗಿ, ಸರಕಾರಿ ಹೊರಗುತ್ತಿಗೆ ನೌಕರರ ಸಂಘ ಅಸ್ತಿತ್ವಕ್ಕೆ ಬಂದು ಹೊರಗುತ್ತಿಗೆ ನೌಕರರ ಪರ ರಚನಾತ್ಮಕ ಹೋರಾಟ ಮಾಡುತ್ತಿರುವುದು ಶ್ಲಾಘನೀಯ. ಗುತ್ತಿಗೆದಾರರ ಸಂಘ ಮತ್ತು ಸರಕಾರಿ ಹೊರಗುತ್ತಿಗೆ ನೌಕರರ ಸಂಘ ಅಣ್ಣ ತಮ್ಮಂದಿರ ಸಹೋದರತ್ವದ ಅವಿನವಭಾವ ಸಂಬಂಧ ಮತ್ತು ಒಂದೇ ಉದ್ದೇಶದ ಸಾಮ್ಯತೆ ಹೊಂದಿದೆ. ಸರಕಾರಿ ಇಲಾಖೆಗಳಲ್ಲಿ ಹೊರಗುತ್ತಿಗೆ ಕೆಲಸ ನಿರ್ವಹಿಸುತ್ತಿರುವ ನೌಕರರ ಕಲ್ಯಾಣ ಮತ್ತು ಹಿತ ರಕ್ಷಣೆ ಕಾಪಾಡುವುದು ಮಾನವ ಸಂಪನ್ಮೂಲ ಸೇವೆ ಒದಗಿಸುವ ಗುತ್ತಿಗೆದಾರ ಸಂಘದ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸರಕಾರಿ ಹೊರಗುತ್ತಿಗೆ ನೌಕರರ ಸದಸ್ಯತ್ವ ಅಭಿಯಾನದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಕೆಎಚ್‌ಎಸ್‌ಆರ್‌ಪಿಸಿ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ರೆಡ್ಡಿ , ಕಾರ್ಯಾಧ್ಯಕ್ಷ ನಾಗಪ್ಪ ಕವಲೂರು, ಕಿಯೋನಿಕ್ಸ್ ನಿವೃತ್ತ ವ್ಯವಸ್ಥಾಪಕ ಡಿ.ಪರಮೇಶ್ವರಪ್ಪ ಉಪಸ್ಥಿತರಿದ್ದರು.

ಕರ್ನಾಟಕ ಸರಕಾರಿ ಹೊರಗುತ್ತಿಗೆ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರುಗಳ ಜಾಗೃತ ಕಾರ್ಯಾಗಾರವನ್ನು ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಮಹಾಲಿಂಗೇಗೌಡ ಮುದ್ದನಘಟ್ಟ ಉದ್ಘಾಟಿಸಿದರು. ಸರಕಾರಿ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ಸುಧಾಕರ್ ಇದ್ದರು.

ಕನಿಷ್ಠ ವೇತನ ಹೆಚ್ಚಿಸಲು ಆಗ್ರಹ

ಸರಕಾರಿ ಹೊರಗುತ್ತಿಗೆ ನೌಕರ ಸಂಘದ ರಾಜ್ಯಾಧ್ಯಕ್ಷ ಸುಧಾಕರ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರಕಾರದ ಇಲಾಖೆಗಳಲ್ಲಿ ಹೊರಗುತ್ತಿಗೆ ಮುಖಾಂತರ ಕೆಲಸ ನಿರ್ವಹಿಸುತ್ತಿರುವ ನೌಕರರು ಸಂಘದ ಸದಸ್ಯತ್ವ ಪಡೆದು ತಮ್ಮ ಹಿತರಕ್ಷಣೆ ಮತ್ತು ಕಾನೂನು ಬದ್ಧ ಬೇಡಿಕೆ ಈಡೇರಿಸಿಕೊಳ್ಳಲು ಸಂಘದ ಜತೆ ಕೈಜೋಡಿಸಬೇಕು. ಈಗಾಗಲೇ ಸರಕಾರದ ಮುಂದೆ ಇರುವ ಹೊರಗುತ್ತಿಗೆ ನೌಕರರಿಗೆ ಕನಿಷ್ಠ ವೇತನ ಹೆಚ್ಚಳ ಮಾಡುವ ಪ್ರಾಸ್ತಾವಿತ ಕರಡು ನೀತಿ ಜಾರಿಗೆ ತಂದು ರಾಜ್ಯಾದ್ಯಂತ ಸುಮಾರು ಮೂರು ಲಕ್ಷಕ್ಕೂ ಅಧಿಕ ಹೊರಗುತ್ತಿಗೆ ನೌಕರರ ಬದುಕಿಗೆ ಬೆಳಕಾಗಬೇಕು ಎಂದು ಆಗ್ರಹಿಸಿದರು.

ಸುತ್ತೂರು ಮಠದಲ್ಲಿ ನಡೆದ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಸಭೆಯಲ್ಲಿ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನೂತನ ಟ್ರಸ್ಟಿಗಳನ್ನು ಸನ್ಮಾನಿಸಿದರು. ಟ್ರಸ್ಟ್‌ನ ಅಧ್ಯಕ್ಷ ರಮೇಶ ಕಣ್ಣನ್, ಉಪಾಧ್ಯಕ್ಷ ಎಂ.ನಾಗರಾಜ್, ಕಾರ್ಯದರ್ಶಿ ಟಿ.ಪಿ.ಪ್ರಭುಸ್ವಾಮಿ, ಖಜಾಂಚಿ ರಘುನಂದನ್, ಎನ್.ರಾಘವನ್, ಪ್ರೊ.ಕೆ.ರಾಮಮೂರ್ತಿರಾವ್, ಡಾ.ಪೂರ್ಣಿಮಾ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಸೈನಿಕ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ

ಬೆಂಗಳೂರು: ನಗರದ ಬಿಎಸ್‌ಎಫ್ ನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಡಿಜಿಟಲ್ ಸಂವಹನ ಕೇಂದ್ರ (ಸಿಇಡಿಸಿಸಿ) ಗಡಿ ಭದ್ರತಾ ಪಡೆ ಹಾಗೂ (ಬಿಎಸ್‌ಎಫ್) ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ (ತಾಂತ್ರಿಕ ಕೋರ್ಸ್‌ಗಳನ್ನು ಪೂರೈಸಿದ ಸೈನಿಕ ಶಿಬಿರಾರ್ಥಿಗಳ ಮೂಲಭೂತ ತಾಂತ್ರಿಕ ವ್ಯಾಪಾರ ಕೋರ್ಸ್‌ನ ಸಮಾರೋಪ ಸಮಾರಂಭ ನಡೆಯಿತು.

ತರಬೇತಿ ಪೂರ್ಣಗೊಳಿಸಿದ ಶಿಬಿರಾರ್ತಿಗಳಿಗೆ ಐಜಿ ದಿನೇಶ್ ಕುಮಾರ್ ಯಾದವ್, ಹೇಮಂತ್ ಕುಮಾರ್ ಜಾ ಪ್ರಮಾಣ ಪತ್ರ ಹಾಗೂ ಪದಕ ಪ್ರದಾನ ಮಾಡಿದರು. ನಂತರ ಮಾತನಾಡಿದ ಐಜಿ ದಿನೇಶ್ ಕುಮಾರ್ ಯಾದವ್, ಒಟ್ಟು 168 ಪ್ರಶಿಕ್ಷಣಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು, ಈ ಕೋರ್ಸ್ ಸಂವಹನ ವ್ಯವಸ್ಥೆಗಳು, ಐಟಿ, ಸೈಬರ್, ನೆಟ್ವರ್ಕಿಂಗ್, ಸೈಬರ್ ಭದ್ರತೆ, ಎಚ್‌ಎಫ್/ವಿಎಚ್‌ಎಫ್ /ಯುಎಚ್‌ಎಫ್ ಸಂವಹನ, ಅಂಗಡಿ ನಿರ್ವಹಣೆ, ಜಿಇಎಂ, ಜನರೇಟರ್ ಕಾರ್ಯಾಚರಣೆಗಳು, ಅಳತೆ ಉಪಕರಣಗಳು, ರೇಡಿಯೋ ಸೆಟ್‌ಗಳು, ಬಿಗ್ ಡೇಟಾ, ಎಐ ಮತ್ತು ಡ್ರೋನ್/ಆಂಟಿ-ಡ್ರೋನ್ ತಂತ್ರಜ್ಞಾನ,ಮೂಲಭೂತ ತಾಂತ್ರಿಕ ವ್ಯಾಪಾರ ಕೋರ್ಸ್ ಇತ್ಯಾದಿಗಳಂತಹ ನಿರ್ಣಾಯಕ ಕ್ಷೇತ್ರಗಳನ್ನು ತರಬೇತಿ ಒಳಗೊಂಡಿದೆ ಎಂದರು.

ಸೈನಿಕ ಶಿಬಿರಾರ್ಥಿಗಳ ಮೂಲಭೂತ ತಾಂತ್ರಿಕ ವ್ಯಾಪಾರ ಕೋರ್ಸ್‌ನ ಸಮಾರೋಪ ಸಮಾರಂಭ ನಡೆಯಿತು.

ಆಹಾರ ಯೋಜನೆಯಿಂದ ಬೀದಿ ನಾಯಿಗಳ ನಿಯಂತ್ರಣ ಸಾಧ್ಯ: ವಿಕಾಸ್ ಕಿಶೋರ್

ಬೆಂಗಳೂರು: ಬಿಬಿಎಂಪಿ ಪಶುಪಾಲನಾ ವಿಭಾಗದ ವತಿಯಿಂದ ಬೀದಿ ನಾಯಿಗಳಿಗೆ ಆಹಾರ ನೀಡುವ ಸಲುವಾಗಿ ಟೆಂಡರ್ ಆಹ್ವಾನಿಸಲಾಗಿದ್ದು, ಇದರ ಸಾಧಕ-ಬಾಧಕಗಳನ್ನು ಪರಿಶೀಲಿಸಿದ ನಂತರ ಅಂತಿಮ ನಿರ್ಣಯಕ್ಕೊಳಪಟ್ಟಿದೆ ಎಂದು ಪಶುಪಾಲನಾ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ಬಿಬಿಎಂಪಿಯು ಬೀದಿ ನಾಯಿಗಳಿಗೆ ಆಹಾರ ನೀಡುವುದನ್ನು ಕೋವಿಡ್ ಸಮಯದಲ್ಲಿ ಕೈಗೆತ್ತಿಕೊಂಡಿತ್ತು. ಕಳೆದ ವರ್ಷವೂ ನಿಗದಿತ ಸಂಖ್ಯೆಯಲ್ಲಿ ನಾಯಿಗಳಿಗೆ ಆಹಾರ ನೀಡಲಾಗಿತ್ತು. ಈ ಯೋಜನೆಯು ಒಂದು ಸುಧಾರಣೆಯಾಗಿದೆ ಮತ್ತು ಕೇಂದ್ರ ಸರಕಾರವು ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಯ ಮೂಲಕ ವ್ಯಾಖ್ಯಾನಿಸಿದ ಪ್ರಾಣಿ ಜನನ ನಿಯಂತ್ರಣ ನಿಯಮಗಳು, 2023ರ ಪ್ರಕಾರ ಕಾನೂನಾತ್ಮಕ ಅವಶ್ಯಕತೆಯಾಗಿದೆ. ಬಿಬಿಎಂಪಿ ಈಗ ಪ್ರತಿ ವಲಯದಲ್ಲಿ ಆಹಾರ ತಯಾರಕರನ್ನು ಆಯಾ ವಲಯ ಸಹಾಯಕ ನಿರ್ದೇಶಕರು ಗುರುತಿಸಿದ ಮತ್ತು ಮೇಲ್ವಿಚಾರಣೆ ಮಾಡುವ ಆಹಾರ ನೀಡುವ ಸ್ಥಳಗಳಲ್ಲಿ ಸಮತೋಲನ ಆಹಾರ ಒದಗಿಸಲು ಟೆಂಡರ್ ಆಹ್ವಾನಿಸಿದೆ. ಈ ಯೋಜನೆಯಿಂದ ಬೀದಿನಾಯಿಗಳನ್ನು ನಿಯಂತ್ರಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಯೋಜನೆಯ ವಿವರ: ಬೀದಿ ನಾಯಿಗಳಿಗೆ ಆಹಾರ ನೀಡುವ ಯೋಜನೆಗೆ ಒಟ್ಟು 2.88 ಕೋಟಿ ರು. ವೆಚ್ಚ ತಗುಲಲಿದ್ದು, ಪ್ರತಿ ವಲಯದಲ್ಲಿ 100 ಆಹಾರ ಸ್ಥಳ, ಪ್ರತಿ ವಲಯದಲ್ಲಿಯೂ 500 ನಾಯಿಗಳಿಗೆ ದಿನಕ್ಕೆ ಒಂದು ಬಾರಿಯಂತೆ 365 ದಿನಗಳು ಆಹಾರ ನೀಡಲಾಗುತ್ತದೆ. ಈ ಲೆಕ್ಕಕ್ಕೆ ಪ್ರತಿ ನಾಯಿಗೆ ಪ್ರತಿದಿನ 19 ರು. ವೆಚ್ಚ ತಗಲುತ್ತದೆ. ಇದರಲ್ಲಿ 8 ರು. ದೈನಂದಿನ ಸಾರಿಗೆ, ಆಹಾರ ಪೂರೈಕೆ ಮತ್ತು ಸ್ಥಳ ಸ್ವಚ್ಛತೆಗೆ 11 ರು. ತಗಲುವ ವೆಚ್ಚ ಎಂದು ಮಾಹಿತಿ ನೀಡಿದ್ದಾರೆ.

ಚಿಕನ್ ರೈಸ್, ಬಿರಿಯಾನಿ ಎಂದು ಟೆಂಡರ್‌ನಲ್ಲಿ ನಮೂದಿಸಿಲ್ಲ

ಈಗಾಗಲೇ ಶೇ.70 ರಷ್ಟು ಸಂತಾನಹರಣ ಶಸ್ತ್ರ ಚಿಕಿತ್ಸೆಯ ಗುರಿ ತಲುಪಲಾಗಿದೆ. ಆದರೆ ಕೆಲವು ವಲಯಗಳು ಮತ್ತು ಕೆಲವು ವಾರ್ಡ್‌ಗಳಲ್ಲಿ ನಾಯಿಗಳನ್ನು ಹಿಡಿಯುವುದು ಅಥವಾ ಕಡಿತ ತಪ್ಪಿಸುವುದು ದೊಡ್ಡ ಸವಾಲಾಗಿದೆ. ಇಂತಹ ಪ್ರದೇಶಗಳಲ್ಲಿ ಬದಲಾವಣೆ ತರಲು ಆಹಾರ ನೀಡುವುದನ್ನು ಕೇಂದ್ರೀಕರಿಸಲಾಗಿದೆ. ನಾಯಿಗಳಿಗೆ ಕೋಳಿ ಮಾಂಸದ ತ್ಯಾಜ್ಯವನ್ನು ಬಳಸಿ ಆಹಾರ ಸಿದ್ಧಪಡಿಸಿ ನೀಡಲಾಗುವುದು. ಚಿಕನ್ ರೈಸ್, ಚಿಕನ್ ಬಿರಿಯಾನಿ ಎಂದು ಟೆಂಡರ್‌ನಲ್ಲಿ ನಮೂದಿಸಿಲ್ಲ. ಸಸ್ಯಾಹಾರವನ್ನು ಬೀದಿ ನಾಯಿಗಳು ತಿನ್ನುವುದಿಲ್ಲ ಎಂಬ ಕಾರಣ ಮಾಂಸಾಹಾರ ನೀಡಲಾಗುತ್ತಿದೆ. ಪ್ರತಿ ಒಂದು ನಾಯಿಗೆ ದಿನದ ಆಹಾರಕ್ಕೆ 11 ರು. ವೆಚ್ಚ ಮಾಡಲಾಗುತ್ತಿದೆ. ಆಹಾರ ಸಾಗಾಣಿಕೆ ವೆಚ್ಚ, ಸ್ವಚ್ಛತೆ, ಜಿಎಸ್ಟಿ ಸೇರಿದಂತೆ ಒಟ್ಟು ವೆಚ್ಚ 22.42 ರು. ಆಗಲಿದೆ. ಭಾರತ ಪ್ರಾಣಿ ಕಲ್ಯಾಣ ಮಂಡಳಿಯ ಕೈಪಿಡಿ, ಸಂಶೋಧನೆಯ ಶಿಫಾರಸ್ಸು ಆಧರಿಸಿ ಆಹಾರ ವಿತರಣೆ ಯೋಜನೆ ರೂಪಿಸಲಾಗಿದೆ ಎಂದು ಬಿಬಿಎಂಪಿ ಸ್ಪಷ್ಟಪಡಿಸಿದೆ.

ಸಮಾಚಾರ ಸಣ್ಣದಲ್ಲ

ಸ್ಟಾರ್ಕ್‌ಗೆ 100ನೇ ಟೆಸ್ಟ್

ಕಿಂಗ್‌ಟನ್: ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಯ ಮೂರನೇ ಪಂದ್ಯದಲ್ಲಿ ಕಣಕ್ಕಿಳಿದಿರುವ ಸ್ಟಾರ್ ವೇಗಿ ಮಿಚೆಲ್ ಸ್ಟಾರ್ಕ್ ಅವರು ಆಸ್ಟ್ರೇಲಿಯಾ ಪರ ಈ ಮಾದರಿಯಲ್ಲಿ 100 ಪಂದ್ಯಗಳನ್ನಾಡಿದ ಸಾಧನೆ ಮಾಡಿದ್ದಾರೆ. ಕಿಂಗ್ಸ್‌ಟನ್‌ನ ಸಬೀನಾ ಪಾರ್ಕ್ ಕ್ರೀಡಾಂಗಣದಲ್ಲಿ ಪಿಂಕ್ ಬಾಲ್ (ಹಗಲು ರಾತ್ರಿ) ಟೆಸ್ಟ್ ಪಂದ್ಯ ನಡೆಯುತ್ತಿದೆ. ಈ ಪಂದ್ಯದಲ್ಲಿ ಆಡುವ ಮೂಲಕ ನೂರು ಟೆಸ್ಟ್ ಪಂದ್ಯವಾಡಿದ ಆಸ್ಟ್ರೇಲಿಯಾದ ಎರಡನೇ ವೇಗಿ ಹಾಗೂ 16ನೇ ಆಟಗಾರ ಎಂಬ ದಾಖಲೆಗೆ ಸ್ಟಾರ್ಕ್ ಭಾಜನರಾಗಿದ್ದಾರೆ. ಇದುವರೆಗೆ 11 ಮಂದಿ ವೇಗದ ಬೌಲರ್‌ಗಳಷ್ಟೇ ಈ ಸಾಧನೆ ಮಾಡಿದ್ದಾರೆ. ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಇಂಗ್ಲೆಂಡ್‌ನ ದಿಗ್ಗಜ ಜೇಮ್ಸ್ ಆಂಡರ್ಸನ್, ಬರೋಬ್ಬರಿ 188 ಪಂದ್ಯಗಳಲ್ಲಿ ಆಡಿದ್ದಾರೆ. ಆಸ್ಟ್ರೇಲಿಯಾ ಪರ ಮಾಜಿ ವೇಗಿ ಗ್ರೇನ್ ಮೆಗ್ರಾಥ್ 124 ಪಂದ್ಯಗಳಲ್ಲಿ ಕಣಕ್ಕಿಳಿದಿದ್ದರು.

ಶೂಟಿಂಗ್ ವಿಶ್ವಕಪ್: ಭಾರತಕ್ಕೆ ನಿರಾಸೆ

ಲೊನಾಟೊ: ಭಾರತದ ಶೂಟರ್‌ಗಳಾದ ಲಕ್ಷಯ್ ಶೋರಾನ್ ಮತ್ತು ನೀರೂ ಧಂಡಾ ಅವರನ್ನು ಒಳಗೊಂಡ ಮಿಶ್ರ ತಂಡವು ಇಲ್ಲಿ ನಡೆದ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನ ಟ್ರ್ಯಾಪ್ ಸ್ಪರ್ಧೆಯಲ್ಲಿ ಪದಕದ ಸುತ್ತಿಗೇರಲು ವಿಫಲವಾಯಿತು. ಲಕ್ಷಯ್ (22, 19, 25) ಮತ್ತು (25, 24, 25) ಜೋಡಿಯು ಅರ್ಹತಾ ಸುತ್ತಿನಲ್ಲಿ 150ರಲ್ಲಿ 140 ಅಂಕ ಗಳಿಸಿ, ಸ್ಪರ್ಧೆಯಲ್ಲಿದ್ದ 54 ಜೋಡಿಗಳ ಪೈಕಿ ಹತ್ತನೇ ಸ್ಥಾನ ಪಡೆದು ನಿರಾಸೆ ಮೂಡಿಸಿತು. ಸ್ಪರ್ಧೆಯಲ್ಲಿದ್ದ ಭಾರತದ ಮತ್ತೊಂದು ಜೋಡಿ ಜೋರಾವರ್ ಸಿಂಗ್ ಸಂಧು (21, 23, 24) ಮತ್ತು ಪ್ರೀತಿ ರಜಾಕ್ (23, 24, 23) ಒಟ್ಟು 138 ಅಂಕಗಳೊಂದಿಗೆ 22ನೇ ಸ್ಥಾನ ಪಡೆದರು. ಇದಕ್ಕೂ ಮುನ್ನ ರಾಷ್ಟ್ರೀಯ ಗೇಮ್ಸ್ ಚಾಂಪಿಯನ್ ನೀರೂ ಧಂಡಾ ಮಹಿಳೆಯರ ವೈಯಕ್ತಿಕ ಟ್ರ್ಯಾಪ್ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಗಳಿಸಿ ಗಮನಾರ್ಹ ಸಾಧನೆ ತೋರಿದ್ದರು.

ಭಾರತಕ್ಕೆ ಗೆಲ್ಲಲು 193ರನ್ ಗುರಿ | ನಾಲ್ಕು ವಿಕೆಟ್ ನಷ್ಟಕ್ಕೆ 58 ರನ್

ಸೋಲಿನ ಸುಳಿಯಲ್ಲಿ ಭಾರತ

ಲಾರ್ಡ್ಸ್: ಇಲ್ಲಿ ನಡೆಯುತ್ತಿರುವ ಮೂರನೇ ಟೆಸ್ಟ್ ಪಂದ್ಯದ ಎರಡನೇ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್ ತಂಡವು 192 ರನ್ ಗಳಿಗೆ ಆಲೌಟ್ ಆಗಿ, ಟೀಮ್ ಇಂಡಿಯಾಗೆ 193 ರನ್‌ಗಳ ಗುರಿ ನೀಡಿದೆ. ನಾಲ್ಕನೇ ದಿನದ ಅಂತ್ಯಕ್ಕೆ ಗುರಿಯನ್ನು ಬೆನ್ನಟ್ಟಿದ ಭಾರತವು 4 ವಿಕೆಟ್ ನಷ್ಟಕ್ಕೆ 58 ರನ್ ಗಳಿಸಿ ಸೋಲಿನ ಭೀತಿಯಲ್ಲಿದೆ.

ಕೆ. ಎಲ್. ರಾಹುಲ್ 35 ರನ್ ಗಳಿಸಿ ಅಜೇಯರಾಗಿ ಕ್ರೀಸ್‌ನಲ್ಲಿದ್ದಾರೆ. ಭಾರತವು 3ನೇ ಟೆಸ್ಟ್‌ನ ಕೊನೆಯ ದಿನವಾದ ಸೋಮವಾರ ಇನ್ನೂ 135 ರನ್ ಗಳಿಸಬೇಕಾಗಿದೆ.

ಭಾರತ ತಂಡದ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಯಾವುದೇ ರನ್ ಗಳಿಸದೆ ಎರಡನೇ ಇನ್ನಿಂಗ್ಸ್‌ನ ಆರಂಭದಲ್ಲೇ ಪೆವಿಲಿಯನ್ ಸೇರಿದರು. ಕಳೆದ ಟೆಸ್ಟ್‌ನಲ್ಲಿ ಮಿಂಚಿದ್ದ ನಾಯಕ ಶುಭ್‌ಮನ್ ಗಿಲ್ ಕೇವಲ 6 ರನ್ ಗಳಿಸಿ ಔಟ್ ಆದರು. ನೈಟ್ ವಾಚ್‌ಮ್ಯಾನ್ ಆಗಿ ಬಂದಿದ್ದ ಆಕಾಶ್ ದೀಪ್ ಕೇವಲ 1 ರನ್ ಗಳಿಸಿ ವಿಕೆಟ್ ಕಳೆದುಕೊಂಡರು. ಕರುಣ್ ನಾಯರ್ ಕೂಡಾ ಬ್ಯಾಟಿಂಗ್ ವೈಫಲ್ಯ ಕಂಡು ಕೇವಲ 4 ರನ್ ಗಳಿಸಿ ಔಟ್ ಆದರು.

3ನೇ ದಿನ ಯಾವುದೇ ವಿಕೆಟ್ ನಷ್ಟವಿಲ್ಲದೆ 2 ರನ್‌ಗಳಿಸಿದ್ದ ಇಂಗ್ಲೆಂಡ್ ತಂಡ 4ನೇ ದಿನ ಆಟ ಮುಂದುವರಿಸಿ 22 ರನ್ ಗಳಾಗುಷ್ಟರಲ್ಲಿ ಬೆನ್ ಡಕೆಟ್ ವಿಕೆಟ್ ಕಳೆದುಕೊಂಡಿತು. ಮೊಹಮ್ಮದ್ ಸಿರಾಜ್ 12 ರನ್ ಗಳಿಸಿದ್ದ ಡಕೆಟ್‌ರನ್ನು ಔಟ್ ಮಾಡುವ ಮೂಲಕ ಇಂಗ್ಲೆಂಡ್‌ಗೆ ಮೊದಲ ಹೊಡೆತ ನೀಡಿದರು. 3ನೇ ಕ್ರಮಾಂಕದಲ್ಲಿ ಬಂದ ಒಲ್ಲಿ ಪೋಪ್ ಕೂಡ ಕೇವಲ 4 ರನ್ ಗಳಿಸಿ ಸಿರಾಜ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯೂ ಬಲೆಗೆ ಬಿದ್ದರು. ನಿತೀಶ್ ರೆಡ್ಡಿ 22 ರನ್ ಗಳಿಸಿದ್ದ ಜ್ಯಾಕ್ ಕ್ರಾಲಿಯನ್ನು ಪೆವಿಲಿಯನ್‌ಗೆ ಕಳುಹಿಸಿದರು, ನಂತರ ಬಂದ ಸ್ಫೋಟಕ ಬ್ಯಾಟರ್ ಬ್ರೂಕ್ 19 ಎಸೆತಗಳಲ್ಲಿ 23 ರನ್ ಗಳಿಸಿದರು, ಹ್ಯಾರಿ ಬ್ರೂಕ್ ಅವರನ್ನು ಆಕಾಶ್‌ದೀಪ್ ಕ್ಲೀನ್ ಬೌಲ್ಡ್ ಮಾಡಿದರು.

ಈ ಹಂತದಲ್ಲಿ ಒಂದಾದ ಜೋ ರೂಟ್-ಬೆನ್ ಸ್ಟೋಕ್ಸ್ 128 ಎಸೆತಗಳಲ್ಲಿ 67 ರನ್ ಸೇರಿಸಿದರು, ಅದು ಇಡೀ ಇನ್ನಿಂಗ್ಸ್‌ನಲ್ಲಿ ಗರಿಷ್ಠ ಜತೆಯಾಟವಾಯಿತು. ಈ ಹಂತದಲ್ಲಿ ಬೌಲಿಂಗ್ ಇಳಿದ ವಾಷಿಂಗ್ಟನ್ ಸುಂದರ್ ರೂಟ್ ವಿಕೆಟ್ ಪಡೆದು ಭಾರತಕ್ಕೆ ಭರ್ಜರಿ ಬ್ರೇಕ್ ನೀಡಿದರು. ರೂಟ್ 96 ಎಸೆತಗಳಲ್ಲಿ 1 ಸಿಕ್ಸರ್ ಸಹಿತ 40 ರನ್ ಗಳಿಸಿದರು

ವಾಷಿಂಗ್ಟನ್ ಸುಂದರ್ 4 ವಿಕೆಟ್: ಜೋ ರೂಟ್ ವಿಕೆಟ್ ಬೀಳುತ್ತಿದ್ದಂತೆ ಇಂಗ್ಲೆಂಡ್ ಪತನ ಆರಂಭವಾಯಿತು. 154 ರನ್‌ಗೆ 4 ವಿಕೆಟ್ ಕಳೆದುಕೊಂಡಿದ್ದ ಇಂಗ್ಲೆಂಡ್ ದಿಢೀರ್ ಕುಸಿತ ಕಂಡು 192ಕ್ಕೆ ಆಲೌಟ್ ಆಯಿತು. ಕೇವಲ 38 ರನ್ ಸೇರಿಸುವಷ್ಟರಲ್ಲಿ 6 ವಿಕೆಟ್ ಕಳೆದುಕೊಂಡಿತು. ವಾಷಿಂಗ್ಟನ್ ಸುಂದರ್ ಕೇವಲ 22 ರನ್ ನೀಡಿ 4 ವಿಕೆಟ್ ಪಡೆದು ಇಂಗ್ಲೆಂಡ್ ತಂಡವನ್ನು 192 ರನ್‌ಗೆ ಕಟ್ಟಿ ಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಬುಮ್ರಾ 2 ವಿಕೆಟ್ ಪಡೆದರು.

ಜೋ ರೂಟ್ ದಾಖಲೆ

ಇಂಗ್ಲೆಂಡ್ ತಂಡದ ಮಾಜಿ ನಾಯಕ ಜೋ ರೂಟ್ 96 ಎಸೆತಗಳಲ್ಲಿ 40 ರನ್‌ಗಳನ್ನು ಕಲೆ ಹಾಕುವ ಮೂಲಕ ಟೆಸ್ಟ್ ಕ್ರಿಕೆಟ್ ವೃತ್ತಿ ಜೀವನದ ನಾಲ್ಕನೇ ಕ್ರಮಾಂಕದಲ್ಲಿ 8000 ರನ್‌ಗಳನ್ನು ಪೂರ್ಣಗೊಳಿಸಿದ್ದಾರೆ, ಆ ಮೂಲಕ ತೆಂಡೂಲ್ಕರ್ ಅವರನ್ನು ಒಳಗೊಂಡ ಎಲೈಟ್ ಲಿಸ್ಟ್‌ಗೆ ಸೇರ್ಪಡೆಯಾಗಿದ್ದಾರೆ.

ಕುಂಬ್ಳೆ ದಾಖಲೆ ಮುರಿದ ಬುಮ್ರಾ

ಭಾರತದ ವೇಗಿ ಜಸ್‌ಪ್ರೀತ್ ಬುಮ್ರಾ ಟೆಸ್ಟ್ ಕ್ರಿಕೆಟ್‌ನಲ್ಲಿ ಮತ್ತೊಂದು ದಾಖಲೆ ಬರೆದಿದ್ದಾರೆ. ಇಂಗ್ಲೆಂಡ್ ವಿರುದ್ಧದ ಮೂರನೇ ಟೆಸ್ಟ್ ಪಂದ್ಯದ ದ್ವಿತೀಯ ಇನಿಂಗ್ಸ್‌ನಲ್ಲಿ ಭಾನುವಾರದಂದು ಸ್ಪಿನ್ ದಿಗ್ಗಜ ಅನಿಲ್ ಕುಂಬ್ಳೆ ಅವರ ದಾಖಲೆಯನ್ನು ಮುರಿದಿದ್ದಾರೆ. ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್ ರಾಷ್ಟ್ರಗಳಲ್ಲಿ ಅತೀ ಹೆಚ್ಚು ವಿಕೆಟ್ ಕಿತ್ತ ಭಾರತದ ಮೊದಲ ಬೌಲರ್ ಎನಿಸಿಕೊಂಡಿದ್ದು, ಆ ಮೂಲಕ ಸ್ಪಿನ್ ದಿಗ್ಗಜ ಅನಿಲ್ ಕುಂಬ್ಳೆ ದಾಖಲೆಯನ್ನು ಮುರಿದಿದ್ದಾರೆ.

ಪ್ರಥಮ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಪಡೆದ ಬುಮ್ರಾ, ದ್ವಿತೀಯ ಇನಿಂಗ್ಸ್‌ನಲ್ಲಿ ಎರಡು ವಿಕೆಟ್ ಪಡೆಯುವ ಮೂಲಕ ಈ ಸಾಧನೆ ಮಾಡಿದ್ದಾರೆ. ಪಂದ್ಯದ ದ್ವಿತೀಯ ಇನಿಂಗ್ಸ್ ಆರಂಭವಾಗುವ ಮುನ್ನ ಬುಮ್ರಾ ತಮ್ಮ ಟೆಸ್ಟ್ ವೃತ್ತಿ ಜೀವನದಲ್ಲಿ 221 ವಿಕೆಟ್‌ಗಳನ್ನು ಪಡೆದು ಕುಂಬ್ಳೆಗಿಂತ ಕೇವಲ ಒಂದು ವಿಕೆಟ್ ಹಿಂದಿದ್ದರು. ಆದರೆ ಕ್ರಿಸ್ ವೋಕ್ಸ್ ನಂತರ ಬ್ರೈಡನ್ ಕಾರ್ಸ್ ಅವರನ್ನು ಔಟ್ ಮಾಡುವ ಮೂಲಕ ಅವರು ಹೊಸ ಮೈಲುಗಲ್ಲು ತಲುಪಿದರು. ಇದೀಗ ಜಸ್‌ಪ್ರೀತ್ ಬುಮ್ರಾ ಸೇನಾ ದೇಶಗಳಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 223 ವಿಕೆಟ್‌ಗಳನ್ನು ಹೊಂದಿದ್ದಾರೆ, ಕುಂಬ್ಳೆ 222 ವಿಕೆಟ್‌ಗಳನ್ನು ಪಡೆದಿದ್ದಾರೆ.

5ನೇ ಪಂದ್ಯದಲ್ಲಿ ಇಂಗ್ಲೆಂಡ್‌ಗೆ ರೋಚಕ ಗೆಲುವು

ಪ್ರೀತ್ ಕೌರ್ ಪಡೆಗೆ ಸರಣಿ ಜಯ

ಎಜ್‌ಬಾಸ್ಟನ್: ಭಾರತದ ವಿರುದ್ಧ ನಡೆದ ಐದು ಪಂದ್ಯಗಳ ಮಹಿಳಾ ಟಿ20 ಕ್ರಿಕೆಟ್ ಸರಣಿಯ ಅಂತಿಮ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ಜಯದ ನಗೆ ಬೀರಿದೆ. ಹಾಗಾಗಿಯೂ ಟೀಮ್ ಇಂಡಿಯಾ ಇದೇ ಮೊದಲ ಬಾರಿಗೆ ಆಂಗ್ಲರ ನೆಲದಲ್ಲಿ ಟಿ20 ಸರಣಿ ಗೆದ್ದು ಐತಿಹಾಸಿಕ ಸಾಧನೆ ಮಾಡಿದೆ.

ಎಜ್‌ಬಾಸ್ಟನ್‌ನಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತವು ಶೆಫಾಲಿ ವರ್ಮಾ ಗಳಿಸಿದ ಅರ್ಧಶತಕದ ಬಲದಿಂದ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 167 ರನ್ ಗಳಿಸಿತ್ತು. ಇಂಗ್ಲೆಂಡ್ ಆ ಗುರಿಯನ್ನು ಅಂತಿಮ ಎಸೆತದಲ್ಲಿ ಮುಟ್ಟಿ ಸಂಭ್ರಮಿಸಿತು.

ಸ್ಪರ್ಧಾತ್ಮಕ ಮೊತ್ತದೆದುರು ಇನಿಂಗ್ಸ್ ಆರಂಭಿಸಿದ ಸೋಫಿಯಾ ಡಂಕ್ಲೇ (46 ರನ್) ಹಾಗೂ ಡೆನಿಯಲ್ ವ್ಯಾಟ್ (56 ರನ್) ಜೋಡಿ, ಮೊದಲ ವಿಕೆಟ್‌ಗೆ ಶತಕದ ಜೊತೆಯಾಟವಾಡಿತು. ಕೇವಲ 10.4 ಓವರ್‌ಗಳಲ್ಲೇ 101 ರನ್ ಸಿಡಿಸಿ ಸುಲಭ ಜಯದ ನಿರೀಕ್ಷೆ ಮೂಡಿಸಿತ್ತು. ಆದರೆ, ಹರ್ಮನ್ ಪ್ರೀತ್ ಕೌರ್ ಪಡೆ ಅಷ್ಟು ಸುಲಭಕ್ಕೆ ಮಣಿಯಲಿಲ್ಲ. ರಾಧಾ ಯಾದವ್ ಹಾಗೂ ದೀಪ್ತಿ ಶರ್ಮಾ, ಆರಂಭಿಕರಿಬ್ಬರನ್ನೂ 6 ರನ್ ಅಂತರದಲ್ಲಿ ಔಟ್ ಮಾಡಿದರು, ನಂತರ ಬಂದ ಮಾಯಾ ಬೌಚಿಯರ್ (16) ಕೂಡ ಬೇಗನೆ ಔಟಾದರು. ಹೀಗಾಗಿ, ಅತಿಥೇಯರ ರನ್ ಗಳಿಕೆ ವೇಗ ಕುಸಿಯಿತು.

ಲಾಸ್ಟ್ ಓವರ್ 'ಡ್ರಾಮಾ'

ಟಾಮಿ ಬ್ಯೂಮೌಂಟ್ ಪಡೆಗೆ ಗೆಲ್ಲಲು ಕೊನೇ ಓವರ್‌ನಲ್ಲಿ ಕೇವಲ 6 ರನ್ ಬೇಕಿತ್ತು. 30 ರನ್ ಗಳಿಸಿದ್ದ ಟಾಮಿ ಹಾಗೂ ಆ್ಯಮಿ ಜೋನ್ (10 ರನ್) ಕ್ರೀಸ್‌ನಲ್ಲಿದ್ದರು. ಅಂತಿಮ ಓವರ್‌ನ ಮೊದಲ ಮೂರು ಎಸೆತಗಳಲ್ಲಿ ಕೇವಲ 1 ರನ್ ನೀಡಿದ ಅರುಂಧತಿ ರೆಡ್ಡಿ, ಟಾಮಿ ಹಾಗೂ ಆ್ಯಮಿ ಇಬ್ಬರನ್ನೂ ಪೆವಿಲಿಯನ್‌ಗೆ ಅಟ್ಟಿದರು. ಹೀಗಾಗಿ ಕೊನೆಯ ಮೂರು ಎಸೆತಗಳಲ್ಲಿ 5 ರನ್ ಗಳಿಸುವ ಒತ್ತಡ ಅತಿಥೇಯರ ಮೇಲಿತ್ತು. ಆ ಸವಾಲನ್ನು ಮೀರಿದ ಸೋಫಿ ಎಕ್ಸೆಸ್ಟೋನ್ (4 ರನ್) ಜಯದ ರನ್ ಗಳಿಸಿದರು. ಈ ಪಂದ್ಯದ ಗೆಲುವಿನೊಂದಿಗೆ ಆಂಗ್ಲರ ಪಡೆ, ಸರಣಿ ಸೋಲಿನ ಅಂತರವನ್ನು 2-3ರ ಅಂತರಕ್ಕೆ ತಗ್ಗಿಸಿಕೊಂಡಿತು.

ಪಂದ್ಯದಲ್ಲಿ ಇಂಗ್ಲೆಂಡ್ ಪರ ಪ್ರಮುಖ ಮೂರು ವಿಕೆಟ್ ಪಡೆದು ಮಿಂಚಿದ ಚಾರ್ಲಿ ಡೀನ್ 'ಪಂದ್ಯಶ್ರೇಷ್ಠ' ಆಟಗಾರ್ತಿ ಎನಿಸಿದರು. ಟೂರ್ನಿಯಲ್ಲಿ ಒಟ್ಟು 10 ವಿಕೆಟ್‌ಗಳನ್ನು ಪಡೆದು, ಭಾರತ ಐತಿಹಾಸಿಕ ಜಯ ಸಾಧಿಸಲು ನೆರವಾದ ಶ್ರೀಚರಣಿ 'ಸರಣಿ ಶ್ರೇಷ್ಠ' ಆಟಗಾರ್ತಿ ಗೌರವಕ್ಕೆ ಭಾಜನರಾದರು.

ಅಲ್ಕರಾಜ್ ಹ್ಯಾಟ್ರಿಕ್ ಕನಸು ಭಗ್ನ, ಇಟಲಿ ಆಟಗಾರನಿಗೆ ಚೊಚ್ಚಲ ವಿಂಬಲ್ಡನ್ ಪ್ರಶಸ್ತಿ

ಸಿನ್ನರ್ ವಿಂಬಲ್ಡನ್ ವಿನ್ನರ್

ಲಂಡನ್: ವಿಶ್ವ ನಂಬರ್ ಒನ್ ಶ್ರೇಯಾಂಕಿತ ಜಾನಿಕ್ ಸಿನ್ನರ್ ವಿಂಬಲ್ಡನ್ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಗೆದ್ದು ಚೊಚ್ಚಲ ವಿಂಬಲ್ಡನ್ ಕಿರೀಟ ಗೆದ್ದುಕೊಂಡಿದ್ದಾರೆ.

ಲಂಡನ್‌ನ ವಿಂಬಲ್ಡನ್ ಸೆಂಟರ್ ಕೋರ್ಟ್‌ನಲ್ಲಿ ನಡೆದ ಫೈನಲ್ ಹಣಾಹಣಿಯಲ್ಲಿ ಇಟಲಿಯ ಸಿನ್ನರ್ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು 4-6, 6-4, 6-4, 6-4 ಸೆಟ್‌ಗಳಿಂದ ಸೋಲಿಸಿದರು.

ಕಳೆದ ಎರಡೂ ಆವೃತ್ತಿಗಳಲ್ಲಿ ದಿಗ್ಗಜ ನೊವಾಕ್ ಜೊಕೊವಿಕ್ ಅವರನ್ನು ಮಣಿಸಿ 2 ಬಾರಿ ವಿಂಬಲ್ಡನ್ ಪ್ರಶಸ್ತಿಗೆ ಮುತ್ತಿಟ್ಟಿದ್ದ ಅಲ್ಕರಾಜ್ ಅವರ ಸತತ 3ನೇ ಬಾರಿ ಚಾಂಪಿಯನ್ ಪಟ್ಟಕ್ಕೇರುವ ಕನಸು ಈಡೇರಲಿಲ್ಲ. ಆರಂಭದ ಸೆಟ್‌ನಲ್ಲಿ ಮುನ್ನಡೆ ಸಾಧಿಸಿದರೂ ಅಲ್ಕರಾಜ್ ಬಳಿಕ ಸಿನ್ನರ್ ಅವರ ಬಲವಾದ ಸರ್ವ್‌ಗಳ ಮುಂದೆ ಕಳೆಗುಂದಿದಂತೆ ಕಂಡುಬಂದರು.

ಮೊದಲ ಬಾರಿಗೆ ಫೈನಲ್ ತಲುಪಿರುವ ಸಿನ್ನರ್ ಅವರು ಜೊಕೊವಿಚ್ ಮಾದರಿಯ ತೀಕ್ಷ್ಣ ಹೊಡೆತಗಳ ಮೂಲಕ ಮೇಲುಗೈ ಸಾಧಿಸಿದರು. ತಮ್ಮ ಮಿಂಚಿನ ಆಟದಿಂದ ಸೆಂಟರ್ ಕೋರ್ಟ್ ಪ್ರೇಕ್ಷಕರ ಹೃದಯ ಗೆದ್ದು ಶೋಮ್ಯಾನ್ ಎನಿಸಿದ್ದ 22ರ ಹರೆಯದ ಅಲ್ಕರಾಜ್ ಭಾನುವಾರ ಸಿನ್ನರ್ ಮುಂದೆ ಇದೇ ಪ್ರದರ್ಶನ ನೀಡಲು ವಿಫಲರಾದರು.

ಇದರೊಂದಿಗೆ ಇಟಲಿಯ ಆಟಗಾರನ ವಿರುದ್ಧ 12 ಮುಖಾಮುಖಿಗಳಲ್ಲಿ ಎಂಟರಲ್ಲಿ ಜಯಗಳಿಸಿದ್ದ ಅಲ್ಕರಾಜ್ ಅವರ ಗೆಲುವಿನ ಓಟಕ್ಕೆ ಬ್ರೇಕ್ ಬಿದ್ದಿದೆ.

ಅಮಂಡಾ ಅನಿಸಿಮೊವಾಗೆ ಹೀನಾಯ ಸೋಲು

ಇಗಾ ಶ್ವಾಂಟೆಕ್‌ಗೆ ಕಿರೀಟ

ಲಂಡನ್: ನಿರೀಕ್ಷೆ ಮೀರಿ ಏಕಪಕ್ಷೀಯವಾದ ಫೈನಲ್‌ನಲ್ಲಿ ಎಂಟನೇ ಶ್ರೇಯಾಂಕದ ಇಗಾ ಶ್ವಾಂಟೆಕ್ 6-0, 6-0 ಅಂತರದಿಂದ ಅಮೆರಿಕದ ಅಮಂಡಾ ಅನಿಸಿಮೋವಾ ಅವರನ್ನು ಬಗ್ಗುಬಡಿದು ವಿಂಬಲ್ಡನ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಈ ಪ್ರಶಸ್ತಿ ಗೆದ್ದ ಪೋಲೆಂಡ್‌ನ ಮೊದಲ ಆಟಗಾರ್ತಿ ಎಂಬ ಹಿರಿಮೆಗೆ ಅವರು ಪಾತ್ರರಾದರು.

ಅನುಭವಿ ಶ್ವಾಂಟೆಕ್, 13ನೇ ಶ್ರೇಯಾಂಕದ ಅನಿಸಿಮೋವಾ ಅವರನ್ನು ಶನಿವಾರ ತಡರಾತ್ರಿ ಕೇವಲ 57 ನಿಮಿಷಗಳಲ್ಲಿ ಸೋಲಿಸಿದರು. ಸೆಂಟರ್ ಕೋರ್ಟ್ ಪ್ರೇಕ್ಷಕರು ಪಂದ್ಯ ಸಾಗಿದ ರೀತಿ ಕಂಡು ನಿಬ್ಬೆರಗಾದರು. ಸೆಮಿಫೈನಲ್‌ನಲ್ಲಿ ಅಗ್ರ ಕ್ರಮಾಂಕದ ಅರಿನಾ ಸಬಲೆಂಕಾ ಅವರಿಗೆ ಆಘಾತ ನೀಡಿ ಮೊದಲ ಬಾರಿ ಗ್ರ್ಯಾಂಡ್‌ಸ್ಲಾಮ್ ಫೈನಲ್ ತಲುಪಿದ ಅನಿಸಿಮೋವಾ ಹೋರಾಟ ತೋರಬಹುದೆಂಬ ನಿರೀಕ್ಷೆಯಿತ್ತು, ಆದರೆ ಅವರಿಗೆ ಈ ಪಂದ್ಯ ದುಃಸ್ವಪ್ನದಂತೆ ಕಾಡಿತು.

1911ರ ನಂತರ ವಿಂಬಲ್ಡನ್ ಫೈನಲ್ ಪಂದ್ಯವನ್ನು 6-0, 6-0ಯಿಂದ ಸೋತ ಮೊದಲ ಆಟಗಾರ್ತಿ ಎನ್ನುವ ಅನಪೇಕ್ಷಿತ ದಾಖಲೆ ಅನಿಸಿಮೋವಾ ಅವರದಾಯಿತು. 1988ರಲ್ಲಿ ಫ್ರೆಂಚ್ ಓಪನ್ ಫೈನಲ್‌ನಲ್ಲಿ ಸ್ಟೆಫಿ ಗ್ರಾಫ್ ಅವರು ನತಾಶಾ ಜ್ವರೇವಾ ಅವರನ್ನು ಇದೇ ರೀತಿ ಸದೆಬಡಿದ ನಂತರ, ಯಾವುದೇ ಗ್ರ್ಯಾಂಡ್‌ಸ್ಲಾಮ್ ಫೈನಲ್ ಈ ರೀತಿಯ ಸ್ಕೋರ್‌ಲೈನ್ ಕಂಡಿರಲಿಲ್ಲ.

ಒಟ್ಟಾರೆ ಫೈನಲ್ ಹಾದಿಯಲ್ಲಿ ಪೋಲೆಂಡ್ ತಾರೆ ಬಿಟ್ಟುಕೊಟ್ಟಿದ್ದು ಒಂದು ಸೆಟ್ ಮಾತ್ರ, ಆ ಮೂಲಕ ಮೂಲಕ ಅವರು ಇದುವರೆಗೆ ಆಡಿದ ಎಲ್ಲಾ ಆರೂ ಗ್ರ್ಯಾಂಡ್‌ಸ್ಲಾಮ್ ಫೈನಲ್‌ಗಳಲ್ಲಿ ಜಯಶಾಲಿ ಆದಂತಾಯಿತು.

ವಿಟಾಕೀಸ್

ಭೂಗತ ಲೋಕದಲ್ಲಿ ಕೆಡಿಯ ಅಬ್ಬರ

ನಿರ್ದೇಶಕ ಜೋಗಿ ಪ್ರೇಮ್ ಭೂಗತ ಲೋಕದ ಕಥೆಯನ್ನು ಲವ್ ಸ್ಟೋರಿ ಬೆರೆಸಿ ತೆರೆಯಲ್ಲಿ ಕಟ್ಟಿಕೊಡುವಲ್ಲಿ ನಿಸ್ಸೀಮರು. ಇದಕ್ಕೆ ಅವರ ಹಿಂದಿನ ಸಿನಿಮಾಗಳೇ ಸಾಕ್ಷಿ. ಅಂತೆಯೇ ಈಗ ಪ್ರೇಮ್ ಅಡ್ಡದಿಂದ ಬಂದಿರುವ ಕೆಡಿ ಸಖತ್ ಸದ್ದು ಮಾಡುತ್ತಿದ್ದಾನೆ. ಆರಂಭದಿಂದಲೂ ಕುತೂಹಲ ಮೂಡಿಸಿರುವ ಕೆಡಿ ಭೂಗತ ಲೋಕದ ಕಥೆಯನ್ನು ಹೊತ್ತು ಬರುತ್ತಿದೆ ಎಂಬುದು ಈಗಾಗಲೇ ತಿಳಿದಿದೆ. ಈಗ ಕೆಡಿಯ ಟೀಸರ್ ರಿಲೀಸ್ ಆಗಿದ್ದು ಹೊಸ ಹವಾ ಸೃಷ್ಟಿಸಿದೆ. ಅಂಡರ್‌ವಲ್ಡ್‌ನಲ್ಲಿ ಕೆಡಿ ಲಾಂಗ್ ಮಚ್ಚು ಬೀಸಿ ಸದ್ದು ಮಾಡುತ್ತಿದ್ದಾನೆ. ಕೆಡಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಪಂಚಭಾಷೆಗಳಲ್ಲಿ ಮೂಡಿಬರುತ್ತಿದೆ. ಕನ್ನಡ ಸೇರಿದಂತೆ ಹಿಂದಿ, ತಮಿಳು, ತೆಲುಗು, ಮಲೆಯಾಳಂ ಭಾಷೆಗಳಲ್ಲಿ ಟೀಸರ್ ರಿಲೀಸ್ ಆಗಿದ್ದು, ಮಿಲಿಯನ್‌ಗಟ್ಟಲೇ ವೀಕ್ಷಣೆ ಕಂಡು ಭರ್ಜರಿ ರೆಸ್ಪಾನ್ಸ್ ಪಡೆದುಕೊಳ್ಳುತ್ತಿದೆ.

ಕೆಡಿ ಎಪ್ಪತ್ತರ ದಶಕದಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ಮೂಡಿಬರುತ್ತಿರುವ ಚಿತ್ರ. ಧ್ರುವ ಸರ್ಜಾ ಡಾನ್ ಕಾಳಿದಾಸನಾಗಿ ಅಬ್ಬರಿಸಿದರೆ, ಸಂಜಯ್ ದತ್ ಖಳನಾಗಿ ಕಂಗೊಳಿಸಿದ್ದಾರೆ. ಬಾಲಿವುಡ್ ಬೆಡಗಿ ಶಿಲ್ಪಾ ಶೆಟ್ಟಿ ಸತ್ಯವತಿಯಾಗಿ ಹೊಸ ಅವತಾರಲ್ಲಿ ಮಿಂಚಿದ್ದಾರೆ. ವಿಶೇಷ ಎಂದರೆ ರಮೇಶ್ ಅರವಿಂದ್ ಈ ಹಿಂದೆ ಎಂದು ಕಂಡಿರದ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದು ಧರ್ಮ ಹೆಸರಿನ ಪಾತ್ರದಲ್ಲಿ ಡಾನ್ ಆಗಿ ಬಣ್ಣಹಚ್ಚಿದ್ದಾರೆ. ರವಿಮಾಮ ಅಣ್ಣಯಪ್ಪನ ಪಾತ್ರದಲ್ಲಿ ಸ್ಟೈಲಿಶ್ ಆಗಿ ಕಂಗೊಳಿಸಿದ್ದಾರೆ, ರೇಷ್ಮಾ ನಾಣಯ್ಯ ನಾಯಕಿಯಾಗಿ ಅಭಿನಯಿಸಿದ್ದು ಮಚ್ ಲಕ್ಷ್ಮಿ ಪಾತ್ರ ನಿಭಾಯಿಸಿದ್ದಾರೆ. ನೂರಾ ಫತೇಹಿ ಹಾಡೊಂದರಲ್ಲಿ ಭರ್ಜರಿಯಾಗಿ ಹೆಜ್ಜೆ ಹಾಕಿದ್ದು, ಅದು ಚಿತ್ರದ ಪ್ರಮುಖ ಹಾಡಾಗಿದೆ. ಇಡೀ ಸಿನಿಮಾ ರೆಟ್ರೋ ಲುಕ್‌ನಲ್ಲಿ ಸಾಗಲಿದ್ದು ಕೆ.ವಿ.ಎನ್. ಪ್ರೊಡಕ್ಷನ್ಸ್‌ನಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿದೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ವಿಕ್ರಾಂತ್ ರೋಣ ಖ್ಯಾತಿಯ ವಿಲಿಯಂ ಡೇವಿಡ್ ಛಾಯಾಗ್ರಹಣ ಈ ಚಿತ್ರಕ್ಕಿದೆ.

> ನಿರ್ದೇಶಕರೇ ನಮ್ಮ ಚಿತ್ರದ ನಿಜವಾದ ಹೀರೊ. ಪ್ರೇಮ್ ಅವರ ನಿರ್ದೇಶನದ ಚಿತ್ರಗಳಲ್ಲಿ ಹಾಡುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ. ಅದೇ ರೀತಿ ಈ ಚಿತ್ರದಲ್ಲೂ ಸಂಗೀತಕ್ಕೆ ಕಥೆ, ಮೇಕಿಂಗ್‌ನಷ್ಟೇ ಪ್ರಾಮುಖ್ಯತೆ ನೀಡಿದ್ದಾರೆ. ಶಿವ ಶಿವ.. ಹಾಡಲ್ಲಿ ಕಣ್ಣು ಕೋರೈಸುವ ದೃಶ್ಯ ವೈಭವದ ಜತೆಗೆ ಅದ್ದೂರಿ ಮೇಕಿಂಗ್ ಇದೆ. ಯಾವುದೇ ಬಾಲಿವುಡ್ ಹಾಡಿಗೂ ಕಮ್ಮಿಯಿಲ್ಲದಂತೆ ಮೂಡಿಬಂದಿದೆ.
>
> -ಧ್ರುವ ಸರ್ಜಾ

> ಕ್ಯಾರೆಕ್ಟರ್ ಇಂಟ್ರಡಕ್ಷನ್ ಟೀಸರ್ ಮೂಲಕ ಎಲ್ಲಾ ಪಾತ್ರಗಳನ್ನು ತೋರಿಸಿದ್ದೇವೆ. ಚಿತ್ರದಲ್ಲಿ ಆ್ಯಕ್ಷನ್ ಜತೆಗೆ ಫ್ಯಾಮಿಲಿ ಎಮೋಷನ್ ಕೂಡ ಬೆರೆತಿದೆ. ಧ್ರುವ, ರವಿಚಂದ್ರನ್, ಶಿಲ್ಪಾ ಶೆಟ್ಟಿ ಹೀಗೆ ಎಲ್ಲರೈ ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈ ಪಾತ್ರಗಳನ್ನು ಡಿಸೈನ್ ಮಾಡಲು ಪ್ರೇಮ್ ಮೂರು ವರ್ಷಗಳಿಂದ ಶ್ರಮಿಸಿದ್ದಾರೆ. ಚಿತ್ರದಲ್ಲಿ ಎಲ್ಲರೂ ಮಚ್ಚು ಹಿಡಿದಿದ್ದಾರೆ. ಅವರು ಮಚ್ಚು ಹಿಡಿಯುವುದಕ್ಕೆ ಕಾರಣ ಸತ್ಯವತಿ, ಅದು ಯಾಕೆ ಎಂಬುದನ್ನು ಚಿತ್ರ ನೋಡಿಯೇ ತಿಳಿಯಬೇಕು.
>
> -ವೆಂಕಟ್ ನಾರಾಯಣ್ ನಿರ್ಮಾಪಕ

ಜಾಲಿ ಡೇಸ್ ಹುಡುಗನ 31 ಡೇಸ್

ಜಾಲಿಡೇಸ್ ಚಿತ್ರದ ಮೂಲಕ ಖ್ಯಾತಿ ಪಡೆದ ನಟ ನಿರಂಜನ್ ಶೆಟ್ಟಿ ಮತ್ತೊಂದು ಲವ್ ಸ್ಟೋರಿಯ ಸಿನಿಮಾದಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. 31 ಡೇಸ್ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದು, ಸದ್ಯ ಈ ಚಿತ್ರದ ಹಾಡುಗಳು ಬಿಡುಗಡೆಯಾಗಿವೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ, ಸಂಗೀತ ನಿರ್ದೇಶಕ ಗುರುಕಿರಣ್, ನಟಿ ಮತ್ತು ನಿರ್ಮಾಪಕಿ ಗೀತಾಪ್ರಿಯಾ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ವಿ. ಮನೋಹರ್ ಹಾಡುಗಳಿಗೆ ಸಾಹಿತ್ಯ ಬರೆದಿದ್ದು, ಸಂಗೀತ ಸಂಯೋಜಿಸಿದ್ದಾರೆ. 31 ಡೇಸ್ ವಿ.ಮನೋಹರ್ ಸಂಗೀತ ನಿರ್ದೇಶನ ಮಾಡಿರುವ ನೂರ ಐವತ್ತನೇ ಚಿತ್ರವಾಗಿರುವುದು ವಿಶೇಷ.

ಸಿನಿಮಾ ನಿರ್ದೇಶಕನಾಗಲು ಬಂದ ನಾನು, ಸಂಗೀತ ನಿರ್ದೇಶಕನಾದೆ, ಇದಕ್ಕೆ ಉಪೇಂದ್ರ ಅವರು ಕಾರಣ. ತರ್ಲೆ ನನ್ಮಗ ನನ್ನ ಸಂಗೀತ ಸಂಯೋಜನೆಯ ಮೊದಲ ಚಿತ್ರ. 31 ಡೇಸ್ ನೂರ ಐವತ್ತನೇ ಚಿತ್ರವಾಗಿದೆ. ಈ ಚಿತ್ರದಲ್ಲಿ ಹನ್ನೊಂದು ಹಾಡುಗಳಿದ್ದು ನಾಡಿನ ಜನಪ್ರಿಯ ಗಾಯಕ, ಗಾಯಕಿಯರು ಹಾಡಿಗೆ ದನಿಯಾಗಿದ್ದಾರೆ ಎಂದು ವಿ.ಮನೋಹರ್ ಹೇಳಿದರು.

ಜಾಲಿಡೇಸ್ ಚಿತ್ರದ ಮೂಲಕ ನಾನು ನಾಯಕನಾದೆ, 31 ಡೇಸ್ ನಾನು ನಾಯಕನಾಗಿ ನಟಿಸಿರುವ ಎಂಟನೇ ಚಿತ್ರ. ನಾನು ಚಿತ್ರಕಲೆ ಕಲಿತ ಜಾಗದಲ್ಲಿ ನನ್ನ ಸಿನಿಮಾದ ಹಾಡುಗಳು ಬಿಡುಗಡೆಯಾಗಿರುವುದು ಖುಷಿಕೊಟ್ಟಿದೆ ಎಂದು ನಾಯಕ ನಿರಂಜನ್ ಶೆಟ್ಟಿ ಸಂತಸದಿಂದ ನುಡಿದರು. ಈ ಹಿಂದೆ ಹಲವು ಸಿನಿಮಾಗಳಿಗೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದೆ, ಈ ಚಿತ್ರದ ಮೂಲಕ ನಿರ್ದೇಶಕನಾಗಿ ಗುರುತಿಸಿಕೊಳ್ಳುತ್ತಿದ್ದೇನೆ. ಇದೊಂದು ಹೈ ವೋಲ್ಟೇಜ್ ಲವ್ ಸ್ಟೋರಿಯಾಗಿದೆ ಎಂದು ನಿರ್ದೇಶಕ ರಾಜ ರವಿಕುಮಾರ್ ತಿಳಿಸಿದರು. ಪ್ರಜ್ವಲಿ ಸುವರ್ಣ ನಾಯಕಿಯಾಗಿ ಕಾಣಿಸಿಕೊಂಡಿದ್ದು, ಉಳಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ನಾಗವೇಣಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.



ಹೊಸ ಪ್ರೇಮಕಥೆ ಹೊತ್ತುಬಂದ ಸುನಿ

ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ ಹೇಳಿ ಮನಗೆದ್ದ ನಿರ್ದೇಶಕ ಸಿಂಪಲ್ ಸುನಿ ಹಲವು ಹೊಸ ಪ್ರತಿಭೆಗಳನ್ನು ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ. ಈಗ ಮೋಡ ಕವಿದ ವಾತಾವರಣ ಚಿತ್ರವನ್ನು ನಿರ್ದೇಶಿಸುತ್ತಿದ್ದು, ಈ ಚಿತ್ರದ ಮೂಲಕ ಶೀಲಮ್ ಎಂಬ ನಾಯಕನನ್ನು ಚಂದನವಕ್ಕೆ ಪರಿಚಯಿಸುತ್ತಿದ್ದಾರೆ. ಈ ಹಿಂದೆ ಹಲವು ಚಿತ್ರಗಳಲ್ಲಿ ಸಣ್ಣ ಪುಟ್ಟ ಪಾತ್ರಗಳಲ್ಲೂ ಕಾಣಿಸಿಕೊಂಡಿರುವ ಶೀಲಮ್ ಈ ಚಿತ್ರದಲ್ಲಿ ನಾಯಕನಾಗಿ ಅದೃಷ್ಟ ಪರೀಕ್ಷೆಗಿಳಿಸಿದ್ದಾರೆ.

ಸೈಂಟಿಫಿಕ್ ಫಿಕ್ಷನ್ ಲವ್ ಸ್ಟೋರಿ ಚಿತ್ರದಲ್ಲಿದ್ದು ಸುನಿ ಮತ್ತೊಂದು ಹೊಸತನದ ಪ್ರೇಮಕಥೆಯನ್ನು ಹೊತ್ತು ಬರುತ್ತಿದ್ದಾರೆ. ಸದ್ದಿಲ್ಲದೆ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ. ಸಿಂಪಲ್ ಸುನಿ ನಿರ್ದೇಶನದ ಸಿನಿಮಾ ಮೂಲಕ ನಾನು ನಾಯಕನಾಗಿ ಪರಿಚಯವಾಗುತ್ತಿರುವುದು ಖುಷಿ ಕೊಟ್ಟಿದೆ. ಒಂದೊಳ್ಳೆಯ ತಂಡದ ಜತೆಗೆ ಕೆಲಸ ಮಾಡಿದ ಸಂತಸವಿದೆ ಎಂದು ಶೀಲಮ್ ಹೇಳಿದರು.

> ಒಂದು ಸರಳ ಪ್ರೇಮಕಥೆ ನನ್ನ ಜೀವನದ ಹೊಸ ಮೈಲುಗಲ್ಲಾಯಿತು. ನನ್ನ ಸಿನಿ ಜೀವನದಲ್ಲಿ ಹೊಸತನವನ್ನು ತಂದುಕೊಟ್ಟಿತು. ಆ ಖುಷಿಯಲ್ಲಿ ಮೋಡ ಕವಿದ ವಾತಾವರಣ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದೇನೆ. ಈ ಚಿತ್ರದ ಮೂಲಕ ಹೊಸ ನಾಯಕನನ್ನು ಪರಿಚಯಿಸುತ್ತಿದ್ದೇನೆ.
>
> -ಸಿಂಪಲ್ ಸುನಿ ನಿರ್ದೇಶಕ

ಇದು ನನ್ನ ಕನಸಿನ ಸಿನಿಮಾ. ಸುನಿ ಅವರ ಜತೆಗೆ ಕೆಲಸ ಮಾಡಬೇಕು ಅಂದುಕೊಂಡಿದ್ದೆ ಈ ಚಿತ್ರದ ಮೂಲಕ ಅದು ಸಾಧ್ಯವಾಗಿದೆ ಎಂದು ಸಾತ್ವಿಕಾ ರಾವ್ ಸಂತಸದಿಂದ ನುಡಿದರು. ಒಂದು ಸರಳ ಪ್ರೇಮಕಥೆ ಸಿನಿಮಾವನ್ನು ನಿರ್ಮಾಣ ಮಾಡಿದ್ದ ರಾಮ್ ಮೂವೀಸ್ ಈ ಚಿತ್ರಕ್ಕೂ ಬಂಡವಾಳ ಹೂಡಿದೆ. ಸಂತೋಷ್ ರೈ ಪಾತಾಜೆ ಛಾಯಾಗ್ರಹಣ, ಜೂಡಾ ಸ್ಯಾಂಡಿ ಹಾಗೂ ಜೇಡ್ ಸಂಗೀತ ನಿರ್ದೇಶನ, ಆದಿತ್ಯ ಕಶ್ಯಪ್ ಸಂಕಲನ ಈ ಸಿನಿಮಾಗಿದೆ.

ಮಹಾನ್‌ನಲ್ಲಿ ರಾಧಿಕಾ

ಪಿ.ಸಿ.ಶೇಖರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಮಹಾನ್ ಚಿತ್ರದಲ್ಲಿ ವಿಜಯ ರಾಘವೇಂದ್ರ, ನಾಯಕನಾಗಿ ನಟಿಸುತ್ತಿದ್ದಾರೆ, ಈ ಸಿನಿಮಾದಲ್ಲಿ ನಾಯಕಿಯಾಗಿ ಯಾರು ನಟಿಸಬಹುದು ಎಂಬ ಕುತೂಹಲವಿತ್ತು. ಅದಕ್ಕೆ ಈಗ ಉತ್ತರ ಸಿಕ್ಕಿದೆ. ಮಹಾನ್‌ನಲ್ಲಿ ರಂಗಿತರಂಗ ಖ್ಯಾತಿಯ ರಾಧಿಕಾ ನಾರಾಯಣ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ವಿಶೇಷ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಿತ್ರತಂಡ ರಾಧಿಕಾ ನಾರಾಯಣ್ ಅವರನ್ನು ಪರಿಚಯಿಸಿದೆ.

ಪಿ.ಸಿ.ಶೇಖರ್ ಅವರ ನಿರ್ದೇಶನದ ಸಿನಿಮಾಗಳಲ್ಲಿ ನಟಿಸಬೇಕೆಂಬ ಆಸೆಯಿತ್ತು. ಆದರೆ ಇಷ್ಟು ದಿನ ಅದು ಸಾಧ್ಯವಾಗಿರಲಿಲ್ಲ. ಈಗ ಅವರ ನಿರ್ದೇಶನದ ಮಹಾನ್ ಚಿತ್ರದಲ್ಲಿ ಅಭಿನಯಿಸುತ್ತಿದ್ದೇನೆ. ಸಾಮಾಜಿಕ ಕಳಕಳಿ ಹೊಂದಿರುವ ಈ ಚಿತ್ರದ ಭಾಗವಾಗಿರುವುದು ಬಹಳ ಖುಷಿಕೊಟ್ಟಿದೆ. ಈ ಚಿತ್ರದಲ್ಲಿ ನಾನು ಹಳ್ಳಿಹುಡುಗಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ ಎಂದು ರಾಧಿಕಾ ನಾರಾಯಣ್ ತಮ್ಮ ಪಾತ್ರದ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ಈ ಹಿಂದೆ ರಾಧಿಕಾ ನಾರಾಯಣ್ ಅವರ ಜತೆಗೆ ಎರಡು ಮೂರು ಕಥೆಗಳನ್ನು ಚರ್ಚಿಸಿದ್ದೆ. ಆ ಸಂದರ್ಭ ಅವರು ಬೇರೆ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದರಿಂದ ನಮ್ಮ ನಟಿಸಲು ಸಾಧ್ಯವಾಗಿರಲಿಲ್ಲ. ಈಗ ನಾನು ನಿರ್ದೇಶನ ಮಾಡುತ್ತಿರುವ ಮಹಾನ್ ಚಿತ್ರದಲ್ಲಿ ರಾಧಿಕಾ ನಟಿಸುತ್ತಿರುವುದು ಸಂಸತವಾಗಿದೆ, ಸಿನಿಮಾದಲ್ಲಿ ಅವರ ಪಾತ್ರ ಕೂಡ ವಿಭಿನ್ನವಾಗಿರಲಿದೆ ಎನ್ನುತ್ತಾರೆ ನಿರ್ದೇಶಕ ಪಿ.ಸಿ.ಶೇಖರ್. ಮಹಾನ್ ರೈತರ ಕುರಿತಾದ ಚಿತ್ರವಾಗಿದ್ದು ರೈತರ ಬದುಕು ಬವಣೆ ಹೋರಾಟದ ಕುರಿತ ಕಥೆ ತೆರೆಯಲ್ಲಿ ಸಾಗಲಿದೆ. ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಈ ಸಿನಿಮಾದ ಪೋಸ್ಟರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದ್ದಾರೆ.